ಸಂಕ್ರಮಣ

DEVU PATTAR
GUTTIPETH,
SHAHAPUR-585223

೨೨

With compliments from

ಚಂದ್ರಶೇಖರ ಪಾಟೀಲ

[illegible]

ಸಂಕ್ರಮಣ-೪೪

*

ಚಂದ್ರಶೇಖರ ಪಾಟೀಲ

ಗಿರಡ್ಡಿ ಗೋವಿಂದರಾಜ

ಸಿದ್ಧಲಿಂಗ ಪಟ್ಟಣಶೆಟ್ಟಿ

*

ಸಂಕ್ರಮಣ ಪ್ರಕಾಶನ, ಧಾರವಾಡ-೪

ಸಂಕ್ರಮಣ-೪೪
ವರ್ಷದ ಆರು ಪ್ರಕಟನೆಗಳಿಗೆ ಆರು ರೂಪಾಯಿಗಳು
ವಿಳಾಸ : 'ಸಂಕ್ರಮಣ', ಧಾರವಾಡ-೪
ಪ್ರಕಾಶ ಮುದ್ರಣಾಲಯ, ಧಾರವಾಡ-೧

ಈ ಸಂಚಿಕೆಯಲ್ಲಿ

*

'ಚಿರಂಜೀವಿ'

೫ ಕೊನೆ : ಸಣ್ಣಕತೆ

ತಿಪ್ಪೇಸ್ವಾಮಿ

೧೪ ಅಜ್ಞೇಯರ ಎರಡು ಕವಿತೆಗಳು

ಹ. ವೆಂ. ಕಾಖಂಡಿಕಿ

೨೦ ಷಾಹಜಾನನಿಗೆ : ಕವನ

ಎಸ್. ಎಸ್. ಶಿವಸ್ವಾಮಿ

೨೧ ಪ್ರಸಿದ್ಧ ಪುರುಷೋಭವ : ರೇಡಿಯೊ ನಾಟಕ

ಸೋಮಶೇಖರ ಇಮ್ರಾಪೂರ

೪೪ ದುಮ್ಮಜಲಿನ ಮನಿ : ಕವನ

ವಿ. ಜಿ. ಭಟ್ಟ

೪೬ ದಾಟಿಹೋದ ಕುತ್ತು : ಕವನ

ಶಾಂತಿನಾಥ ದೇಸಾಯಿ

೪೯ ಕಾರ್ನಾಡರ 'ಹಯವದನ' : ಸಂದರ್ಶನ

ವೆಂಕಟಗಿರಿ ಕಡೇಕಾರ್

೫೭ ಕಟ್ಟಿದ್ದನ್ನು ಉರುಳಿಸಬೇಡ : ಕವನ

ಡಿ. ಲಿಂಗಯ್ಯ

೫೯ ಬ್ರಹ್ಮಚಾರಿ : ಕವನ

ಶಂಕರ ಮೊಕಾಶಿ ಪುಣೇಕರ

೬೧ ಕನ್ನಡ ಕಾದಂಬರಿ–೧೯೬೭–೭೦ : ಅವಲೋಕನ

ಸಿದ್ಧಲಿಂಗ ಪಟ್ಟಣಶೆಟ್ಟಿ

೭೧ ಎರಡು ಕವನಗಳು

ಈ ಸಂಚಿಕೆಯ ಲೇಖಕರು

*

'ಚಿರಂಜೀವಿ'
ಕೇರಾಫ್ ಪ್ರೊ. ಗಿರಡ್ಡಿ ಗೋವಿಂದರಾಜ, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ

ತಿಪ್ಪೇಸ್ವಾಮಿ
ಹಿಂದೀ ಪ್ರಾಧ್ಯಾಪಕ, ಕಲ್ಪತರು ಕಾಲೇಜು, ತಿಪಟೂರು

ಹ. ವೆಂ. ಕಾಖಂಡಿಕಿ
ಇಂಗ್ಲಿಷ್ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

ಎಸ್. ಎನ್. ಶಿವಸ್ವಾಮಿ
೧೨/೫, ಹೈದ್ರಾಬಾದ್ ಹೋಂ, ನೇಪಿಯರ್ ಸೀ ರೋಡ್, ಮುಂಬಯಿ-೬

ಸೋಮಶೇಖರ ಇಮ್ರಾಪೂರ
ಕನ್ನಡ ಪ್ರಾಧ್ಯಾಪಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

ವಿ. ಜಿ. ಭಟ್ಟ
ಸಾಧನಕೇರಿ, ಧಾರವಾಡ-೧

ಶಾಂತಿನಾಥ ದೇಸಾಯಿ
ಇಂಗ್ಲಿಷ್ ಪ್ರಾಧ್ಯಾಪಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

ವೆಂಕಟಗಿರಿ ಕಡೇಕಾರ್
ವಸಂತವಿಹಾರ, ಹೊಸನಗರ ರಸ್ತೆ, ಸಾಗರ, ಶಿವಮೊಗ್ಗ

ಡಿ. ಲಿಂಗಯ್ಯ
೧೪೭, ೬ನೇ ಕ್ರಾಸ್, ಆಜಾದ್ ನಗರ, ಬೆಂಗಳೂರು-೧೮

ಶಂಕರ ಮೊಕಾಶಿ ಪುಣೇಕರ
ಇಂಗ್ಲಿಷ್ ಪ್ರಾಧ್ಯಾಪಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

ಸಿದ್ಧಲಿಂಗ ಪಟ್ಟಣಶೆಟ್ಟಿ
ಹಿಂದೀ ಪ್ರಾಧ್ಯಾಪಕ, ಕರ್ನಾಟಕ ಕಾಲೇಜು, ಧಾರವಾಡ-೧

"ಚಿರಂಜೀವಿ"

ಕೊನೆ

ಸಣ್ಣ ಕತೆ

ಸರಿಯಾಗಿ ಆರೂವರೆಘಂಟೆಗೆ ಮನೆ ನೋಡಲು ಬರಬೇಕೆಂದು ಆ ಂದಿಗೆ ಹೇಳಿದ್ದೆ. ಈಗ ಘಂಟೆ ಸರಿಯಾಗಿ ಆರೂವರೆ. ಮನೆಯ ಮುಂದಿನ ನ್ನ ಮೆಂಚಿನ ಹಜಾರದಲ್ಲಿ ಕುಳಿತು ಆ ಜನಗಳ ಬರವನ್ನೇ ಎದುರುನೋಡುತ್ತ ಳಿತಿದ್ದೇನೆ. ತಲೆಯಲ್ಲೆಲ್ಲಾ ಒಂದೇ ಯೋಚನೆ : ಈ ದಿವಸದ ಕಾರ್ಯಕ್ರಮ ುಶಸ್ವಿಯಾದೀತೇ ಎಂಬುದು. ಅಕ್ಕಪಕ್ಕದ ಬಾಗಿಲು-ಕಿಟಕಿಗಳನ್ನೇ ನೋಡು ೇನೆ. ಎದುರಿನ ವರಾಂಡದಲ್ಲಿ ಸಿಮೆಂಟು-ಕಬ್ಬಿಣ ಸುರಿದು ಬಲವಾಗಿ ಕಟ್ಟಿ ದ್ದ ಎರಡು ಕಂಭಗಳನ್ನೇ ನೆನಪಿಗೆ ತಂದುಕೊಳ್ಳುತ್ತೇನೆ. ಎಂಟುಹತ್ತು ಾವಿರದ ಮನೆಗೆ ಈ ಎರಡು ಕಂಭ ಕಟ್ಟುವುದಕ್ಕೇ ಎರಡು ಸಾವಿರ ೂಪಾಯಿ ಖರ್ಚಾಗಿ ಹೋಯಿತು. "ಮುಂದೆ ಎರಡು ಮೂರು ಮಹಡಿ ಟ್ಟಬೇಕಾಗಿ ಬಂದಾಗ ಈ ರೀತಿ ಹಾಕಿದ್ದು ಉಪಯೋಗಕ್ಕೆ ಬರತ್ತೆ. ಭದ್ರ ಾಗಿರತ್ತೆ." ಎಂದು ಕಂಟ್ರಾಕ್ಟರ ಈ ಕೆಲಸಕ್ಕೆ ವಿವರಣೆ ಕೊಟ್ಟಿದ್ದ. "ನಿಂಗೆ ುದ್ಧಿ ಇಲ್ಲ. ಹುಚ್ಚ, ನೀನು. ಈ ಪುಟಕೋಸಿ ಮನೆಗೆ, ಮುಂದಿನ ಕಂಭಕ್ಕೇಂತ ರಡು ಸಾವಿರ ಖರ್ಚು ಮಾಡೋದು ದಂಡ," ಎದಿದ್ದರು ಒಬ್ಬಿಬ್ಬ ಆತ್ಮೀ ರುರು, ಆದರೂ ಯಾವುದೋ ಕ್ಷಣದಲ್ಲಿ ಕಂಟ್ರಾಕ್ಟರನಿಗೆ ಎರಡು ಸಾವಿರ ತ್ತಿದ್ದೆ. ಕಂಭಗಳ ಮೇಲೆ ಈಗ ಅಲ್ಲಲ್ಲಿ ಕಚ್ಚು ಬಿದ್ದಿದೆ. ಗಾರೆ ಅಲ್ಲಲ್ಲಿ ಕಿತ್ತು ಂದಿದೆ. ಗಡಿಯಾರ ನೋಡಿಕೊಳ್ಳುತ್ತೇನೆ. ಆರೂವರೆ ತ್ತಾಗುತ್ತ ಬಂದಿತ್ತು. ಹಜಾರದಲ್ಲಿಯೇ ಶ್ರೀನಿವಾಸ ಆಡಿಕೊಳ್ಳುತ್ತಲಿದ್ದಾನೆ. ಅವನು ಒಂದೇಕಡೆ ುಳಿತು ಹೀಗೆ ಆಡಿಕೊಳ್ಳುವುದೇ ಅಪರೂಪ. ಮನೆಯ ಈ ತುದಿಯಿಂದ ಆ ತುದಿಯವರೆಗೆ ಓಡಾಡುತ್ತ, ಕೈಗೆ ಸಿಕ್ಕಿದ್ದನ್ನು ಕಿತ್ತೆಸೆಯುವುದೇ ಅವನ

ದಿನಚರಿ. ಒಬ್ಬರಿಗಾಗಿ ಹೀಗೆ ಕಾಯುವುದು ಬೇಜಾರಿನ ಕೆಲಸ ಅನ್ನಿಸುತ್ತದೆ. ನಿಂತು ಕೈಕಾಲು ರಿಲ್ಯಾಕ್ಸ್ ಮಾಡಿಸಿ, ಅತ್ತಿತ್ತ ಓಡಾಡುತ್ತೇನೆ. ಆರೂವರೆಯೆಂದು ಆ ಮನುಷ್ಯನಿಗೆ ಹೇಳಿದ್ದು ಅವನ ನೆನಪಿನಲ್ಲಿದೆಯೋ ಇಲ್ಲವೋ? ಅಥವ ಅವನ ಜನ ಅವನಿಗೆ ಸಿಕ್ಕಿದರೋ ಇಲ್ಲವೋ? ಥೂ, ಈ ಜನಕ್ಕೆ ಒಂದು ಮಾತು, ಒಂದು ನಿಯತ್ತು ಇಲ್ಲ ಅಂದುಕೊಳ್ಳುತ್ತೇನೆ. ಅದಕ್ಕೇ ಈ ರೀತಿಯ ಕಂಡಕಂಡವರಿಗೆ ಇಂತಹ ದೊಡ್ಡ ಕೆಲಸಗಳನ್ನು ಅಂಟಿಸಬಾರದು. ಇವರೆಲ್ಲಾ ಒಂದು ರೀತಿಯ ಅಡ್ಡಕಸುಬಿಗಳು. ಹೆಚ್ಚು ಕಡಿಮೆ ಹೊಟ್ಟೆತುಂಬುವಷ್ಟು ಹಣ ತರುವ ಯಾವ ಕೆಲಸವನ್ನಾದರೂ ಅವರು ಮಾಡುತ್ತಾರೆ. ಹತ್ತು ರೂಪಾಯಿ ಹೆಚ್ಚಿಗೆ ಸಂಪಾದನೆಯಾಗುವಹಾಗಿದ್ದರೆ ಐದು ರೂಪಾಯಿನವ ರನ್ನು 'ನಾಳೆ ನೋಡುವ' ಎಂದು ಅಸಡ್ಡೆ ಮಾಡುತ್ತಾರೆ. ಆದರೆ ಸಂಕೋಚ ಪಡುವ ಮಂದಿಯಲ್ಲ ಇವರು, ಒಂದು ರೂಪಾಯಿ ಸಂಪಾದನೆಯಾಗುವ ಹಾಗಿದ್ದರೆ ಸಾಕು. ಮಂದಿಯ ಹಿಂದೆ ಹಿಂದೆ ತಿರುಗುತ್ತಾರೆ. ಎಂದೆಲ್ಲಾ ಪದರ ಪದರವಾಗಿ ಅಂದುಕೊಳ್ಳುತ್ತೇನೆ.

ಆರೂಮುಕ್ಕಾಲಿಗೆ ಹೊರಬಾಗಿಲು ಸದ್ದಾಗುತ್ತದೆ. ಚಪ್ಪಲಿಯ ಚರ ಚರ ಸದ್ದು. ಥಟ್ಟನೆ ನಡೆದು ವರಾಂಡಕ್ಕೆ ಬರುತ್ತೇನೆ ಎದುರಿಗೆ ಅವನ ಪರಿಚಿತ ಮುಖ: ಉಳಿದವರನ್ನು ಕರೆದುಕೊಂಡು ಬರುತ್ತೇನೆ ಎಂದು ನನಗೆ ಹೇಳಿದ್ದವನು. ಅವನ ಹಿಂದೆ ಗಂಡ–ಹೆಂಡತಿ ಇದ್ದಹಾಗಿತ್ತು. ಒಬ್ಬ ವಯಸ್ಸಾದ ಅಜ್ಜಿ ಒಬ್ಬರು. ನನ್ನ ಮುಖ ನೋಡಿ ಅವನು ಎಂದಿನ 'ಕಮರ್ಷಿಯಲ್' ನಗೆ ನಗುತ್ತಾನೆ. "ಕಾದಿದ್ರೀ ಅಂತ ಕಾಣತ್ತೆ" ಅನ್ನುತ್ತಾನೆ. "ಬಸ್ ಬೇಗ ಸಿಗ್ಲಿಲ್ಲ. ಅದಕ್ಕೆ ನಿಮ್ಮನ್ನು ಕಾಯಿಸ್ಬೇಕಾಯ್ತು" ಅನ್ನುತ್ತಾನೆ. ಎಲ್ಲರೂ ಒಳಗೆ ಬರುತ್ತಾರೆ. ಬಂದವರನ್ನು ಅವನು ನನಗೆ ಪರಿಚಯ ಮಾಡಿಕೊಡುತ್ತಾನೆ. ನಾನು ವರಾಂಡದ ಕಂಭಗಳನ್ನೇ ನೋಡುತ್ತೇನೆ. ಎರಡು ಸಾವಿರ ಖರ್ಚು ಮಾಡಿದ್ದು ತಪ್ಪಾಯಿತೇನೋ ಅಂದುಕೊಳ್ಳುತ್ತೇನೆ. ಕಂಭಗಳಿಂದ ಮೂರು–ನಾಲ್ಕು ಕಡೆ ಗಾರೆ ಕಿತ್ತುಹೋಗಿದೆ. ದೊಡ್ಡದಾಗಿ ಕಿತ್ತುಹೋಗಿ-ರುವುದೊಂದನ್ನು ನಾನು ಈಚೆಗೆ ನೋಡಿಯೇ ಇರಲಿಲ್ಲ. ಯಾವಾಗ ಕಿತ್ತು ಹೋಯಿತು, ಯಾರದು ಈ ಕೆಲಸ ಎಂಬ ಯೋಚನೆ ಕಾಡುತ್ತದೆ. "ಸ್ವಾಮಿ,

ಳಗೆ ಕರ್ಕೊಂಡು ಹೋಗೋಣ್ವಾ ?". ಎನ್ನುತ್ತಾನೆ ಅವ. "ಓ ಬನ್ನಿಬನ್ನಿ", ಎನ್ನುತ್ತೇನೆ. ಎಂದಿನಂತೆ ಮೊದಲಿಗೆ ಎರಡು ಸಾವಿರ ರೂಪಾಯಿಗಳು ತಿಂದ ಕಂಭಗಳಿರುವ ವರಾಂಡಾದಿಂದ ವರ್ಣನೆಯನ್ನು ಪ್ರಾರಂಭಿಸುತ್ತೇನೆ. "ಮನೆ ಗಟ್ಟಿಮುಟ್ಟಿಯಾಗಿದೆ. ಈ ಎರಡು ಕಂಭಗಳು ಇರೋದ್ರಿಂದ ನೀವು ಎಷ್ಟು ಮಹಡಿ ಬೇಕಾದ್ರೂ ಕಟ್ಟ್ಬೋದು. ಒಳ್ಳೇ ಜಾಗಾ ಚೆನ್ನಾಗಿ ಬಾಡಿಗೆ ದುಡಿಯುತ್ತೆ" ಎನ್ನುತ್ತೇನೆ. ಅವರ ತುಟಿ ಕಿರುನಗೆ ಬೀರುತ್ತದೆ. ಮನಸ್ಸಿನ ತುಂಬಾ ನಕ್ಕಂತನಿಸುತ್ತದೆ. ಯಾವ ಯೋಚನೆಯಿಂದ ನಕ್ಕರೋ ಅನ್ನಿಸುತ್ತದೆ. ಈ ಎರಡು ಸಾವಿರ ರೂಪಾಯಿನ ಕಂಭಗಳನ್ನು ಕಟ್ಟಿದ ವಿಷಯ ಅವರಿಗೆ ಮೆಚ್ಚುಗೆಯಾಯಿತೋ ಅಥವ ಪರಿತಾಪವೆನ್ನಿಸಿತೋ ತಿಳಿಯುವುದಿಲ್ಲ. ಗೋಡೆಯ ಮೇಲೆ ಅಲ್ಲಲ್ಲಿ ಕಂಡ ಬಿರುಕಿನ ಸಂಭ್ರಮವನ್ನು ನೋಡಿ ಅವರು ನಕ್ಕಿರಬಹುದು. ನನ್ನ ವಿಷಯವಾಗಿ ಅವನು ಅವರಿಗೆ ಏನೇನು ಹೇಳಿಬಿಟ್ಟಿದ್ದಾನೋ ! ಬಡತನ ಕಿತ್ತುಕೊಂಡು ತಿನ್ನುತ್ತಿದೆ ಅಂದಿರಬಹುದು. ಹೆಣ್ಣುಮಗಳ ಮದುವೆಯಾಗಬೇಕು. ಅದಕ್ಕೆ ಕಾಸಿಲ್ಲದೆ ಪರದಾಡುತ್ತಿದ್ದಾನೆ, ಅಂದಿರಬಹುದು. ಅವನಿಗೆ ನಾನು ನನ್ನ ಯಾವ ಸ್ವಂತ ವಿಷಯವನ್ನೂ ಹೀಗೆ ಬಿಡಿಸಿಬಿಡಿಸಿ ಹೇಳಿಬಿಡಬಾರದಿತ್ತು. ಅಥವ ಈ ವಿಷಯಗಳನ್ನೆಲ್ಲಾ ಬಂದವರಿಗೆಲ್ಲ ತಿಳಿಸಿಬಿಡಬೇಡ ಎಂದಾದರೂ ಹೇಳಿಬಿಡಬೇಕಾಗಿತ್ತು. ಅವರ ತುಟಿಯಂಚಿನ ನಗೆ ಎಲ್ಲವನ್ನೂ ಅರ್ಥಮಾಡಿಕೊಂಡ ನಗೆಯಹಾಗಿತ್ತು.

"ಪರ್ವಾಗಿಲ್ಲ. ಹಾಲು ದೊಡ್ಡದಾಗಿ ಕಟ್ಟಿಸಿದ್ದೀರಿ" ಅನ್ನುತ್ತಾರೆ ಅವರು. ನಾನು ಉಬ್ಬುತ್ತೇನೆ. ಗಿರಾಕಿ ಕುದುರಬಹುದು ಅಂದುಕೊಳ್ಳುತ್ತೇನೆ. ಈ ಹಾಲು ದೊಡ್ಡದಾಗಿದೆಯೆಂದು ನನಗೆ ಮೊದಲುಮೊದಲೆಲ್ಲಾ ಸಂತೋಷವೇ ಆಗಿರಲಿಲ್ಲ. "ಇನ್ನೂ ಸ್ವಲ್ಪ ಚಿಕ್ಕದಿರಬಹುದಾಗಿತ್ತು" ಎಂದು ನೋಡಿದ ಕೆಲವರು ಅಂದದ್ದೇ ನನ್ನ ಮನಸ್ಸಿನಲ್ಲಿ ನಿಂತುಹೋಗಿತ್ತು. "ಇದರ ಬದಲು ಪಕ್ಕದ ರೂಮನ್ನು ಸ್ವಲ್ಪದೊಡ್ಡದು ಮಾಡಿರಬಹುದಾಗಿತ್ತು" ಎಂದಿದ್ದರು ಹಿತಚಿಂತಕರು. ಆದರೆ ಕಂಟ್ರಾಕ್ಟರನದೇ ಎಲ್ಲ ವಿಷಯಗಳಲ್ಲೂ ಕಡೇಮಾತು. ಮೇಲುಗೈ. ಅನ್ನಿಸಿದಂತೆಲ್ಲ ಕಟ್ಟಲಾಗುವು

ದಿಲ್ಲ. ಎಂದು ಒಂದೊಂದಕ್ಕೂ ಅವನದು ಒಂದೊಂದು ಕಾರಣ. ಪುಟ್ಟ ಮಗಳನ್ನು ಇಟ್ಟುಕೊಂಡು ಈ ದೊಡ್ಡ ಹಾಲಿನಲ್ಲಿ ನಾವಿಬ್ಬರೂ ಕುಳಿತಿದ್ದಾಗಲೋ, ಮಲಗಿದ್ದಾಗಲೋ, ಇದನ್ನು ಹೇಗೆ ಉಪಯೋಗಿಸಿಕೊಳ್ಳುವುದು ಎಂಬುದೇ ಪ್ರಶ್ನೆಯಾಗಿತ್ತು. ಗಂಡ–ಹೆಂಡತಿ ಹಾಲಿನ ಉದ್ದಗಲಕ್ಕೆ ಸರಸರನೆ ಓಡಾಡುತ್ತಾರೆ: ಶ್ರೀನಿವಾಸ ತನ್ನ ಆಟದ ಸಾಮಾನುಗಳನ್ನೆಲ್ಲಾ ನೆಲದ ಮೇಲೆ ಚೆಲ್ಲಾಪಿಲ್ಲಿಯಲ್ಲಿ ಹರಡುತ್ತಿದ್ದ. ಯಾವ ಯೋಚನೆಯೂ ಇಲ್ಲದೇ, ಯಾವ ನಿಯಮವೂ ಇಲ್ಲದೇ ಅವನು ಆಟ ಪ್ರಾರಂಭಿಸಿದ್ದ. ಬಂದವರು ಕಿಟಕಿ–ಬಾಗಿಲುಗಳನ್ನು ಪರೀಕ್ಷಿಸುತ್ತಿದ್ದರು. "ಯಾವ ಮರ ಉಪಯೋಗಿಸಿದ್ದೀರಿ ?" ಎಂದು ಕೇಳಿದರು. "ಎಲ್ಲಾ ತೇಗದ ಮರಾನೇ ಹಾಕಿರೋದು. ನಾಲ್ಕು ಕಾಸು ಜಾಸ್ತಿ ಆದರೂ ಪರವಾಗಿಲ್ಲ ಅಂತ ಎಲ್ಲಾ ಒಳ್ಳೇ ಪದಾರ್ಥಾನೇ ಉಪಯೋಗ್ಸಿದ್ದೀನಿ." ಎನ್ನುತ್ತೇನೆ. ಸರ್ಕಾರ ಸಾಲಕೊಟ್ಟು ಎಂಟುಸಾವಿರ ರೂಪಾಯಿಗಳಲ್ಲಿ ಇಷ್ಟೆಲ್ಲವನ್ನೂ ಕಟ್ಟಿಸಲು ಸಾಧ್ಯವಾಗಲಿಲ್ಲ. ಎಲ್ಲದರ ಬೆಲೆಯೂ ಗಗನಕ್ಕೇರಿರುವಾಗ ಮನೆ ಕಟ್ಟುವುದಾದರೂ ಹೇಗೆ ? ಇಷ್ಟೆಲ್ಲಾ ಕಷ್ಟಪಟ್ಟು ನಾನು ಮನೆ ಕಟ್ಟಲು ಇದ್ದ ಒಂದೇ ಕಾರಣ: ನನಗೆ ಪಿತ್ರಾರ್ಜಿತವಾಗಿ ಬಂದ ಒಂದು ಚೂರು ನೆಲ. ಅದನ್ನೂ ಮಾರಿಬಿಡಬೇಕಾಗಿತ್ತು. ಆದರೆ ಮನೆ ಕಟ್ಟಲೇಬೇಕೆಂದು ಹಠ ಹಿಡಿದುದು ಅವಳ ತಾಯಿ, ನನ್ನತ್ತೆ; ಆಕೆಗೆ ಅಳಿಯ ಮನೆಯಿಲ್ಲದೇ ಇರುವುದು ಒಂದು ದೊಡ್ಡ ಕೊರತೆ. ಸಂಸಾರವೆಂದ ಮೇಲೆ ತೊಂದರೆಗಳು ಇದ್ದೇ ಇರುತ್ತವೆ. ಹೀಗೆಂದು ಮನೆ–ಮಠವೆ ಮಾಡಿಕೊಳ್ಳದೇ ಇರುವುದು ಸಾಧ್ಯವೇ, ಎಂದು ಅವರ ಪ್ರಶ್ನೆ. ಸರ್ಕಾರದ ಕೆಲಸವೊಂದು ಇರುವಾಗ ಸಾಲ ಎತ್ತುವುದಕ್ಕೆ ಎಲ್ಲಿಯ ಸಂಕೋಚ !.

ಮನೆ ಕಟ್ಟುವುದಿರಲಿ, ಮೊಲಿಗೆ ಆ ನೆಲವನ್ನು ನನ್ನ ಹೆಸರಿಗೆ ಮಾಡಿಕೊಳ್ಳುವುದೇ ಒಳ್ಳೇ ತಲೆಬಿಸಿಯ ಕೆಲಸವಾಗಿತ್ತು. ಅಪ್ಪನ ಈ ಆಸ್ತಿಯನ್ನು ಮೊದಲು ಅನುಭವಿಸುತ್ತಿದ್ದ ಹಿರಿಯುವ ಈ ಅಂಗೈಯಗಲ ನೆಲವನ್ನು ಬಿಟ್ಟುಕೊಡಲು ಹಿಂದೆ ಮುಂದೆ ನೋಡಿದ್ದ. ಈ ನೆಲದ ಹಿಂದಿನ ಪಿತ್ರಾರ್ಜಿತ ಹೆಂಚಿನ ಮನೆಯು ಅಂದ ಕೆಟ್ಟು ಹೋಗುತ್ತದೆ ಅಂದಿದ್ದ. "ನನಗೊಂದು ಸಾವಿರ

ರೂಪಾಯಿ ಕೊಡು. ಸ್ವಲ್ಪ ಜಾಗಬಿಟ್ಟುಕೊಡು." ಎಂದೆಲ್ಲಾ ಕೇಳಿದ್ದ. ಇದ್ದಕ್ಕಿದ್ದಹಾಗೆಯೇ ನಾನು ಸಾವಿರ ರೂಪಾಯಿ ಎಲ್ಲಿಂದ ತಂದೇನು?. ಪಿತ್ರಾರ್ಜಿತ ಕೈಗೆ ಬರುವುದು ಸಾವಿರ ರೂಪಾಯಿಲ್ಲದೆ ಮುಂದೆ ಹೋಯಿತು. ಹಿರಿಯುವ ರೂಪಾಯಿ ಬೇಕೇಬೇಕೆಂದು ಪಟ್ಟು ಹಿಡಿದು ಕುಳಿತ. ಎಲ್ಲಿ ರೂಪದಲ್ಲಿಯೂ ಅವನನ್ನು ಬೇಡಿಕೊಂಡಿದ್ದಾಯಿತು. ಅವನಿಗಿಂತ ಹಿರಿಯ ರಿಂದ, ಅನುಭವಿಗಳಿಂದ ಅವನಿಗೆ ಬುದ್ಧಿಹೇಳಿಸಿದ್ದಾಯಿತು. ಯಾವುದೋ ಒಂದು ಕ್ಷಣದಲ್ಲಿ ಅವನು, ಯಾರ ಮಾತಿಗೋ ಬೆಲೆಕೊಟ್ಟು ಸಾವಿರವನ್ನು ಐನೂರಕ್ಕಿಳಿಸಿದ. ಆದರೆ ತನಗೆ ಖಾಲಿ ಜಾಗದ ಒಂದೆರಡಡಿ ಅಗಲ ಹೆಚ್ಚಾಗಿ ಬೇಕೆಂದು ಕೇಳಿದ. ಶ್ರೀನಿವಾಸ ಇದ್ದಕ್ಕಿದ್ದಹಾಗೆಯೇ ಗದ್ದಲವೆಬ್ಬಿಸುತ್ತಾನೆ. ಕಿಟಕಿ ಬಾಗಿಲುಗಳನ್ನು ಮುಟ್ಟಿ ಮುಟ್ಟಿ ನೋಡುತ್ತಿದ್ದ ಅವರು ಅವನ ಕಡೆಗೆ ನೋಡುತ್ತಾರೆ. ಶ್ರೀನಿವಾಸ ಖಾಲಿಡಬ್ಬಿ ಪೆಟ್ಟಿಗೆಗಳನ್ನು ಒಂದೊಂದಾಗಿ, ಒಂದರ ಮೇಲೊಂದು ಜೋಡಿಸಿ ಎತ್ತರವಾಗಿಸುತ್ತಿದ್ದಾನೆ. "ಅಣ್ಣ, ಮನೆ ಕಟ್ತಿದೀನಿ," ಅನ್ನುತ್ತಾನೆ. ಅವರು ತೆಳುನಗೆನಗುತ್ತಾರೆ. ನಾನು ವರಾಂಡದ ಕಂಭಗಳನ್ನೇ ನೋಡುತ್ತೇನೆ. ಕಿತ್ತುಹೋಗಿರುವ ಗೋಡೆಯನ್ನೇ ದೃಷ್ಟಿಸುತ್ತೇನೆ. ಇಷ್ಟೊಂದು ಪಟು ಇದಕ್ಕೆ ಯಾವಾಗ ಬಿದ್ದಿತು ಎಂದು ಪುನಃ ಪುನಃ ಯೋಚಿಸುತ್ತೇನೆ ಗಾರೆ ಸಿಮೆಂಟು ತುಂಬಿಕೊಂಡು, ಸುಣ್ಣ-ಬಣ್ಣ ಆಗಿದ್ದರೆ ಈ ಮನೆಗೆ ಬರುವವರು ಇನ್ನೊಂದೈನೂರು ಹೆಚ್ಚಾಗಿ ಕೊಡುತ್ತಿದ್ದರೋ ಏನೋ ಅಂದುಕೊಳ್ಳುತ್ತೇನೆ. ಆ ಬಿರುಕುಗಳೆಲ್ಲಾ ತುಂಬಾ ವಿಕಾರವಾಗಿ ಕಾಣಿಸುತ್ತವೆ ಶ್ರೀನಿವಾಸ ಜಡಪಡಿಸುವುದನ್ನು ನಿಲ್ಲಿಸಿ ಪೆಟ್ಟಿಗೆಗಳನ್ನು ಜೋಡಿಸುವ ಕೆಲಸದಲ್ಲೇ ಮನಸ್ಸನ್ನು ಕೇಂದ್ರೀಕರಿಸುತ್ತಾನೆ.

ನಾನು ಮನೆ ತೋರಿಸುವ ಕೆಲಸವನ್ನು ಮುಂದುವರಿಸುತ್ತೇನೆ. ಹಜಾರದಿಂದ ಮುಂದೆ ನಡೆದು ಊಟದ ಮನೆಗೆ ಬರುತ್ತೇವೆ. ಅದರ ಮೂಲೆಯಲ್ಲಿದ್ದ ಕೊಠಡಿಯನ್ನು ಬೊಟ್ಟುಮಾಡಿತೋರಿಸುತ್ತೇನೆ. ಊಟದ ಮನೆಯ ತುಂಬಾ ಪೆಟ್ಟಿಗಳು, ಹಾಸಿಗೆ ಜೋಡಿ. ಅಲ್ಲೊಂದು ಕಡೆ ಮುರುಕಲು ಬಕೇಟು ಇದ್ದವೆ. ಬಂದಿರುವ ಹಣವಂತ ಪಸಂದುಕೊಳ್ಳುತ್ತಾರೋ ಎಂದು ಸಂಕೋಚಪಟ್ಟುಕೊಳ್ಳುತ್ತೇನೆ. "ಇಲ್ಲಿ ಬೆಳಕು ಕಡಿಮೆ ಇರೋಹಾಗೆ ಕಾಣ್ಸತ್ತೆ........"

ಎಂದವರು ಹೇಳಿದಾಗ, "ಇಲ್ಲ ಇಲ್ಲ ಸಂಜೆ ಹೊತ್ತು ಸ್ವಲ್ಪ ಬೆಳಕು ಕಡಮೆ ಇರತ್ತೆ. ಬೆಳಗಿನ ಹೊತ್ತು ಸಾಕಷ್ಟು ಬೆಳಕಿರತ್ತೆ." ಎಂದು ಏನೋ ಉತ್ತರ ಕೊಟ್ಟು, ಥಟ್ಟನೆ ದೀಪ ಹಚ್ಚುತ್ತೇನೆ. ಅಲ್ಲಲ್ಲಾ ಹರಡಿಕೊಂಡಿದ್ದವುಗಳ ನ್ನೆಲ್ಲಾ ಅವರು ಸ್ಪಷ್ಟವಾಗಿ ನೋಡುತ್ತಾರೆ. ಅಟ್ಟದಮೇಲೆ, ಬೀರುವಿನಲ್ಲಿ ತುರುಕಿದ್ದ ಪದಾರ್ಥಗಳನ್ನೆಲ್ಲಾ ಪರೀಕ್ಷಿಸುವವರಂತೆ ನೋಡುತ್ತಾರೆ. "ಇದೇನಾ ರೂಮು ?" ಎಂದವರು ಕೇಳಿದಾಗ ರೂಮಿನಕಡೆ ನಡೆಯುತ್ತೇವೆ. ಮುಂದು ಮೂಡಿದ್ದ ಬಾಗಿಲನ್ನು ಹಿಂದು ಮಾಡಿ ಎಲ್ಲರೂ ಒಳಗೆ ಕಾಲಿಡು ತ್ತೇವೆ. ಮೂಲೆಯಲ್ಲಿ ನಿಂತಿದ್ದ ಸರೋಜ ಸರಕ್ಕನೆ ಸೆರಗನ್ನು ಎದೆಯ ಮೇಲೆಳೆದುಕೊಳ್ಳುತ್ತಾಳೆ, ಎಲ್ಲರೂ ಅವಳ ಕಡೆ ನೋಡುತ್ತಾರೆ. ಅವಳು ಸರ ಸರನೆ ಹೆಜ್ಜೆಹಾಕಿ ಕೊಠಡಿಯಿಂದಾಚೆ ಹೋಗುತ್ತಾಳೆ. ಮೌನ ಮುರಿಯುವ ಬೇತಾಳನಂತೆ ನಡುವೆ ಮಾತನಾಡಿ, "ಇದೇ ರೂಮು. ಚಿಕ್ಕದಾಗಿದ್ದರೂ ಅನುಕೂಲವಾಗಿದೆ" ಎಂದು ಹಲ್ಲು ತೋರಿಸುತ್ತೇನೆ. ಸರೋಜಳನ್ನು ಮನ ಸ್ಸಿನಲ್ಲೇ ಬಯ್ದುಕೊಳ್ಳುತ್ತೇನೆ. ಬಾಗಿಲು ಹಾಕಿಕೊಳ್ಳದೇ ಅವಳು ಒಳಗೆ ಬಟ್ಟೆ ಬದಲಾಯಿಸುತ್ತಿದ್ದುದನ್ನು ನೆನೆದು ಕುದಿಯುತ್ತೇನೆ. ಈಗಿನ ಹುಡುಗಿ ಯರು ಹಿಂದೆ-ಮುಂದೆ ನೋಡುವದಿಲ್ಲ ಎಂದು ಏನೇನೋ ಅಂದುಕೊಳ್ಳು ತ್ತೇನೆ. ಮುಚ್ಚಿದ ಕಿಟಕಿಯನ್ನು ಅವನು ತೆಗೆಯುತ್ತಾನೆ. ತಣ್ಣನೆ ಗಾಳಿ ಬಂದು ಮೈಗೆ ಬಡಿದಾಗ ಸ್ವಲ್ಪ ಹಾಯೆನಿಸುತ್ತದೆ. ಅವರ ಮುಖದಲ್ಲಿ ಪುನಃ ಕಿರುನಗೆ ಕಾಣುತ್ತೇನೆ. ಈ ಸಾರಿಯ ನಗೆ ಏತಕ್ಕೋ, ಎಂದು ಯೋಚನೆ ಪ್ರಾರಂಭಿಸುತ್ತೇನೆ. ಈ ಕೊಠಡಿಯಲ್ಲಿ ಇಬ್ಬರು ಮಲಗಲು ಆಗುತ್ತದೆಯೋ ಎಂದವರು ಯೋಚನೆ ಮಾಡುತ್ತಿದ್ದಾರೇನೋ ಅನ್ನಿಸುತ್ತದೆ. ಸರೋಜ ಹುಟ್ಟುವುದಕ್ಕೆ ಮೊದಲು ನಾನು-ಅವಳು ಇಲ್ಲೇ ಮಲಗಿಕೊಳ್ಳುತ್ತಿದ್ದುದು. ಮೊದಮೊದಲು ಹೊಸ ಮನೆಯಲ್ಲಿ ಮಲಗಿದಾಗ ನನಗೆ ಓಡಿಸಲಾರದಷ್ಟು ಸಂಭ್ರಮ, ನನ್ನದು- ನನ್ನ ಮನೆ- ನನ್ನ ಹೆಣ್ಣು- ಎಂಬ ಅಭಿಮಾನ, ನನ್ನತನ ನನ್ನಲ್ಲಿ ಮೂಡಿದ್ದು ಆಗಲೇ. ಮಾವ ಕೊಟ್ಟ ಹೆಣ್ಣು-ಹಾಸಿಗೆಗಳೆರಡ ರಿಂದ ಈ ನನ್ನ ಪುಟ್ಟ ಕೊಠಡಿಯನ್ನು ಅಲಂಕರಿಸಿದ್ದೆ.

ಅವರು ಕೊಠಡಿ ಬಿಟ್ಟು ಹೊರಗೆ ಬರುತ್ತಾರೆ. ಪುನಃ ಊಟದ ಮನೆ ಅಲ್ಲಿಂದ ಅಡುಗೆ ಮನೆ-ಬಚ್ಚಲು ಮನೆಗಳನ್ನೆಲ್ಲಾ ನೋಡುತ್ತಾರೆ. 'ಹೊಗೆ

ಗೂಡಿನಿಂದ ಹೊಗೆ ಸಲೀಸಾಗಿ ಮೇಲೆ ಹೋಗುತ್ತದೆಯೊ, ನಲ್ಲಿಯಲ್ಲಿ ನೀರು ಸರಿಯಾಗಿ ಬರುತ್ತದೆಯೊ, ಬಚ್ಚಲನೀರು ನಿಲ್ಲದೆ ಹೊರಗೆ ಹೋಗಲು ಮೋರಿ ದೊಡ್ಡದಾಗಿದೆಯೇ, ಎಂದೆಲ್ಲಾ ಪ್ರಶ್ನೆ ಕೇಳುತ್ತಾರೆ. ಅವರ ಪ್ರಶ್ನೆಗಳನ್ನು ಕೇಳಿ ನನಗೂ ಯೋಚನೆಯಾಗುತ್ತದೆ. ಇಷ್ಟೆಲ್ಲವನ್ನೂ ಯೋಚಿಸದೆ ಇಷ್ಟು ವರ್ಷ ಈ ಮನೆಯಲ್ಲಿ ಸಂಸಾರವನ್ನಾದರೂ ಹೇಗೆ ಸಾಗಿಸಿದೆ ಎಂದು ಆಶ್ಚರ್ಯ ಪಡುತ್ತೇನೆ. ಎರಡುಹೊತ್ತು ಉಣ್ಣುವುದಕ್ಕೆ ಸರಿಪಡಿಸಿಕೊಳ್ಳುವುದರಲ್ಲಿ ಈ ಯೋಚನೆಗಳಿಗೆಲ್ಲಾ ನನಗೆ ಆಸ್ಪದವಾಗಲಿಲ್ಲವೇನೋ! "ಬಚ್ಚಲುಮನೆಗೆ ಪರಸಿ ಯಾಕೆ ಮಾಡಿಸಿಲ್ಲ ?" ಎಂದವರು ಕೇಳುತ್ತಾರೆ. ನಾನು ಮೇಲಿನ ಹಂಚು ನೋಡುತ್ತೇನೆ. ಪೂರ್ವಕಾಲದ ಕರೀಹಂಚು. ನನ್ನ ಹಿರಿಯರ ಬಳುವಳಿ ಅದು. ಸರ್ಕಾರ ಸಾಲಕೊಟ್ಟ ರೂಪಾಯಿಗಳು ಜೊತೆಗೆ ಕಂಟ್ರಾಕ್ಟರನ ಕೃಪೆಯಿಂದ ಮೇಲೆ ಬಿದ್ದ ಸಾವಿರದೈನೂರು ರೂಪಾಯಿ ಸಾಲ. ಇವುಗಳಿಂದಲೂ ಸಹಾ ಮನೆಗೆ ಪೂರ್ತಿ ಪರಸಿ ಮಾಡಲು ಸಾಲದಾಯಿತು. ಮುಂದೆ ನೋಡೋಣ, ಈಗ 'ಟೆಂಪೊರರಿ'ಯಾಗಿ ಹಂಚು ಹಾಸುವ, ಎಂದು ಆಗ ನಿರ್ಧರಿಸಿದ್ದು ಇಂದಿನವರೆವಿಗೂ ಹಾಗೇ ಮುಂದುವರಿದಿದೆ. ಈಗ ಪರಸಿ ಮಾಡುವುದಂತೂ ದೂರದ ಮಾತು. ಖರ್ಚು ಈಗ ಎರಡರಷ್ಟಾಗುತ್ತದೆ. ಅಂದಿನ 'ಟೆಂಪೊರರಿ' ಕೆಲಸ ಇಂದಿನವರೆವಿಗೂ ಉಳಿದುಕೊಂಡು ಬಂದಿದೆ. "ಇಲ್ಲೇನು, ಮಳೆಬಂದಾಗ ಸೋರತ್ತಾ ?" ಅಜ್ಜಿ ಕೇಳುತ್ತಾರೆ. ಹೂಂ. ಸೋರೋದೇ ಏನು ಮಳೆ ಪ್ರಾರಂಭವಾದರೆ ಸಾಕು, ಬಚ್ಚಲಲ್ಲಿ ನೀರು ತುಂಬುತ್ತದೆ. ತೊಳೆಯಲು ಇಟ್ಟ ಪಾತ್ರೆಪಡಗಗಳು ತೇಲುತ್ತವೆ. ಆದರೂ ಈಗ ಸಮಾಧಾನದ ಮಾತು ಆಡುತ್ತೇನೆ. "ದೊಡ್ಡಮಳೇ ಬಂದಾಗ ಸ್ವಲ್ಪ ಅಲ್ಲಲ್ಲಿ ನೀರಿಳಿಯುತ್ತದೆ. ವರ್ಷಕ್ಕೆ ಈಗ ದೊಡ್ಡಮಳೆ ಬರೋದೇ ಅಪ್ರೂಪ...... ಹ್ಹ ಹ್ಹ ಹ್ಹ......." ಎಂದು ಸನ್ನಿವೇಶವನ್ನು ಹಗುರ ಮಾಡುವ ಪ್ರಯತ್ನ ಮಾಡುತ್ತೇನೆ. ಅಜ್ಜಿ ಸಹಿತ ಅವರ್ಯಾರೂ ತುಟಿ ಬಿರಿಯುವುದಿಲ್ಲ. ಆ ಅಜ್ಜಿ ದೊಡ್ಡ ಸಿವಿಲ್ ಇಂಜನಿಯರನಂತೆ ಬಚ್ಚಲು ಮನೆಯ ಎಂಟು ದಿಕ್ಕುಗಳನ್ನು ನೋಡುತ್ತಾರೆ. ನೀರೊಲೆಯ ಸುತ್ತುಮುತ್ತಲಿನ ಕಪ್ಪನ್ನು ಕಣ್ಣುಗಳಿಂದ ಕಿತ್ತಿನೋಡುವಂತೆ ದೃಷ್ಟಿಸಿ ನೋಡುತ್ತಾರೆ. ಹಂಚಿನ ಮೂಲಕ ಅಲ್ಲಲ್ಲಿ ಹಾದುಬಂದ ಮಳೆನೀರಿನ ಜಲಪಾತದ ಗುರುತುಗಳನ್ನು ನೋಡುತ್ತಾರೆ.

ಬಂದವರು ಮನೆಯ ವಿರಾಟ ಸ್ವರೂಪವನ್ನು ಬಿಡಿಸಿ ಬಿಡಿಸಿ ನೋಡಿಯಾಗಿತ್ತು. ನನ್ನ ರಕ್ತದ ಒಂದೊಂದು ತೊಟ್ಟನ್ನು ಸೇರಿಸಿ ಕಟ್ಟಿದ್ದ ಗೋಡೆಗಳನ್ನು ಮುಟ್ಟಿ ಮುಟ್ಟಿ ನೋಡಿದ್ದಾಗಿತ್ತು. ಗಟ್ಟಿಗೋಡೆ, ಮುರುಕಲು ಗೋಡೆ, ಬಣ್ಣ ಉಳಿಸಿಕೊಂಡಿದ್ದ ಬಾಗಿಲು, ಬಣ್ಣ ಮಸುಕಾಗಿದ್ದ ಕಿಟಕಿಗಳು, ಅಡುಗೆಮನೆ, ಬಚ್ಚಲು, ಕಕ್ಕಸ್ಸುಗಳಲ್ಲಿ ಕಾಲಿಟ್ಟಾಗಿತ್ತು. ಕಕ್ಕಸ್ಸಿನ ಅಕ್ಕಪಕ್ಕ ಸೊಂಪಾಗಿ ಬೆಳೆದಿದ್ದ ಕೊತ್ತಂಬರಿಸೊಪ್ಪು, ಹಸಿಮೆಣಸಿನಕಾಯಿ, ದಂಟಿನ ಗಿಡಗಳನ್ನು ನೋಡಿ ಅಸಹ್ಯಪಟ್ಟುಕೊಂಡುದೂ ಆಗಿತ್ತು. ಕೊನೆಗೆ ಖಾಲಿ ಜಾಗ ಇನ್ನೂ ಸ್ವಲ್ಪ ಇದ್ದಿದ್ದರೆ ಚೆನ್ನಾಗಿತ್ತು ಎಂದು ಇಲ್ಲದ್ದನ್ನು ಬಯಸಿಯಾಗಿತ್ತು. ಎಲ್ಲ ವಿವರಗಳೂ ಆದಮೇಲೆ ಪುನಃ ಬಚ್ಚಲು, ಅಡುಗೆ, ಊಟದ ಮನೆಗಳನ್ನು ಹಾದು ಹಜಾರಕ್ಕೆ ಬಂದಾಗಿತ್ತು. ಶ್ರೀನಿವಾಸ ಎತ್ತರವಾದ ಮನೆಯೊಂದನ್ನು ಸುಂದರವಾಗಿ ಕಟ್ಟಿದ್ದು ಕಾಣಿಸುತ್ತದೆ. 'ಪರವಾಗಿಲ್ಲ. ನನ್ನ ಮಗ ಇಷ್ಟು ಜಾಣನಾಗಿದ್ದಾನೆ' ಅಂದು ಕೊಳ್ಳುತ್ತೇನೆ. ಮಧ್ಯ ಅಗಲವಾಗಿ ಪೆಟ್ಟಿಗೆಗಳನ್ನು ಜೋಡಿಸಿ ಮನೆಯಂತೆ ಕಟ್ಟಿ, ಅದರ ಸುತ್ತಲೂ ಕಾಂಪೌಂಡು ಜೋಡಿಸಿದ್ದಾನೆ. ಅವನು ಆಗಿನಿಂದ ಅತಿ ಆಸೆಪಟ್ಟು ಸೃಷ್ಟಿಸಿರುವ ಸೌಧ ಅದು. ನಾವೆಲ್ಲಾ ಹಜಾರಕ್ಕೆ ಬಂದರೂ ಅವನಿಗೆ ನಮ್ಮಮೇಲೆ ಲಕ್ಷ್ಯವಿಲ್ಲ. ಮನೆಯನ್ನು ಬೆಳೆಸುವುದರಲ್ಲೇ ಮನಸ್ಸನ್ನು ನೆಟ್ಟಿದ್ದಾನೆ. ಎಲ್ಲರೂ ಹತ್ತಿರ ಬಂದಾಗ ಅವನು, "ಸಾರ್, ಮಾತಾಡೋಣ್ವಾ?" ಅನ್ನುತ್ತಾನೆ. 'ಹೂಂ.' ಎಂಬಂತೆ ತಲೆಯಾಡಿಸುತ್ತೇನೆ. "ನಿಮ್ಮ ಡಿಮಾಂಡು ಅವ್ರಿಗೆ ಹೇಳಿದ್ದೀನಿ ಸಾರ್. ಮನೆ ಅವ್ರಿಗೆ ಒಪ್ಪಿಗೆಯಾಗಿದೆಯಂತೆ. ಹಣದ ವಿಷಯ ಸ್ವಲ್ಪ ಮಾತಾಡ್ಬೇಕೂ ಅಂತಾರೆ..........." ಎಂದು ಅವ ರಾಗ ಎಳೆಯುತ್ತಾನೆ. "ಊಹೂಂ. ಬೆಲೆ ವಿಷ್ಯ ಇನ್ನೂ ಮಾತಾಡೋದು ಸಾಧ್ಯವೇ ಇಲ್ಲ, ನನಗೆ ಅಷ್ಟು ಬೇಕೇಬೇಕು," ಎಂದು ಪಿಸುಗುಟ್ಟುತ್ತೇನೆ. ಅವರು ಬರುತ್ತಾರೆ. ಅದೇ ಮಾತನ್ನೇ ಆಡುತ್ತಾರೆ. ಒಂದೆರಡು ಸಾವಿರ ಕಡಿಮೆಮಾಡಿಕೊಳ್ಳಿ, ಬೇಕಾದ್ರೆ ರಿಜಿಸ್ಟ್ರೇಷನ್ ಖರ್ಚನ್ನ ಹಂಚಿಕೊಳ್ಳೋಣ, ಎನ್ನುತ್ತಾರೆ. ಸ್ವಲ್ಪ ಹೊತ್ತು ಯೋಚಿಸುತ್ತೇನೆ. ಮುಂದಿನ ಖರ್ಚು–ವೆಚ್ಚಗಳು ಥಟ್ಟನೆ ಮುಂದೆ ಬಂದು ನಿಲ್ಲುತ್ತವೆ. ಈಗೊಂದೆರಡುವರ್ಷಗಳಿಂದ ಈ ವ್ಯವಹಾರ ಮುಗಿಸಲಾರದೇ ಸೋತಿದ್ದೇನೆ ಅನ್ನಿಸುತ್ತದೆ. ಇದು ತಾನಾಗೇ ಬಂದ ಶುಭಸಮಯ

ಅನ್ನಿಸುತ್ತದೆ. ಹಿಂದಿನ ನೆನಪುಗಳು ಒಂದಾದಮೇಲೊಂದು ಬಂದು ತಾಗು
ತ್ತದೆ. ಈ ಒಂದು ಮನೆಯನ್ನು ಕಟ್ಟುವುದಕ್ಕೆ ಎಷ್ಟು ಕಷ್ಟಪಟ್ಟೆ, ಮನಸ್ಸಿಗೆ
ಎಷ್ಟೊಂದು ನೋವು ಕೊಟ್ಟೆ, ಈಗ ಅದೆಲ್ಲ ವ್ಯರ್ಥವಾಗಿಹೋಗುತ್ತಿದೆ
ಅನ್ನಿಸುತ್ತದೆ. ಎರಡುಸಾವಿರ ಕೈ ಬಿಟ್ಟ ಕಂಭಗಳು, ಅದರ ಮೇಲಿನ ಜಿರುಕು
ಗಳು–ಮುರುಕುಗಳು, ಈ ಮನೆಯೊಂದಿಗಿನ ಒಡನಾಟದ ಸವಿನೆನಪು ಅನ್ನಿಸು
ತ್ತದೆ. "ಏನು ಸ್ವಾಮಿ, ಏನು ಯೋಚ್ನೇ ಮಾಡ್ತಿದೀರ, ಹೂಂ ಅನ್ನಿ."
ಅವನು ಹೇಳುತ್ತಾನೆ. "ಆಗಲಿ." ಎಂದು ಬಿಡುತ್ತೇನೆ ಬಹಳ ಸುಲಭವಾಗಿ.
ಅವರು ಜೋಬಿನಿಂದ ಚೆಕ್ ಪುಸ್ತಕ ತೆಗೆದು, ಅದೆಷ್ಟಕ್ಕೋ ಬರೆದ ಒಂದು
ಎಲೆಯನ್ನು ಹರಿದು ನನ್ನ ಕೈಗಿಕ್ಕುತ್ತಾರೆ. ಕೈಕುಲುಕುತ್ತಾರೆ. ಅವರ
ಮುಖದ ಮೇಲಿನ ಸಂತೋಷ ನೋಡಿ. ನನಗೆ ಲಾಭವಾಯಿತೋ, ನಷ್ಟ
ವಾಯಿತೋ ತಿಳಿಯುವುದಿಲ್ಲ. ಅವರೆಲ್ಲ ಹೊರಟು ಹೋದಮೇಲೆ ಒಂದೇ
ತಡಪಡಿಕೆ. ಹಜಾರಕ್ಕೆ ಬಂದು ಮಂಚದ ಮೇಲೆ ಕುಸಿಯುತ್ತೇನೆ. ಗಡಿ
ಯಾರ ಎಂಟು ಘಂಟೆ ಹೊಡೆಯುತ್ತದೆ. ಶ್ರೀನಿವಾಸ ನನ್ನನ್ನೇ ನೋಡು
ತ್ತಾನೆ. "ಅಣ್ಣಾ, ಹೇಗಿದೆ ಮನೆ." ಅನ್ನುತ್ತಾನೆ. "ಈಗ ನೋಡು."
ಎಂದು ಹೇಳಿ ಒಂದೇ ಏಟಿಗೆ ಆ ಎತ್ತರದ ಮನೆಯನ್ನು ಚೆಲ್ಲಾಪಿಲ್ಲಿಯಾಗಿಸು
ತ್ತಾನೆ. ಸುತ್ತಲೂ ಕಟ್ಟಿದ ಗಡಿಯನ್ನು ನುಂಗಿ ಆ ಕಡ್ಡಿಪೆಟ್ಟಿಗೆಗಳೆಲ್ಲಾ
ನೆಲದತುಂಬಾ ಹರಡಿಕೊಳ್ಳುತ್ತವೆ. ಅವನು ನಗುತ್ತಾನೆ. ನಾನು ಅಳುತ್ತೇನೆ.

ಅಜ್ಞೇಯ

ಎರಡು ಕವಿತೆಗಳು

೧. ಸೇತುವೆ ನಾನು

ದೂರ....ದೂರ....ದೂರ ನಾನಲ್ಲಿ
ನಾನು ಪಲಾಯನವಾದಿಯಲ್ಲ.
ಸೇತುವೆ ನಾನು
ಇದ್ದದ್ದ ಇರುವುದರೊಂದಿಗೆ ಬೆಸೆಯುವವ ನಾನು
ಇಲ್ಲಿ....ನಾನಿಲ್ಲಿ
ಇದ್ದರೂ....
ಸೇತುವೆ ನಾನು
ಆದ್ದರಿಂದಲೇ
ಅಲ್ಲಿ ನಾನು.... ನಾನಲ್ಲಿ.... ಆ ಕೊನೆಯಲ್ಲಿ

ಮಣ್ಣ ಅಗೆದು
ಗೆಣಸ ತಿಂದು
ಸಿಹಿರಸವನೀಯುವನ
—ಸಾಧನಾ ನಾನು.

ಮಣ್ಣ ಕಲೆಸಿ
ಗಂಡಿಸಲಲಿ ನೆಲಸಿ
ಭವನ ಕಟ್ಟುವವನ
—ಆಸರ ನಾನು.

ಕತ್ತಲ ಗವಿಯಲ್ಲಿ ಇಳಿವವರ
ಆಕಾಶದಲ್ಲಿ ವಿಮಾನ ಹಾರಿಸುವವರ
ಬರಿ ಮೈಯವರ, ಉಸಿರುಕಟ್ಟಿ ನೀರಲ್ಲಿ ಮುಳುಗಿ
ಮುತ್ತ ಹೊತ್ತು ತರುವವರ
ಬರೆದು-ಬರೆದು ಸವೆಸಿ ಲೆಕ್ಕಣಿಕೆ
ಕೂಲಿಮಾಡಿ, ಸರ್ಕಾರವನ್ನಾಳುವವರ
—ವ್ಯಥೆ ನಾನು.

ಕಸರೆ ಹೊತ್ತು. ಕೃಶ ಶರೀರವ ಹೊತ್ತು, ಇಲ್ಲದ ಮನೆಮಂಠ
ಹುಲ್ಲು ಕಸಕಡ್ಡಿಗಳ ಮೇಲೆ ಮಲಗುವವರ
ಕುರಿ-ಕತ್ತೆ ಕಾಯುವವರ
ಊರವರ ಮನೆಕಸ-ಮುಸುರೆ-ಕೊಳೆ ಎತ್ತುವವರ
ಸಿಂಗರಿಸಿ ಪರರನ್ನು ಕೊಳಕು ತಾವಾಗಿರುವವರ
ಹೆಗಲ ಮೇಲೆ ಬಳೆ-ಮಲ್ಲಾರ ಹಾಕಿ ಗಲ್ಲಿ-ಗಲ್ಲಿ
ಇಣುಕುವವರ
ರಸ್ತೆಯಲ್ಲಿ ಎಸೆದ ಸಿಪ್ಪೆ, ಬಿದ್ದ ಸಗಣಿ, ಒಗೆದ ಬೀಡಿ-
ನೋಟುಗಳನ್ನೆತ್ತುವವರ
ಕಮ್ಮಾರ-ಚಮ್ಮಾರ, ಅಕ್ಕಸಾಲಿಗ-ಗಾರೆಯವರ
ರಾಟೆ ತಿರುಗಿಸಿ ಮಗ ಆಡಿಸುವವರ
ಯಾರು ಎಲ್ಲಿ ಹೇಗೆ ದುಡಿದರೂ—
ಸೋಲದವರ, ಸಾಯದವರ
ಕ್ರಮದ ತೆಕ್ಕೆಯಲ್ಲಿರುವವರ
ದುಡಿಮೆಗಾರರ ಶಿಲ್ಪಿಗಳ ಸೃಷ್ಟಾರರ
ಅವಿಜಿತ್, ದುರ್ಜೇಯ ಮಾನವರ—
—ಕಥೆ ನಾನು.

ದೂರ....ದೂರ....ದೂರ....ಸಾನಲ್ಲಿ... ನಾನು
ಪಲಾಯನವಾದಿಯಲ್ಲ ನಾನು
ಸೇತುವೆ ನಾನು
ಇದ್ದದ್ದು....ಇರುವುದರೊಂದಿಗೆ ಬೆಸೆಯುವ
ಸೇತುವಾದುವರಿಂದ
ಅಲ್ಲಿ....ದೂರ....ದೂರದಲ್ಲಿಯೂ ನಾನು.
ಅಂದಾಕ್ಷಣಕ್ಕೆ
ಇಲ್ಲಿಲ್ಲವೆಂದಲ್ಲ
ದೂರ...ಇದ್ದದ್ದು, ಇರುವುದರೊಂದಿಗೆ ಕೂಡಿಸುವ ಸೇತು ನಾನು.
ತಪ್ಪು ತಿಳಿದೀರಿ,
ಇರುವುದೆಲ್ಲವನ್ನೂ ಒಪ್ಪಿಲ್ಲ ನಾನು.

ಆಸರೆ, ಇಂದಾಗಿದ್ದಂತೆ
ನಿರಂತರ ಸಿಡಿದೇಳುವ ಶಕ್ತಿ ನಾನು
ವ್ಯಥಿತನಾಗಿರುವಂತೆ
ಬಿಡುಗಡೆಗೆ ತವಕಿಸುವ ಪಕ್ಷಿ ನಾನು.
ಬರೆದ ಕಥೆಯಿದ್ದಂತೆ
ಅಲಿಖಿತ ಇತಿಹಾಸವೂ ನಾನು
—ಸಾಧನಾಭೀಪ್ಸಿ ನಾನು.

ಯತ್ನದಲ್ಲಿ ಎಂದೂ ಹಿಂದೇಟಾಕದ ನಿರಂತರ ಯತ್ನಶಾಲಿ ನಾನು
ಸಂಘರ್ಷ ಸಮರವನೆ ಬಯಸಿ ವಿರಾಮವನು ಮೆಟ್ಟುವ ನಾನು
ಇದ್ದದ್ದ ಬದಲಿಸುವೆ.
ಬದಲಾವಣೆ ಬಂದೀತೆ ದೇವಪುರಿಯಿಂದ ? ನಮ್ಮಿಂದ ತಾನೆ ?
ನನ್ನ ಕರ್ಮ ಜಾತಕದಲ್ಲಿ ಬರದೇ ಇಲ್ಲ—
ಹುಡುಕಿದರೂ ಸಿಕ್ಕುವುದೇ ಇಲ್ಲ
'ಸಂಶಯ' ಎಂಬ ಪದ ಪುಂಜ.

ನ್ನು ವಿರೇನು : ಕೇಳಿ,
ಕರ್ಮದಲೆನಗೆ ವಿಶ್ವಾಸ, ಉಸಿರಿನಷ್ಟೆ ನಂಬಿಕೆ.
ಷವನು ದೂಡಬೇಕು
ಸವಿಲ್ಲದವರ ಬಳಿ ಬಾರದಂತೆ ಅದನು ಕಾಯಬೇಕು.
ರುವನ್ನೆ ಅರಿಯದವ ನಾನು
ಅಭಯ
ನಂಬಿಗಸ್ತ
ಜಯಶಾಲಿ.

ರ....ದೂರ....ದೂರದ ಸೇತುವೆ ನಾನು
ಥಾ ತಿಳಿದೀರಿ,
ನ್ಯದಿಂದ ಶೂನ್ಯದವರೆಗೂ ಹಬ್ಬಿರುವ ಸಪ್ತ
ಗಿನೀಸೇತು ಅಲ್ಲ.

ುಜ ಮನುಜನ ಕೈ ಸೇರಿಸುವ
ಯಕ್ಕೆ ಹೃದಯ ಬೆಸೆಯುವ
ದ ದೀಪ್ತಿಯನು ಮತ್ತಂಥಹುದೇ ದೀಪ್ತಿಯೊಡನೆ ಕೂಡಿಸುವ
ನ ಕಿರಣಗಳನ್ನು ವಿಸ್ತರಿಸುವ
ಕಲ್ಪನೆಯನ್ನು ಮತ್ತೊಂದು ಕಲ್ಪನೆಯೊಂದಿಗೆ ಕೂಡಿಸುವ
ಭವವನ್ನು ಅನುಭವದೊಂದಿಗೆ ವಿಲಾಯಿಸುವ
ಮನುಜರನ್ನು ಒಂದಾಗಿಸುವ–
ಸೇತು ನಾನು.

ಗ್ರ ಅನುಭವದ ಕಮಾನು ಸೇತುಗಳಡಿಯಲ್ಲಿ
ಜೀವನದ ಅಜಸ್ರ ಪ್ರವಾಹ,
ದ ಜಲ ಪ್ರವಹಿಸುತ್ತಿದೆ,

ತಿರುಗಿ,
ಮತ್ತೆ ಜೋರಾಗಿ
ಹೊಸಮಾರ್ಗವನು ಹುಡುಕಿ
ಹೊಸ ಕಂದಕ ಕೊರೆದು
ಚಿರಪರಿವರ್ತನ ಶೀಲ ನದಿ ಸಾಗುತ್ತಿದೆ
ಸಾಗರದೆಡೆ ನುಗ್ಗುತ್ತಿದೆ,
ನಾನಲ್ಲಿ....ದೂರ....ದೂರ.

೨. ನದಿಯು ದ್ವೀಪಗಳು ನಾವು

ನದಿಯು ದ್ವೀಪಗಳು ನಾವು
ಸ್ರೋತಸ್ವಿನಿ ಬಿಟ್ಟಿಮ್ಮನ ಹರಿಯಲೆಂದು ಹೇಳಿವು ನಾವು
ರೂಪದರ್ಶಿಯದು
ನಮ್ಮ ಆಕಾರದಂತೆ, ಗಲ್ಲಿಗಳಂತೆ. ಅಂತರೀಪದಂತೆ
ಮುಕ್ತ ಮರಳು–ದಡ ತಿರುಗಿದಂತೆ
ಎದ್ದು ಬಿದ್ದು ಒರಳಾಡಿದ್ದೆ ನಮಗೆ ಗಡಿ, ಕೋಟೆ.

ನದಿ, ತಾಯಿ–ಅವಳಿಂದಲೇ ನಾವು
ಆದರೂ ನಾವು ದ್ವೀಪಗಳು....ನದಿಯಲ್ಲ
ನಮ್ಮದೇದೂ ಸ್ಥಿರ ಸಮರ್ಪಣೆ, ಎಂದೂ ನಾವು ದ್ವೀಪಗಳು,
ಹರಿಯೆವು ನಾವು, ಹರಿದರೆ ಮರಳಾದಂತೆ
ಹರಿದರೆ ಅಸ್ತಿತ್ವವೆಲ್ಲಿ ? ತನ್ನತನವಿರುವುದೇ ನಮಗೆ ?
ಕಾಲು ಕುಸಿದು ಕ್ರಾಂತಿ ಆದಾಗ—
ನಾವು ಕುಸಿಯುವೆವು–ಮುಂದೆ ಹರಿಯುವೆವು.

ಕರಗಿ ಚೂರಾದರೂ ಕೂಡ ಹರಿಯಬಲ್ಲೆವೇ ನಾವು ?
ರಳಾಗಿ–ಮಣ್ಣಾಗಿ, ಕದಡಿ–ಕೆಸರೆಬ್ಬಿಸಿ
ಳನೀರ ನಿರುಪಯೋಗಿಗೊಳಿಸುವುದಲ್ಲದೆ–
ತ್ತೇನ ಮಾಡಬಲ್ಲೆವು ನಾವು ?
ಾವು ದ್ವೀಪಗಳು; ಶಾಪವಲ್ಲ ನಮಗೆ; ಇದು ವರದಾನ; ವಿಧಿ,
ದಿಯ ಪುತ್ರರು ನಾವು, ನದಿ ಮಡಿಲೇ ನಮಗೆ ನಿವಾಸ
ದಿ ರಿಕ್ತಾ ಕೊಡುವ ಭೂ ಖಂಡವೇ ನಮಗೆ ಪಿತೃ.

ನದಿ....ಹರಿ...ಹರಿಯುತ್ತಾ ಸಾಗು
ೂ-ಖಂಡದಿಂದ ನಮಗೇನು ಸಿಕ್ಕಿದೆಯೋ, ಸಿಗುತ್ತದೆಯೋ,
ರಿಷ್ಕರಿಸಿ. ಸಂಶೋಧಿಸಿ, ಸಂಸ್ಕರಿಸಿ ನೀಡುತ್ತಾ ಸಾಗು.
ನ್ನ ಆಹ್ಲಾದದಿಂದ ಯಾ ನೆರೆಯವರ ಸ್ವೇಚ್ಛಾಚಾರದಿಂದ-
ರೂ ಅತಿಚಾರದಿಂದ ನೆ....ಡೆ....ದಾ....ಗ....

ಪ್ರಳಯವಾಗಿ
ೀನೆ ನ....ಡು....ಗಿ..ಗು....ಡು....ಗಿ....ದ....ರೆ....
ಈ ಸ್ರೋತಸ್ವಿನಿ ಕರ್ಮನಾಶ, ಕೀರ್ತಿನಾಶ, ಜವರಾಯನಾದರೆ–
ಅದೂ ನಮಗೆ ಸ್ವೀಕೃತ.
ರಳಾಗಿ, ಮರಳಲ್ಲೆ ಒಂದಾಗಿ
ಸಮಯ ಸಿಕ್ಕಾಗ ಕಾಲೂರುವೆವು ಬೇರೆಡೆ.

ಹೊಸ ವ್ಯಕ್ತಿತ್ವ ಪಡೆದು ಬಂದಾಗ ಮತ್ತೊಮ್ಮೆ
ತಾಯಿ, ಸಂಸ್ಕಾರ ನೀಡಬೇಕು.

(ಮೂಲ ಹಿಂದಿಯಿಂದ ಕನ್ನಡಕ್ಕೆ : ತಿಪ್ಪೇಸ್ವಾಮಿ)

ಹ. ನೆಂ. ಕಾಖಂಡಿಕಿ

ಷಾಹಜಾನನಿಗೆ

ಏನು ಮಹರಾಯ,
ನಾನೂ ನನ್ನವಳು ಸತ್ತ ಮೇಲೆ ನಿನ್ನ
ಹಾಗೆ
ಉಪ್ಪರಿಗೆ ಮೇಲುಪ್ಪರಿಗೆ ನಿಲ್ಲಿಸಿ, ನಿನಗಿಂತ
ಚಂದಾಗಿ ಸಿಂಗಾರ ಮಾಡಿಸಿ ದಿನವೂ
ಆ, ಈ, ಗ್ರಂಥಗಳ ಓದುತ್ತ, ಆ ರಾತ್ರಿಗಳ
ನೆನಸುತ್ತ (?) ಉಳಿದ ದಿನಗಳನ್ನು
ಈರಿಖ ಚೇರಿನ ಮೇಲೆ ಬಾಗಬೇಕೆಂದಿದ್ದೆ.
ಆ
ದ
ರೆ
ಮೊನ್ನೆರಾತ್ರಿ 'ನೀವು ಗಂಡಸರೇ ?' ಎಂದು
ಸೊಂಟ ತಿವಿದು.
ಮೂತಿ ಹೊರಳಿಸಿ ಮಲಗಿ, ನನ್ನ
ಕನಸುಗಳ ಗೂಟಕ್ಕೆ ಕಟ್ಟಿ ಹೋದವಳು
ಮಹರಾಯಿತಿ
ಈ ವರೆಗೂ ಪತ್ತೆ ಇಲ್ಲವಲ್ಲಪ್ಪ !

ಎಸ್. ಎನ್. ಶಿವಸ್ವಾಮಿ

"ಪ್ರಸಿದ್ಧ ಪುರುಷೋ ಭವ"

ರೇಡಿಯೋ ನಾಟಕ

ರೂಪಕ : ಖಳನಾಗಿ ಖ್ಯಾತಿಗಳಿಸಿದರೂ ಸರಿಯೆ, ಮಹಾಪುರುಷನಾಗಿ ಪ್ರಸಿದ್ಧಿ ಪಡೆದರೂ ಸರಿಯೆ, ಅನಾಮಧೇಯನಾಗಿ ಅಂಧಕಾರ ದಲ್ಲಿರಲು ಎಂದಿಗೂ ಸಮ್ಮತಿಸದಿರು–ಅಂತಲೋ ಅದರ ಸರಾಸರಿ ಪದ ಗಳಲ್ಲೋ ಲಾರ್ಡ್ ಕರ್ಜನ್ ಒಮ್ಮೆ ಘೋಷಿಸಿದ ಹಾಗೆ ಜ್ಞಾಪಕ. ಒಂದುಸಲ ಈ ಮಾತನ್ನು ಮನಸ್ಸಿನಲ್ಲೇ ತಿರುವಿ ಹಾಕುತ್ತಿದ್ದಾಗ ಅನ್ನಿಸಿತು.... ಭೂಮಿಯ ಮೇಲೆ ಮನುಷ್ಯಪ್ರಾಣಿಯು ಅವತಾರ ಆಗಿ ಹತ್ತುಲಕ್ಷ ವರ್ಷಗಳಾಗಿರಬೇಕು. ಹೈಡೆಲ್‌ಬರ್ಗ್, ಪಿಲ್ಟ್‌ಡಾನ್, ಜಾವ್, ನಿಯಾಂಡರ್ಥಲ್ ಮನುಷ್ಯರಿರಲಿ, ಈಚಿನ ಹೋಮೋಸೇಪಿ ಯನ್ಸ್ ಮನುಷ್ಯನಿಗೇ ಐವತ್ತುಸಾವಿರ ವಯಸ್ಸಾಗಿರಬೇಕು. ಹಲ್ಲು ಕುಟಿಗನಾಗಿದ್ದಾಗ, ಕಂಚು ಕಬ್ಬಿಣಗಳನ್ನು ಕಾಯಿಸಲು ಕಲಿಯುತ್ತಿದ್ದಾಗ ಅವನು ಅನಾಮಧೇಯನಾಗಿದ್ದದ್ದು ಅವನ ತಪ್ಪಲ್ಲ. ಆ ಅಂಧಕಾರ ಯುಗ ಬಿಟ್ಟು ಸಾವಿರಾರು ಪೀಳಿಗೆಗಳನ್ನ ಹೆತ್ತು ಈಗಿನ ಆಧುನಿಕ ಯುಗ ನಿರ್ಮಿಸಿದವನ ಇತಿಹಾಸವನ್ನೊಂದುಸಲ ಕೆದಕಿದರೆ ಎಷ್ಟು ಜನ ಮಹಾಪುರುಷರು ಸಿಕ್ಕಿಯಾರು ? ಒಂದು ಪಟ್ಟಿ ಬರೆದೆ. ಕೀರ್ತಿ ನಿಜ ವಾಗಿ ಶೇಷರಾದವರ ಪಟ್ಟಿ. ಪ್ರಥಮಶ್ರೇಣಿಯ ಸಂಖ್ಯೆ ಬಹಳ ಚಿಕ್ಕ ದಾಗಿ ಕಂಡಿತು. ಕನ್‌ಫ್ಯೂಷಿಯಸ್, ಮೋಸೆಸ್, ಬುದ್ಧ, ಕ್ರಿಸ್ತ, ರಾಮ ಕೃಷ್ಣರಂಥ ಆರೇಳು ಧಾರ್ಮಿಕ ಪುರುಷರು; ಗಾಂಧಿ, ಲೆನಿನ್, ನೆಹರು ಗಳಂಥ ನಾಲ್ಕೈದು ಜನನಾಯಕರು; ಅಶೋಕ, ಅಲೆಕ್ಸಾಂಡರ್, ಸೀಸರ್, ನೆಪೋಲಿಯನ್ ಇತ್ಯಾದಿ ಹತ್ತು ಮಹಾಯೋಧರು; ದಾವಿಂಚಿ,

ಮಾರ್ಕೋನಿ, ಐನ್‌ಸ್ಟೈನ್‌ರಂಥ ಹತ್ತಿಪ್ಪತ್ತು ವಿಜ್ಞಾನಿಗಳು; ವಾಲ್ಮೀಕಿ, ಕಾಳಿದಾಸ, ಶೇಕ್ಸ್‌ಪಿಯರ್, ಟಾಲ್‌ಸ್ಟಾಯ್. ಷಾ, ಟಾಗೋರ್ ಇವರಂಥ ಏಳೆಂಟು ಲೇಖಕರು; ಬೀಥೋವನ್, ರೆಂಬ್ರಾಂಟ್, ರವಿವರ್ಮ, ಪಿಕಾಸೋ, ಚಾಪ್ಲಿನ್ ಇತ್ಯಾದಿ ಹತ್ತು ಹನ್ನೆರಡು ಕಲಾವಿದರು— ಇಷ್ಟೆಲ್ಲಾ ಹೆಸರುಂಗಳನ್ನು ತುಂಬಿಯೂ ನನ್ನ ಪಟ್ಟಿ ನೂರಕ್ಕೆ ಬರಲಿಲ್ಲ. ಈ ಮಹಾತ್ಮರಿರಲಿ. ಹೇಗೋ ಇತಿಹಾಸದಲ್ಲಿ ನುಸುಳಿ ತಮ್ಮ ಸುತ್ತಮುತ್ತಲ ವಾತಾವರಣವನ್ನು ಕದಡಿ ಖ್ಯಾತಿ ಹೊಂದಿದ ಹತ್ತಾರು ಹೆಸರುಗಳೂ ಮನಃಚಕ್ಷುವಿನೆದುರು ಕುಣಿದಾಡ ತೊಡಗಿದವು. "ಛಿ! ಏನು ನೀವು ಸಾಧಿಸಿದ್ದು!" ಅಂದದ್ದೇ ಅವನ್ನೆಲ್ಲ ಒಂದುಸಲ ಕೈಬೀಸಿ ಕೆಡವಿದೆ. ಆಗ....

[ಗಾಳಿ ಬೀಸಿದ ಸದ್ದಾಗಿ ಅದು ಹಾಗೇ ಕ್ಷಯಿಸಿ ಸಣ್ಣನೆಯ ಹಿನ್ನೆಲೆಯ ಸಂಗೀತದ ಜತೆ ಬೆರೆಯುವುದು. ಅದರ ಮೇಲೆ....]

ಅನಾಮಿಕ : ನಿನ್ನ ಪಟ್ಟಿಯಲ್ಲಿ ನನ್ನ ಹೆಸರಿದೆಯೋ ನೋಡು. ಇರಲಾರದು. ಆದರೂ ನೋಡಿ ಹೇಳು.

ನಿರೂ : ಏನು ನಿನ್ನ ಹೆಸರು ?

ಅನಾ: ನನ್ನ ಹೆಸರು ಅನಾಮಿಕ.

ನಿರೂ: ಅಂಥ ಹೆಸರೇ ಕೇಳಿಲ್ಲ ನಾನು.

ಅನಾ: ಅದೇ ನಾನೂ ಅಂದುಕೊಂಡದ್ದು !

ನಿರೂ: ಯಾರು ನೀನು, ಎಲ್ಲಿಂದ ಬಂದೆ ? ನನ್ನಲ್ಲೇನಾಗಬೇಕಾಗಿದೆ ನಿನಗೆ ?

ಅನಾ: ಯಾರು ? ಹೇಳಿದೆನಲ್ಲ, ಅನಾಮಿಕ. ಎಲ್ಲಿಂದ ಬಂದೆ, ಅಂದರೆ ನೀನೆಲ್ಲಿ ಯವನು ಅಂತಲೋ ? ನಿನ್ನ ಸೀಮಿತ ಬುದ್ಧಿಗೆ ಅದನ್ನ ವಿವರಿಸಿ ತಿಳಿ ಸೋದು ಸ್ವಲ್ಪ ಕಷ್ಟ ! (ಹಂಗಿಸುತ್ತ) ನಿನ್ನ ಪಟ್ಟಿಯಲ್ಲಿ ನನ್ನ ಹೆಸರೇ ಇಲ್ಲ ಅಂದಮೇಲೆ ನಿನ್ನ....ಹಹ....ಜ್ಞಾನದೃಷ್ಟಿ ಆ ನಿನ್ನ ಪ್ರಭಾವಳಿಯ ಓಣಿ ಬಿಟ್ಟು ಆಕಡೆ ಈಕಡೆ ಹರಿಯಲಾರದು ಅಂತ ಹೇಳಲೇಬೇಕಾಗಿಲ್ಲ.

ನಿರೂ: ಕ್ಷಮಿಸಬೇಕು, ನನ್ನ ಮೇಲೆ ನಿನಗೆ ಬಹಳ ಕೋಪ ಬಂದಿರೊ ಹಾಗಿದೆ. ನಾನು ಬರೆದ ಪಟ್ಟಿ ನನ್ನ ಸ್ವಂತ ತಿಳುವಳಿಕೆಗೆ ಮಾತ್ರ. ಅದರಲ್ಲಿ ಹೆಸರಿಲ್ಲದವರೆಲ್ಲ ನಿಷ್ಪ್ರಯೋಜಕರು ಅನ್ನಲಾದೀತೇ ! ಬೇಕಂತಲೇ ನಾನು ಅದರಲ್ಲಿ ಎಷ್ಟೋ ಹೆಸರುಗಳನ್ನು ಸೇರಿಸಿಲ್ಲ. ಹ್ಯಾನಿಬಾಲ್, ಕೊಲಂಬಸ್ ಗ್ಯಾರಿಬಾಲ್ಡಿ, ಅಕ್ಬರ್, ಕೆಮಾಲ್ ಅಟಾಟುರ್ಕ್, ಸನ್‌ಯಾಟ್‌ಸನ್, ಹಿಟ್ಲರ್, ಚರ್ಚಿಲ್ ಇವರುಗಳೂ ನನ್ನ ಪಟ್ಟಿಯಲ್ಲಿಲ್ಲ........ಹಾಗೇ ಸೆಜಾನ್, ಚೇಯುಕೋವಿಸ್ಕಿ, ಇಬ್ಸನ್, ಗ್ರೇಟಾಗಾರ್ಬೋ ಇವರೂ ಇಲ್ಲ....ಗೆಲಿಲಿಯೋ. ಕ್ಯೂರಿ, ಫ್ಲೆಮಿಂಗ್............

ಅನಾ: ಸಾಕು ಸಾಕು ಸಾಕು, ಇವರೆಲ್ಲರ ಇನ್ನೂ ಸಾವಿರ ಮಂದಿಯ ಪರಿಚಯ ನಿನಗಿದೆ ಅಂತ ನಾನು ಒಪ್ಪಿಕೊಂಡಿದ್ದೇನೆ ! ಆದರೆ ಪ್ರಮುಖ ವ್ಯಕ್ತಿಗಳು ಅನ್ನಿಸಿಕೊಳ್ಳೋಕೆ ಯೋಗ್ಯತೆ ಇದ್ದೂ, ಇವರಿಗೆ ಸಿಕ್ಕಿದ ಹಾಗೆ ಸಾಧನಗಳು ಸಿಕ್ಕದಿದ್ದ ಕಾರಣ ಇನ್ನೂ ಸಾವಿರಾರು ಮಹಾಮಾನವರು ಪ್ರಸಿದ್ಧಿಗೆ ಬಾರದೆ ಹೋಗಿರಬಹುದು ಅಂತ ಎಂದಾದರೂ ಯೋಚಿಸಿದೆಯಾ ? ಅಲ್ಲದೆ, ಸಣ್ಣಪುಟ್ಟ ಕ್ಷೇತ್ರಗಳಲ್ಲಿ "ಹೇಗೊ ಪ್ರಕಾಶಿಸಬೇಕು" ಅನ್ನುವ ಅದೇ ಆಶಯದ ಒತ್ತಡಕ್ಕೆ ಬಾಗಿ ಒಂದಲ್ಲ ಒಂದು ಪ್ರಯತ್ನದಲ್ಲಿ ಕ್ಷಣಕಾಲವಾದರೂ ಯಶಸ್ವಿಯಾದ ಹತ್ತಾರು ಸಾವಿರ ವ್ಯಕ್ತಿಗಳು ನಿನ್ನ ಗಮನಕ್ಕೆ ಬಂದಿದ್ದುಂಟೇ ?........

ನಿರೂ: ನೀನೆಲ್ಲಿಯವನು ಅಂದದ್ದಕ್ಕೆ ಇದೆಲ್ಲ ಉತ್ತರವೇನು ?

ಅನಾ: ಸರಿಯಾಗಿ ಕೇಳು. ನಿನಗೆ ತಿಳಿಯದ ಸಾವಿರಾರು ಹೆಸರಿಲ್ಲದ........ ಆದರೆ ಹೆಸರು ಪಡೆಯುವ ಆಕಾಂಕ್ಷೆ ಇರುವ........ಮಹಾಪುರುಷರೆಲ್ಲರ ಅವತಾರ ಎತ್ತಿದವನು ನಾನೇ. ಮನುಷ್ಯವರ್ಗದ ಆಸೆ, ಅಭಿಲಾಷೆಗಳೆಲ್ಲವನ್ನೂ ಒಂದೇ ಗಂಟಿನಲ್ಲಿ ಕಟ್ಟಿ, ನಿನ್ನ ಕಲ್ಪನೆಗೆಂತಲೇ ಅವುಗಳಿಗೆ ಮೂರ್ತ ಸ್ವರೂಪಕೊಟ್ಟು ನಿನ್ನೆದುರಿಗೆ ಬಂದು ನಿಂತಿರೋ ಕಾಲದೇಶಾತೀತ ವ್ಯಕ್ತಿ ನಾನು........

ನಿರೂ: ಅಬ್ಬ! ವಿಚಿತ್ರವೇ ಸರಿ, ಅದೂ ಹೆಸರು ಬೇರೆ ಅನಾಮಿಕ. ನಿನ್ನ ವಯಸ್ಸು........?

ಅನಾ: ಮನುಷ್ಯ ವರ್ಗದ ವಯಸ್ಸು ನನ್ನ ವಯಸ್ಸು. ಒಂಬತ್ತು, ಹತ್ತು ಲಕ್ಷ ವರ್ಷಗಳಿರಬಹುದು. ಈ ಪರಿಧಿಯಲ್ಲಿ ನಾನು ಒಂದೊಂದು ಸಲ ರೂಪವೆತ್ತಿದಾಗಲೂ ಅದೇ ಪ್ರಸಿದ್ಧಿಪಡೆಯುವ ಪಂದ್ಯದಲ್ಲಿ ಸೇರಿ, ಹಿಂದುಗಡೆಯಿಂದ ಮೊದಲನೆಯವನಾಗಿ ಬಂದಿದ್ದೇನೆ !

ನಿರೂ: ಅಯ್ಯೋ ಪಾಪ ! ಆದರೆ, ನೋಡು, ಒಂದು ಮುಖ್ಯ ವಿಷಯ ನೀನು ಮರೆತ ಹಾಗಿದೆ,

ಅನಾ: ಏನದು ?

ನಿರೂ: ಪ್ರಪಂಚದಲ್ಲಿ ಪ್ರಸಿದ್ಧಿಪಡೆದಿರುವವರೆಲ್ಲ ತಮ್ಮ ಒಂದಲ್ಲ ಒಂದು ವಿಶೇಷ ವೈಯಕ್ತಿಕ ಗುಣದಿಂದಾಗಿ ಜಯಿಸಿದವರು. ಯೋಚಿಸಿ ನೋಡು.

ಅನಾ : ಅಯ್ಯೋ, ಅವಿವೇಕಿ ! ಯೋಚಿಸಬೇಕಾಗಿರುವುದು ನೀನು. ನಿನ್ನ ಪಟ್ಟಿಯಲ್ಲಿರುವವರೆಲ್ಲ, ಪ್ರಸಿದ್ಧ, ಸುಪ್ರಸಿದ್ಧ ಮೇಧಾವಿಗಳೆಲ್ಲ ಈಚಿನವರು. ಅವರಿಗೆ ಪ್ರಸಿದ್ಧರಾಗಲು ನವೀನ ಸಾಧನಗಳ ಒತ್ತಾಸೆ ಅಗತ್ಯ. ಅಂದರೆ, ಹೊಗಳುಭಟ್ಟರ ತಂಡ, ಕ್ಯಾಮೆರಾ, ಮೈಕ್ರೋ-ಫೋನ್, ನ್ಯೂಸ್‌ಪೇಪರು, ರೇಡಿಯೋ, ಇತ್ಯಾದಿ. ಇಂಥ ಸಲಕರಣೆಗಳಿಲ್ಲದಿದ್ದರೆ ಅವರಲ್ಲಿ ಮುಕ್ಕಾಲು ಪಾಲು ಜನ ನನ್ನ ಹಾಗೇ ಅನಾಮಿಕರಾಗಿರುತ್ತಿದ್ದರೋ ಏನೋ ! ನಾನು ಪ್ರಾಚೀನ ಯುಗದವನಾಗಿಯೂ ಎಷ್ಟೋ ಸಲ ಅಪ್ರಸಿದ್ಧ ಕುಪ್ರಸಿದ್ಧ ಜನ್ಮಗಳನ್ನೆತ್ತಿ ಜೀವನ ಸಂಗ್ರಾಮದಲ್ಲಿ ಹೋರಾಡಿದ್ದೇನೆ— ಆ ಮೇಲಿನ ಯಂತ್ರಯುಗದಲ್ಲೂ ಹೊಸ ಹೊಸ ರೀತಿಯಲ್ಲಿ ಬಣ್ಣದ ಬೆಳಕಿಗೆ ತಲೆಯೊಡ್ಡಿ ಪ್ರಕಾಶಕ್ಕೆ ಬಂದಿದ್ದೇನೆ !

ನಿರೂ : ಪ್ರಸಿದ್ಧನಾದೆ ಅಂತ ಹೇಳಿಕೊಂಡರೆ ಸಾಕೆ ? ಒಂದು ಜೀವನಕಥೆ, ಒಂದು ಧ್ಯೇಯಸಾಧನೆಯ ಪ್ರಕರಣ ಇದ್ದದ್ದಕ್ಕೊಂದು ಗುರುತು.... ಇವು ಯಾವುದೂ ಇಲ್ಲದೆ....

ಅನಾ : ನಾನು ಪ್ರಸಿದ್ಧಿ ಪಡೆದದ್ದು ನಿನ್ನ ಗಮನಕ್ಕೆ ಬರದಿದ್ದರೆ ಯಾರ ತಪ್ಪು ! ಅದಕ್ಕೇ ನಿನಗೆ ನನ್ನ ವಿಶ್ವರೂಪದರ್ಶನ ಮಾಡಿಸಿ ಕೊಡೋಣ

ಅಂತ ನಾನು ಪ್ರತ್ಯಕ್ಷವಾಗಿರೋದು. ನನ್ನ ಜತೆ....ರೋಮನ್ ಚಕ್ರವರ್ತಿ ಕ್ಯಾಲಿಗುಲಾ ಹೆಸರು ನಿನ್ನ ಪಟ್ಟಿಯಲ್ಲಿಲ್ಲ. ಆದರೆ....

[ಸಂಗೀತ ಸೇತು]

ಕ್ಯಾಲಿಗುಲಾ : (ಅಸಾಮಿಕನ ದನಿಯಲ್ಲಿ. ಆದರೆ ಮಾತಿನಲ್ಲಿ ಸಮ್ರಾಟನ ಧೋರಣೆ) ಹಾಗಾದರೆ, ಒಪ್ಪಿದೆವು. ರಾಯಭಾರಿಗಳೇ, ನಿಮಗೆ ಬೇಕಾದ ಸಹಾಯ ನಾವು ಮಾಡುತ್ತೇವೆ. ಮೊದಲು ನೀವೀಗ ಮಾಡಬೇಕಾದದ್ದು, ನಮ್ಮ ಪ್ರಧಾನಿಗಳನ್ನು ಕಂಡು ಮಾತನಾಡಿ. ಈಗಾಗಲೇ ಅವರಲ್ಲಿ ನಿಮಗೆ ಸಲ್ಲಿಸಬೇಕಾದ ಧನಕನಕಾದಿಗಳ ಪ್ರಸ್ತಾಪಮಾಡಿದ್ದೇವೆ.... ಯಾರಲ್ಲಿ! ರಾಯಭಾರಿಗಳನ್ನು ಮರ್ಯಾದೆಯಿಂದ ಪ್ರಧಾನಿಗಳ ಅರಮನೆಗೆ ಕರೆದುಕೊಂಡು ಹೋಗಿ (ಸ್ವಲ್ಪಗದರಿ) ಹೂಂ! ಬೇಗ. ಅವರ ಪುತ್ರಿಯರಿಬ್ಬರೂ ಇಲ್ಲೇ ಇರಲಿ. ಇಲ್ಲಿ ಸುಂದರಿಯರಿಗೇ ಬೇರೆ ಸತ್ಕಾರದ ಏರ್ಪಾಡಿದೆ. ರಾಯಭಾರಿಗಳೇ. (ಇನ್ನೂ ಬಲವಾಗಿ ಗರ್ಜಿಸಿ) ಹೂಂ! ಕರೆದುಕೊಂಡು ಹೋಗಿ.

ಭಟರುಗಳಿಬ್ಬರು : (ಅಬ್ಬರಿಸಿ) ಹೂಂ! ನಡಿಯಯ್ಯಾ ಮುಂದಕ್ಕೆ, ಮಾಹಾದೇವಿ ನಿಂತಹಾಗೆ ನಿಂತಿದ್ದೀಯೆ. ಕಿವಿ ಕೇಳಿಸಲಿಲ್ವೇ– ಲೋ, ನೀನೀ ರಟ್ಟೆ ಹಿಡಿ....

[ಇಬ್ಬರು ಯುವತಿಯರ ಚೀತ್ಕಾರ. ಮಧ್ಯೆ ರಾಯಭಾರಿಯ ಪ್ರತಿಭಟನೆಯ ಹೂಂಕಾರ. ಅವನ ಕುತ್ತಿಗೆ ಹಿಡಿದು ಬಾಯಿಂದ ಮಾತು ಹೊರಡದಂತೆ ಮಾಡಿದ ಸಂಕೇತ. ಈ ಅಲ್ಲೋಲ ಕಲ್ಲೋಲವೆಲ್ಲ ಯುವತಿಯರ ಬಿಕ್ಕಳಿಕೆಯ ಸದ್ದಿನಲ್ಲಿ ಲೀನವಾಗುತ್ತದೆ.]

ಸೇವಕ : ಮಹಾಪ್ರಭುಗಳು ಅಪ್ಪಣೆ ಕೊಡಿಸಿದ ಪ್ರಕಾರ. ಆ–ಆ–ಗ್ರೀಕ್ ವ್ಯಾಪಾರಿ ತಮ್ಮ ನವವಧುವಿನ ಜತೆ ಪ್ರಭುಗಳ ದರ್ಶನಕ್ಕಾಗಿ ಕಾದು ನಿಂತಿದ್ದಾರೆ.

ಕ್ಯಾಲಿಗುಲಾ : ಒಳ್ಳೆದು, ನೀನು ಆ ನವವಧುವನ್ನು ನೇರವಾಗಿ ರಾಣೀವಾಸಕ್ಕೆ ಕಳಿಸುವ ಏರ್ಪಾಡು ಮಾಡು. ಆ ವರ್ತಕನನ್ನು ಹಿಂಗಟ್ಟುಕಟ್ಟಿ

ಇಲ್ಲಿಗೆಳೆದುಕೊಂಡು ಬರಲಿ, ಸ್ವಲ್ಪ ಆತನ ವಿಚಾರಣೆ ನಡಿಸಬೇಕಾದ್ದಿದೆ. ಹೊ ಹ್ಹೊ ಹ್ಹೋ!

[ಆತನ ನಗೆ ಕ್ರಮೇಣ ಒಂದಾಗುವುದು]

ಅನಾ : ನಿನ್ನ ಪಟ್ಟಿಯಲ್ಲಿ ಸೇರಿಸಲಾರೆ ಅವನನ್ನ ಅಲ್ಲವೇ ? ಆತನೇನು ದಂಡ ಯಾತ್ರೆ ಮಾಡಿದ, ಯಾವ ಸಮುದ್ರ ದಾಟಿ ಸಾಮ್ರಾಜ್ಯ ಕಟ್ಟಿದ, ಅಂತ ಯೋಚಿಸ್ತೀಯೇನು ? ಆದರೆ ಅವನಿಗೆ ದುಷ್ಟ, ಸ್ವೇಚ್ಛಾಚಾರಿ ಅಂತ ಪಟ್ಟ ಬಂದದ್ದನ್ನು ಮರೆತಿದ್ದಿ ! ಹ್ಯಾಗೂ ಅವನು ಚರಿತ್ರೆಯಲ್ಲಿ ಒಂದು ಅಧ್ಯಾಯ ತುಂಬಿದನೋ ಇಲ್ಲೊ ?.... ಸ್ಪೈಯಿನ್ ಕಡೆಯ ವ್ಯಾಂಡಲ್ (vandal) ರಾಜರುಗಳ ಪರಿಚಯವೂ ನಿನಗಿರಲಾರದು. ವ್ಯಾಂಡಲ್ ರಾಜರುಗಳು ಅಕ್ಕಪಕ್ಕದ ದೇಶಗಳಿಗೆ ನುಗ್ಗಿ ಹಾವಳಿಮಾಡಿ ಅಲ್ಲಿನ ಕಲಾಕೃತಿಗಳನ್ನು ಒಡೆದು ನಾಶಮಾಡಿ ಬರುತ್ತಿದ್ದರು. ಅವರ ಕೃತ್ಯಕ್ಕೆ ವ್ಯಾಂಡಲಿಸಮ್ ಅಂತಲೇ ಒಂದು ಪದ ಹುಟ್ಟಿಕೊಂಡಿತು. ಅಂದರೆ ವ್ಯಾಂಡಲ್ ಅವತಾರ ಎತ್ತಿ ನಾನು ಚರಿತ್ರೆಯಲ್ಲಿ ಮಾತ್ರವಲ್ಲ ಶಬ್ದ ಕೋಶಗಳಲ್ಲೂ ಹೆಸರು ಸಂಪಾದಿಸಿದ್ದೇನೆ ಅನ್ನೋದಕ್ಕೆ ಹೇಳಿದೆ, ಅಷ್ಟೆ.

ನಿರೂ: ಇಂಥ ಸಣ್ಣಪುಟ್ಟ ನಿರಂಕುಶ ಪ್ರಭುಗಳು ಚರಿತ್ರೆಯಲ್ಲಿ ಎಷ್ಟೋ ಜನ ಆಗಿಹೋದರು, ಒಪ್ಪಿದೆ. ನಿನ್ನ ಅವತಾರಗಳು ಒಂದಿಷ್ಟು ಅವಾಂತರ ಮಾಡಿ ತಮ್ಮ ಜೀವನ ಕಾಲದಲ್ಲಿ ಪ್ರಸಿದ್ಧಿ ಪಡೆದರು. ಅಷ್ಟು ಮಾತ್ರಕ್ಕೆ ಅವರಿಗೆ ಮಾನವ ಇತಿಹಾಸದಲ್ಲಿ ಸ್ಥಾನ ಸಿಕ್ಕಿದ ಹಾಗಾಯ್ತು ?

ಅನಾ: ನೀನು ಚರಿತ್ರೆ ಅನ್ನುವುದು ಯಾವುದಕ್ಕೆ ? ಯುದ್ಧಗಳಲ್ಲಿ ಗೆದ್ದವರ ಅಧ್ಯಾಯಗಳಿಗೆ ತಾನೆ? ನನಗದರಲ್ಲಿ ಯಾವ ಆಸಕ್ತಿಯೂ ಇಲ್ಲ. ಆಕಾಂಕ್ಷೆ ಅನ್ನೋದು ಅವರಿಗೆ ಮಾತ್ರವೇನೇ ?ನನಗೂ ನಿನಗೂ.... ಅಂದರೆ 'ಅಹಂ' ಅಂದುಕೊಳ್ಳಲು ಅರ್ಹತೆ ಪಡೆದ ಪ್ರತಿಯೊಬ್ಬನಿಗೂ ತನ್ನದೇ ಆದ ಅನುಭವ ಆಸೆಗಳಿದ್ದೇ ಇರುತ್ತವೆ. ಹೇಗೂ ಪ್ರತಿಯೊಬ್ಬನೂ ನಿನ್ನ ಅಳತೆಯಲ್ಲಿ ಪ್ರಸಿದ್ಧನಾಗಲಾರ. ನಾನಾದರೆ ಒಂದಲ್ಲ ಒಂದು ಅಡ್ಡಹಾದಿ ಹಿಡಿದು ಅಲ್ಪ ಕಾಲಕ್ಕಾದರೂ ಪ್ರಸಿದ್ಧನಾದವನು............

ರಾಸ್‌ಪ್ಯುಟಿನ್ ಅಂತ ಒಬ್ಬ ಸನ್ಯಾಸೀ ವೇಷಧಾರಿಯ ಹೆಸರು ನೀನು ಕೇಳಿರಬಹುದು........

[ಸಂಗೀತ ಸೇತು]

ರಾಸ್‌ಪ್ಯುಟಿನ್(ನಾಟಕೀಯ ಧ್ವನಿ): ಆದ್ದರಿಂದ, ಮಕ್ಕಳೇ, ನಮ್ಮ ಉಪದೇಶ ವನ್ನು ಚೆನ್ನಾಗಿ ಅರ್ಥಮಾಡಿಕೊಂಡು ಅನುಸರಿಸಿ. ಇನ್ನೊಂದುಸಲ ತತ್ತ್ವ ವನ್ನು ವಿವರಿಸುತ್ತೇನೆ, ಮಂದಟ್ಟು ಮಾಡಿಕೊಳ್ಳಿ....ಮೋಕ್ಷ ಪ್ರಾಪ್ತಿಗೆ ಪ್ರಾಯಶ್ಚಿತ್ತವೇ ಮುಖ್ಯ ಮಾರ್ಗ. ಪ್ರಾಯಶ್ಚಿತ್ತ ಮಾಡುವುದಕ್ಕೆ ಪಶ್ಚಾತ್ತಾಪಬೇಕು. ಪಶ್ಚಾತ್ತಾಪಪಡಬೇಕಾದರೆ ಮೊದಲು ಪಾಪ ಮಾರ್ಗ ಹಿಡಿಯುವುದು ಅಗತ್ಯ. ಆದ್ದರಿಂದ, ಪಾಪಮಾಡಿ, ಆಮೇಲೆ ಮನಸಾರ ಪಶ್ಚಾತ್ತಾಪ ಪಟ್ಟು ಪ್ರಾಯಶ್ಚಿತ್ತ ಮಾಡಿ ಮೋಕ್ಷಕ್ಕೆ ಮಾರ್ಗ ಮಾಡಿಕೊಳ್ಳಿರಿ.... ಇನ್ನೂ ವಿವರಣೆಗಳು ಬೇಕಾದವರು ಚಕ್ರವರ್ತಿ, ಅವರ ಎಲ್ಲ ಪರಿವಾರದವರೂ ಆಗಾಗ್ಯೆ ನಮ್ಮ ಉಪದೇಶಗಳ ಟಿಪ್ಪಣಿ ಹೊರಡಿಸಿರುವುದನ್ನು ಗಮನಿಸುತ್ತ ಬನ್ನಿ........

(ನಾಲ್ಕೈವರ 'ಆಹಾಹಾ' ಇತ್ಯಾದಿ ಮೆಚ್ಚುಗೆಯ ಮಾತುಗಳು; ಕ್ರಮೇಣ ಸದ್ದು ಕೇಳದಾಗುತ್ತದೆ)

ಅನಾ : ನಾನು ಬರಿಯ ಬೋಧಕನಾಗಿರಲಿಲ್ಲ. ಪಾಪಜೀವನ ಹೇಗೆಲ್ಲ ನಡೆಸ ಬಹುದು ಅನ್ನೋದನ್ನೂ ತೋರಿಸಿಕೊಟ್ಟೆ. ರಷ್ಯದ ರಾಜಮನೆತನವೇ ನನ್ನ ವಾಕ್ಶಕ್ತಿಯ ಪ್ರಭಾವಕ್ಕೀಡಾಗಿತ್ತು. ಚಕ್ರವರ್ತಿಯೇ ನನ್ನ ಅಂಗೈ ಮೇಲಿನ ಗೋಜಿಯಾಗಿದ್ದ. ಇದ್ದಷ್ಟು ಕಾಲ ಮೆರೆಮೆರೆದ ಖ್ಯಾತಿ ಗಳಿಸಿದ್ದೆ.... ಇನ್ನೊಂದು ಪ್ರಸಂಗ.... ನೆರೆ ಎದ್ದ ಬ್ರಹ್ಮಪುತ್ರಾನದಿ....

(ನದಿಯ ತೀರದ ಸದ್ದು. ಜನರ ಗುಜು ಗುಜು ಶಬ್ದ.)

ಒಬ್ಬ : ಏನಪ್ಪ ಎಲ್ರೂ ನಿಂತಿದ್ದೀರಿ ಇಲ್ಲಿ? ದೋಣಿ ಬರುತ್ತೇನು ಇವತ್ತು ?

ಇನ್ನೊಬ್ಬ : ಛೇ ಛೆ! ಇವತ್ತೆಲ್ಲಿ, ಈ ಹೊಳೇಲಿ ದೋಣಿ! ಇನ್ನೂ ಹತ್ತು ದಿನ ದೋಣಿ ಮುಖ ಕಂಡರೆ ಆಶ್ಚರ್ಯ. ಈಗ.... ನಮ್ಮ ಭೈರವ ಬಾಬಾ ಯೋಗಾಸನದಿಂದ ಎದ್ದವರೇ, ಮುಚ್ಚಿದ ಕಣ್ಣು ತೆರೆಯ

ದೇನೇ, ಕಾಲ್ನಡಿಗೇಲಿ ಹೊಳೆ ದಾಟ್ತಾರೆ. ಈ ಅದ್ಭುತ ನೋಡೋಕೇ ನಾವು ನಿಂತಿರೋದು.

ಒಬ್ಬ : ಆಹಾ! ಧನ್ಯ ನಾನು. ಒಳ್ಳೇ ಸಮಯಕ್ಕೆ ಬಂದಹಾಗಾಯ್ತು.

ಇನ್ನೊಬ್ಬ : ಅಗೊ, ಅಲ್ನೋಡು, ನೂಕಲಾಟ ಶುರು ಆಗಿದೆ. ಭೈರವ ಬಾಬಾ ಸಮಾಧಿಯಿಂದ ಎದ್ದರೂಂತ ಕಾಣುತ್ತೆ.

ಒಬ್ಬ : ಅಡ್ಡಬಿದ್ದೆ ಪ್ರಭೊ! ಇಲ್ಲಿಂದಲೇ ಅಡ್ಡಬಿದ್ದೆ, ಭಗವಂತಾ!

ಇನ್ನೊಬ್ಬ : ಪುಣ್ಯ ಮಾಡಿದ್ದೆವು ನಾವೆಲ್ಲ. ಜೈ ಭೈರವಬಾಬಾ!

ಹಲವಾರುಜನ : ಜೈ ಭೈರವ ಬಾಬಾ! ಜೈ....

(ಧ್ವನಿ ಕ್ಷಯಿಸುತ್ತ ಹೋಗುವುದು)

ಅನಾ : ಇದು ಇನ್ನೊಂದು ಸಾಧನ.... ನಿಜವಾಗಿ ದೈವಾಂಶಪುರುಷರಿಗೂ, ಸಿದ್ಧಿಗಳನ್ನ ಕೈಗತ ಮಾಡಿಕೊಂಡು ಯಕ್ಷಿಣಿ ವಿದ್ಯೆಗಳನ್ನ ತೋರಿಸು ವವರಿಗೂ ಇರುವ ವ್ಯತ್ಯಾಸ ತಿಳಿಯದ ಮುಗ್ಧ ಜನವೂ ನನಗೊಂದು ಸಾಧನ, ಪ್ರಸಿದ್ಧಿ ಪಡೆಯುವುದಕ್ಕೆ. ನೋಡು, ಆ ಸನ್ಯಾಸಿಗೆ ಎಷ್ಟು ಖ್ಯಾತಿ, ಎಷ್ಟು ಜನ ಅವನ ದರ್ಶನ ನೋಡುವುದಕ್ಕೆ ಎಂಟುದಿಕ್ಕಿನಿಂದಲೂ ಬಂದು ಸೇರುತ್ತಿದ್ದರು, ಅವನ ಸೇವೆ ಮಾಡುತ್ತಿದ್ದರು! ನೆಟ್ಟಗೆ ಸಾಯುಜ್ಯ ಪದವಿಯನ್ನ ಹುಡುಕುತ್ತ ಯಾವುದೋ ಗುಹೇಲಿ ಸೇರಿ ಕೊಂಡು ಗಡ್ಡಾ ಬೆಳೆಸ್ತಾ ಕೂತಿದ್ದರೆ. ಅವನ ಹೆಸರು ಯಾರ ಕಿವೀ ಗಾದರೂ ಬೀಳ್ತಿತ್ತೇನು?

ನಿರೂ : ಪಾಪ, ಮುಕ್ತಿಸಾಧನೆಗೇಂತ ಹೊರಟವನನ್ನ, ಜನರನ್ನ ಮರುಳು ಮಾಡೋ ಸರ್ಕಸ್ಸಾಗಿ ಮಾರ್ಪಡಿಸಿದ್ದಕ್ಕೆ ನೀನೇ....ಅನ್ನು!

ಅನಾ : ಮತ್ತಿನ್ನೇನು? ಆ ಸನ್ಯಾಸಿಗೆ ಪ್ರಾಪ್ತಿ ಇದ್ದರೂ ಅಷ್ಟೇ ಸಿದ್ಧಿ, ಮುಂದಿನ ಜ್ಞಾನಮಾರ್ಗ ಎಂದಿಗೂ ಅವನದಾಗುತ್ತಿರಲಿಲ್ಲ. ಇದ್ದ ಶಕ್ತೀನ ಸ್ವಾರ್ಥಕ್ಕಾದರೂ ಉಪಯೋಗಿಸಿದ ಹಾಗಾಯ್ತೋ ಇಲ್ವೊ, ನನ್ನ ಸಹಾಯದಿಂದ? ಇನ್ನ.... ಯಂತ್ರಯುಗದ ಪ್ರಚಾರ ಸಾಧನ

ಗಳನ್ನು ನಾನೂ ಉಪಯೋಗಿಸಿಕೊಂಡಿದ್ದೀನಿ ಅಂತ ಹೇಳಿದೆನಲ್ಲ– ಹೇಗೆ ಅಂತ ಒಂದಿಷ್ಟು ಹೇಳ್ತೀನೆ, ಕೇಳು.

[ಟೆಲಿಫೋನ್ ಬೆಲ್]

ಬ್ಬ : (ರಿಸೀವರನ್ನೆತ್ತಿ) ಹಲೋ, ಹೌದು, ವೆಸ್ಟ್‌ಮೋರ್ ಪಬ್ಲಿಸಿಟಿ ಬ್ಯೂರೋ.

ಬ್ಬ : ಹೌದು, ನಾನೇ ಅವರ ವಿಸಿಟ್ಟಿನ ಪ್ರಚಾರಕಾರ್ಯಕ್ರಮದ ಕಾಂಟ್ರಾಕ್ಟ್ ತಗೊಂಡಿರೋವರು.

ಬ್ಬ : ನೋಡಿ, ಮೆರವಣಿಗೆಯಲ್ಲಿ ಭಾಗವಹಿಸಿದ ಜನ ಎಷ್ಟು ಅಂತ ಖಚಿತವಾಗಿ ಹೇಳೋದಕ್ಕೆ ಇನ್ನೂ ಒಂದು ಗಂಟೆ ಅವಧಿಯಾದರೂ ಬೇಕು. ಇಂಥಾ ಸ್ವಾಗತ ಸಮಾರಂಭಗಳ ಜನಸಂದಣಿಯ ಲೆಕ್ಕ ನಾವು ಹ್ಯಾಗೆ ಮಾಡ್ತೇವೆ ಅಂದರೆ ಮೆರವಣಿಗೆಯಾದ ಮಾರನೇ ದಿನ, ಕಾರ್ಪೊರೇಷನ್ನಿನ ಕಸಗುಡಿಸುವ ಡಿಪಾರ್ಟಮೆಂಟಿನವರಿಗೆ ಕೊಡುವ ರುಸುಂ ಕೊಟ್ಟು, ಅವರು ಗುಡಿಸಿ ಸೇರಿಸಿದ ಬಣ್ಣದಕಾಗದ, ಬಲೂನು ಇವುಗಳನ್ನು ತಕ್ಕಡಿಯಲ್ಲಿ ತೂಗಿಸಿ ಒಟ್ಟು ತೂಕ ಎಷ್ಟು ಅನ್ನೋದನ್ನ ಸರ್ಟಿಫಿಕೇಟು ಸಹಿತ ತಿಳಿಸಿಕೊತ್ತೇನೆ ಇಷ್ಟು ಟನ್ ಕಸ ಸೇರಿದ್ದರೆ, ಇಷ್ಟು ಜನಸಂದಣಿ ಅಂತ ಲೆಕ್ಕ ಇದೆ....

(ಅವನ ಧ್ವನಿ ಕ್ರಮೇಣ ಹಿಂದಾಗುವುದು)

ನಾ : ಈ ಬಣ್ಣದಕಾಗದದ ವ್ಯವಹಾರವನ್ನು ಮೊದಲು ಉಪಯೋಗಿಸಿಕೊಂಡವನು ನಾನೇ! ನೂರುವರ್ಷಕ್ಕೆ ಹಿಂದೆ ನ್ಯೂಯಾರ್ಕಿನಲ್ಲಿ. ಈಗ ಯಾವ ಚಿಲ್ಲರೆ ದೇಶದ ಪ್ರತಿನಿಧಿ ವಾಷಿಂಗ್‌ಟನ್ನಿಗೆ ಭೇಟಿಕೊಟ್ಟ ಅಂದರೆ ಸಾಕು, ಮಾರನೇ ದಿನ ಪೇಪರಿನಲ್ಲಿ, ಇಷ್ಟು ಜನ ಅವನನ್ನ ಸಾಲಾಗಿ ಬೀದಿಗಳುದ್ದಕ್ಕೂ ನಿಂತು ಸ್ವಾಗತಿಸಿದರು, ಅಂತ ಬರೆದು ಅಚ್ಚು ಹಾಕಿಸಿಬಿಡ್ತಾರೆ.

ರೂ : ಬಹಳ ಸ್ವಾರಸ್ಯವಾಗಿದೆ. ಸರಿಯೆ, ರಾಜಕೀಯವಲ್ಲದೆ ಬೇರೆ ವಲಯಗಳಲ್ಲೂ ಈ ಪ್ರಸಿದ್ಧಿ ಪಡೆಯುವ ಹಂಬಲ ಹರಡಿಲ್ಲವೇನು ?

ಅನಾ : ಮೊದಲೇ ಹೇಳಿದ್ದನ್ನ ಮರೆತಿದ್ದೀಯೆ. ಎಲ್ಲಾ ಕ್ಷೇತ್ರಗಳಲ್ಲೂ ನಾನು ಕೈ ಆಡಿಸಿದ್ದೇನೆ ಅಂತ ಹೇಳಲಿಲ್ಲವೆ ? ಹಲವಾರು ಪುಸ್ತಕಗಳನ್ನು ಕೂಡ ಬರೆದು, ಗ್ರಂಥಕರ್ತ ಅನ್ನಿಸಿಕೊಳ್ಳಲು ಪ್ರಯತ್ನಿಸಿದೆ. ಯಾವ ನನ್ನ ಪುಸ್ತಕಕ್ಕೂ ಯಾವ ಪುರಸ್ಕಾರವೂ ಸಿಗುವ ಸೂಚನೆ ಇರಲಿಲ್ಲ. ಸರಿ, ಶಿಶು ಸಾಹಿತ್ಯಕ್ಕೆ ಇಳಿದೆ ! ಆ ವಿಭಾಗದಲ್ಲಿ ಪ್ರಕಾಶಕ್ಕೆ ಬರಲು ಎಷ್ಟು ಅವಕಾಶವಿದೆ ಅನ್ನೋದನ್ನ ತೋರಿಸಿಕೊಟ್ಟೆ. ಬಹಳ ಸುಲಭವಾದ ದಾರಿ. ಬೇಕಾದ ಸಾಮಗ್ರಿಗಳು ಇಷ್ಟೆ: ಕಾಗದ, ಪೆನ್ಸಿಲು, ಬಹಳ ಕುಲೀನ ಜಾತಿಯದಲ್ಲದ ಒಂದು ಅಚ್ಚುಕೂಟ, ಸ್ವಲ್ಪ ಕೈ ಖರ್ಚಿಗೆ ಹಣ, ಕೊನೆಗೆ, ಮುಖ್ಯವಾಗಿ, ಮಕ್ಕಳಿಗೆ ಅವಶ್ಯವಾದದ್ದೇನು ಅನ್ನುವುದಕ್ಕಿಂತ ಅವರಿಗಾಗಿ ರಚಿಸಿದ ಸಾಹಿತ್ಯವನ್ನು ಓದಿ ಅದಕ್ಕೆ ಪುರಸ್ಕಾರ ಕೊಡುವವರ ಮನೋವಿಕಾಸವೆಷ್ಟು ಅನ್ನೋದನ್ನ ಗ್ರಹಿಸಿ ಕೊಳ್ಳುವಷ್ಟು ಅರೆಪಕ್ವ ಬುದ್ಧಿ – ಇಷ್ಟೆ, ಬೇಕಾದ್ದು.... ನನ್ನ ಲೋಕ ಪ್ರಿಯ ಪದ್ಯ ನೀನೂ ಓದಿರಬೇಕು.... ಶೇಷಾಚಾರಿ ರಚಿಸಿದ್ದು....

"ಅಜ್ಜೀ ಅಜ್ಜೀ
ಅಡುಗೂಲಜ್ಜೀ
ತಂದಿದ್ದೀಯಾ
ಉಳ್ಳೀ ಬಜ್ಜೀ !"

ನಿರೂ : ಓದಿದ್ದೇನೆ, ಓದಿದ್ದೇನೆ, ಆ ಪದ್ಯ ಲೋಕಪ್ರಿಯ ಪದ್ಯ ಅಂತ ಹ್ಯಾಗೆ ಹೆಸರು ಪಡೀತು, ಯಾರು ಪ್ರಶಸ್ತಿ ಕೊಟ್ಟವರು ಅದಕ್ಕೆ ?

ಅನಾ : ಅಲ್ಲೇ ಇರೋದು ಸ್ವಾರಸ್ಯ ! ನನ್ನ ಮೊದಲ ಪದ್ಯಸಂಗ್ರಹ ಪ್ರಕಟವಾದ ಕೆಲವು ದಿನಗಳಲ್ಲಿ ಅದರ ವಿಚಾರವಾಗಿ ಕಟುವಾದ ಟೀಕೆ ಗಳು ನಾಲ್ಕೂ ಕಡೆಯಿಂದ ಹೊರಬಿದ್ದವು. ಅವನ್ನೆಲ್ಲ ಎದುರಿಗೆ ಹರಡಿ ಕೊಂಡು, ಒಂದು ದಿವಸ,....

(ಸಂಗೀತ ಸೇತು)

ಕವಿ : ಆ ಮೇಲೆ.... ಆ ಇನ್ನೊಬ್ಬ ಕಟುಕ ಏನು ಬರೆದಿದ್ದಾನೆ, ಓದು !

ತ್ರಿ : ಅಯ್ಯೋ, ಛೀ ! ಬಹಳ ಕೆಟ್ಟದಾಗಿ ಬರೆದಿದ್ದಾನೆ ಅಂದ್ರೆ, ಇವನು. ನಾನು ಹ್ಯಾಗೆ ಓದಲಿ ?

ವಿ : ಇರಲಂತೆ ಓದು. ನನ್ನ ಸಾಹಿತ್ಯ ಕೃತಿಗಳ ಬಗ್ಗೆ ನಿನಗಿರೋ ಅಭಿಪ್ರಾಯವು ಹೆಚ್ಚೇನು ಉತ್ತೇಜಕವಾದ್ದಲ್ಲ. ಓದು.

ತ್ರಿ : ಅವನು ಬರೆದಿದ್ದಾನೆ, "ನೇರವಾಗಿ ಕಸದಬುಟ್ಟಿಗೆ ಎಸೆಯಲು ಯೋಗ್ಯವಾದ ಈ ಪದ್ಯಗಳನ್ನು ಹೆಚ್ಚಿಲ್ಲದೆ ಐನೂರೇ ಪ್ರತಿ ಅಚ್ಚು ಮಾಡಿರುವ ಮಹನೀಯರಿಗೆ ನಾಡಿನ ಮಕ್ಕಳೆಲ್ಲ ಋಣಿ" ಅಂತ ಬರೆದಿದ್ದಾನೆ.

ವಿ : ಇನ್ನೊಂದು ಸಲ, ನಿಧಾನವಾಗಿ ಓದು.

ತ್ರಿ : ನೇರವಾಗಿ.... ಕಸದಬುಟ್ಟಿಗೆ.... ಎಸೆಯಲು ಯೋಗ್ಯವಾದ.... ಈ ಪದ್ಯಗಳನ್ನು ಹೆಚ್ಚಿಲ್ಲದೆ ಐನೂರೇ ಪ್ರತಿ.... ಅಚ್ಚು ಮಾಡಿರುವ.... ಮಹನೀಯರಿಗೆ.... ನಾಡಿನ ಮಕ್ಕಳೆಲ್ಲ ಋಣಿ.

ವಿ : ಹೂ ! ಅದನ್ನ ಹೀಗೆ ಹ್ರಸ್ವಮಾಡು. "ಈ ಪದ್ಯಗಳನ್ನು.... ಅಚ್ಚು ಮಾಡಿರುವ ಮಹನೀಯರಿಗೆ ನಾಡಿನ ಮಕ್ಕಳೆಲ್ಲ ಋಣಿ" ಅಂತಮಾಡು. ಬಿಟ್ಟು ಕೆಡವಿದ ಪದಗಳಿಗೆ ಬದಲು ಗೀಟುಹಾಕ್ತಾ ಬಾ.... ಹೇಗೆ, ಈಗ ? ಈಗ ಇವನ್ನೆಲ್ಲ ಸೇರಿಸಿ ಪೇಪರಿನಲ್ಲೊಂದು ಪ್ರಶಂಸಾ ಪತ್ರ ಬರೆಸಿದರೆ ಆಗಲಿಲ್ಲವೆ !

ತ್ರಿ : ಥೂ ! ನಾಚಿಕೆಗೇಡು !

ವಿ : ಹ ಹ್ಹ ಹ್ಹ ಹ್ಹಾ ! ಮತ್ತೆ ಸುಮ್ಮನಾಯಿತೇನು ? ಇದೆಲ್ಲ ಒಂದು ದೊಡ್ಡ ಉದ್ಯಮ.... ನಡಿಸೋವರಿಗೆ ಛಾತಿಬೇಕು. ಹ ಹ್ಹ ಹ್ಹಾ !

(ಕ್ರಮೇಣ ಧ್ವನಿ ಕ್ಷಯಿಸುವುದು)

ನಾ : ಗೊತ್ತಾಯ್ತೆ ? ಆ ಮೇಲೆ, ನಾನು ಸಾಹಿತ್ಯರತ್ನನಾಗದಿದ್ದರೂ ನನ್ನ ಪ್ರತಿಯೊಂದು ಪುಸ್ತಕವು ಪುನರ್ಮುದ್ರಿತವಾಗೋ ಹಾಗೆ ಮಾಡಿದೆ. ಬರುಬರುತ್ತ ನನ್ನ ಹಾವಳಿ ಎಷ್ಟು ಹೆಚ್ಚಿತೆಂದರೆ, ಶಿಶುಸಾಹಿತ್ಯದ ಘಟಾನುಘಟಿಗಳಿಗೂ ಇಲ್ಲದ ಪುರಸ್ಕಾರ ನನಗೆ ಸಿಗಲಾರಂಭಿಸಿತು.

ನಿರೂ : ಹೀಗೇ ನೀನು ಕಲಾವಿದನಾಗಿಯೂ ಅವತಾರ ಎತ್ತಿರಬೇಕು ಅಲ್ಲವೆ? ಅಂದರೆ ಚಿತ್ರಕಾರ, ಸಂಗೀತಗಾರನಾಗಿ? ಕಲೆಯ ಕೊಲೆಯೇ ಮಾಡಿರಬೇಕು, ನೀನಾಗ.

ಅನಾ : ಅದಕ್ಕೆ ಲೆಕ್ಕವೇ ಇಲ್ಲ, ಚಿತ್ರಕಾರನ ಕೀರ್ತಿ ಒಂದೊಂದು ಸಲ ಅವನು ಸತ್ತು ನೂರಾರು ವರ್ಷಗಳಾದ ಮೇಲೆ ಹರಡಲಾರಂಭಿಸುತ್ತೆ. ಸಂಗೀತಗಾರನಿಗೋ, ಹೆಸರು ಬಂದರೆ ಬಂತು, ಇಲ್ಲದೆ ಹೋದರೆ ಮುಳುಗಿದವನು, ಮೇಲೆದ್ದು ಬಂದ ಹಾಗೇ ಸರಿ! ಆದ್ದರಿಂದ, ಈ ವೃತ್ತಿಗಳ ಪೋಷಕನಾದರೆ, ಇವರಿಗಿಂತ ಹೆಚ್ಚು ಪ್ರಭಾವಶಾಲಿಯಾಗಬಲ್ಲೆ ಅಂತ ಕಂಡುಕೊಂಡು. ಒಂದು ಸಲ ಕಳ್ಳಸಂತೆಯ ಕಾಳ ಐಶ್ವರ್ಯ ಸಂಪಾದಿಸಿ, ಕಲೆಯ ಪೋಷಕಮಾತ್ರವಲ್ಲ, ಮಹಾರಸಿಕ ಅನ್ನುವ ಪಟ್ಟವನ್ನೂ ಕೊಂಡುಕೊಂಡೆ.... ಬಹಳ ಬೇಗ ಪ್ರಸಿದ್ಧಿಗೆ ಬಂದೆ....

[ಸಿತಾರ್ ವಾದನ ನಡೆದಿದೆ ಇದ್ದಕ್ಕಿದ್ದ ಹಾಗೆ ಸಭೆಯಲ್ಲಿ ಪಿಸುಮಾತುಗಳು ಪ್ರಾರಂಭಿಸಿ, ಸಂಗೀತ ಹಿನ್ನೆಲೆಗೆ ಸರಿದು, ಒಬ್ಬೊಬ್ಬರ ಧ್ವನಿಗಳು ಸ್ಪಷ್ಟವಾಗುತ್ತವೆ]

ಒಬ್ಬ : ಅಗೋ, ಸಮಾಜದ ಪ್ರೆಸಿಡೆಂಟ್ರು ಬಂದ್ರು....

ಇನ್ನೊಬ್ಬ : ಯಾರು? ಎಲ್ಲಿ?

ಒಬ್ಬ : ಅವರೇ, ಬಿಳೀ ಪೈಜಾಮ, ಜುಬ್ಬಾ ಸಿಲ್ಕಿನದು, ಎಲ್ರಿಗೂ ಕೈ ಜೋಡಿಸ್ತಾ ಬರ್‍ತಿದಾರೆ ನೋಡಯ್ಯಾ....

ಇನ್ನೊಬ್ಬ : ಹೌದು, ಹೌದು, ಅವರೇ, ಇನ್ಮೇಲೆ ನೋಡ್ತಿರು, ಕಚೇರಿ ಹ್ಯಾಗೆ ಕಳೆ ಕಟ್ಟಿ ಬಿಡುತ್ತೇಂತ.

ಒಬ್ಬ : ನಮ್ಮ ಪ್ರೆಸಿಡೆಂಟ್ರಿಗೆ, ಸಂಗೀತ, ಸಾಹಿತ್ಯ, ಚಿತ್ರಕಲೆ, ಎಲ್ಲದಕ್ಕೂ ಅಭಿರುಚಿ ಕಣಯ್ಯ, ಅವರ ಕೈಲಿನೋಡು, ಎಷ್ಟು ದಪ್ಪ ಪುಸ್ತಕ!

ಮೂರನೆಯವ : (ಮೂದಲಿಸುತ್ತಾ) ಎನ್ಸೈಕ್ಲೋಪೀಡಿಯಾ ಸಂಪುಟ ಅಂತ ಕಾಣುತ್ತೆ ಅದು.

: ನಿನ್ನೆ ಆರ್ಟ್ ಗ್ಯಾಲರಿಯಿಂದಲೂ ಇವರ ಕಾರಿನಲ್ಲಿ ಏನಿಲ್ಲ ಅಂದರೂ ಒಂದು ಡಜನ್ ಚಿತ್ರಗಳನ್ನು ತುಂಬಿಸ್ತಾ ನಿಂತಿದ್ದರು.

ರನೆ : ಎಲ್ಲ ನಕಲು ಚಿತ್ರಗಳು, ನಾನೇ ಒಂದು ನಕಲಿ ಚಿತ್ರ ಬರೆದು ರವಿವರ್ಮನ ರಚನೆ ಅಂತ ಇವರಿಗೆ ಮಾರಿದ್ದೇನೆ ಮಾಡರ್ನ್ ಆರ್ಟ್ ಚಿತ್ರಗಳಂತೂ ಇವರ ಮನೆ ಗೋಡೆಗಳ ಮೇಲೆ ತಲೆಕೆಳಗಾಗಿ ತೂಗುತ್ತಿವೆ....

ಬ್ಬ : ಇವರ ಮನೇಲಿ, ಲೈಬ್ರರೀಲಿ, ಈಚಿನ ಪತ್ರಾಪರ್ಮಗಳಲ್ಲಿ ಬಂದ ಪ್ರತಿಯೊಂದು ನಾವೆಲ್ಲೂ ಇದೆಯಂತೆ. ಒಂದೊಂದು ಪುಸ್ತಕದಲ್ಲೂ ಗ್ರಂಥಕರ್ತನ ಹಸ್ತಾಕ್ಷರ ಇದೆಯಂತೆ, ಹೌದೇ ?

ಬ : ಅವರಿಗೇನ್ರೀ ! ದುಡ್ಡು ಅಂದ್ರೆ ಹುಣಿಸೇಬೀಜದ ಹಾಗೆ ಖರ್ಚು ಮಾಡೋ ಭೂಪತಿ !

(ಕ್ರಮೇಣ ಅವರ ಧ್ವನಿಗಳು ಕ್ಷಯಿಸುವುವು)

ರೂ : ಒಂದು ಪ್ರಶ್ನೆ ಕೇಳಬೇಕಯ್ಯ ನಿನ್ನಲ್ಲಿ. ಹ್ಯಾಗೂ ಜಗತ್ಪ್ರಸಿದ್ಧ ಆಗ ಲಾರೆ ಅಂತ ನಿನಗೇ ಗೊತ್ತಿರುವ ಹೊತ್ತಿಗೇ ನೀನೀ ನಾನಾ ಸ್ವರೂಪ ಹೊತ್ತು ಈ ಆಟ ಕಟ್ಟುತಿದ್ದೀ. ಆದರೆ ಯಾಕೆ ಈ ವ್ಯರ್ಥ ಪ್ರಯಾಸ ಅನ್ನೋದನ್ನ ಮಾತ್ರ ವಿವರಿಸಿಲ್ಲ ನೀನು.

ನಾ : ನೋಡು, ಪ್ರತಿಯೊಬ್ಬನೂ ತನಗೆ ತಿಳಿಯದಂತೆಯೇ ಒಂದಲ್ಲ ಒಂದು ಪ್ರಕಾರ ಮುಂದಕ್ಕೆ ಬರಬೇಕು ಅಂತ ಪ್ರಯತ್ನಿಸ್ತಾನೇ ಇರ್ತಾನೆ. ಅದೊಂದು ನೈಸರ್ಗಿಕ ಗುಣ ಮನುಷ್ಯ ಜಾತಿಯದು. ಎಲ್ಲರೂ ಜಗತ್ಪ್ರಸಿದ್ಧರಾಗಲಾರರು ಅನ್ನೋದು ಎಲ್ಲರಿಗೂ ಗೊತ್ತು. ಆದರೂ ಯಾಕೆ ಪ್ರಯತ್ನಪಡ್ತಾರೆ ಅಂತ ನಿನ್ನ ಆಶ್ಚರ್ಯ ಅಲ್ಲವೆ ? ಇದರ ಮರ್ಮ ಇಷ್ಟೆ ! ಪ್ರತಿಯೊಬ್ಬನೂ ತನ್ನ ಆಕಾಂಕ್ಷೆ ಎಷ್ಟೇ ಚಿಕ್ಕದಾಗಲಿ, ಸೀಮಿತವಾಗಿರಲಿ ಅದು ಈಡೇರುವುದರಲ್ಲೇ ತೃಪ್ತಿಪಡುತ್ತಾನೆ. ಗುರಿ ಮುಟ್ಟುವುದರಲ್ಲಿ ನಮ್ಮೆಲ್ಲರಿಗೂ ಹೆಮ್ಮೆ ಇದ್ದೇ ಇರುತ್ತೆ. ಆ ಗುರಿ

ಯನ್ನ ಸಾಧಿಸಿ ಆಗಬೇಕಾದ್ದೇನು ಅನ್ನುವ ಪ್ರಶ್ನೆ ಮುಖ್ಯವಲ್ಲ ನಿಮ್ಮೆಲ್ಲರ ಆಕಾಂಕ್ಷೆಗಳ ಮೂರ್ತಸ್ವರೂಪ ನಾನು ಅಂತ ಆಗಲೆ ಹೇಳಿದ್ದೇನಲ್ಲ. ಆದ್ದರಿಂದ ನನ್ನ ಪ್ರಯತ್ನ ಯಾವುದೂ ವ್ಯರ್ಥ ಅಂ ನನಗನ್ನಿಸುವ ಪ್ರಮೇಯವೇ ಏಳುವುದಿಲ್ಲ. ಎಂಥೆಂಥ ಸಣ್ಣಪುಟ್ಟ ಯತ್ನವೂ ನನ್ನ ಕೈಲಿ ದೊಡ್ಡ ಯೋಜನೆಯಂತೆಯೇ ಪೂರೈಕೆ ಯಾಗುತ್ತೆ.... ಇನ್ನೊಂದು ವಿಷಯ, ರಂಗಸ್ಥಳದಲ್ಲಿ ನಾನು ಮುಖ್ಯ ಪಾತ್ರ ವಹಿಸದಿದ್ದಾಗ ಕೂಡ, ನನ್ನ ಕಡೆ ಎಲ್ಲರ ಗಮನ ಸೆಳೆಯುವ ಪ್ರಯತ್ನ ಮಾಡುತ್ತಿರುತ್ತೇನೆ. ಇದೊಂದು ನನ್ನ ಯುಕ್ತಿ, ಕೇಳು...

[ಕ್ಲಬ್ಬಿನಲ್ಲಿ ಗುಜು ಗುಜು ಸದ್ದು. ಅಸ್ಪಷ್ಟವಾದ ಮಾತುಗಳ ಜತೆಗೆ ಪಿಂಗಾಣಿ ತಟ್ಟೆ ಬಟ್ಟಲುಗಳ ಸದ್ದು ಕಲಸಿರುತ್ತದೆ.]

ಒಬ್ಬ: ದಯಮಾಡಿಸ್ಬೇಕು. ಸರ್ವಜ್ಞಾನಿಯವರು.... ಬನ್ನಿ ಬನ್ನಿ........

ಇನ್ನೊಬ್ಬ: ಬನ್ನಿ ಸ್ವಾಮೀ, ಬನ್ನಿ ಬನ್ನಿ ಬಹಳ ದಿನವಾಯ್ತು ಕ್ಲಬ್ಬಿಗೆ ಭೇಟಿ ಕೊಟ್ಟು.

ಸರ್ವಜ್ಞಾನಿ: ಅಬ್ಬಬ್ಬ, ಎಲ್ಲಿ ಒಂದು ಲೋಟ ಥ....ಣ್ಣಗೆ ನೀರು ತಗೊಂಬಾ.... ನೆನ್ನೇನೇ ಬರೋಣ ಅಂತ ಹೊರಟೆ ಕ್ಲಬ್ಬಿಗೆ ಮನೆಯಿಂದ ಹೊರಡ್ತಲೇ ಎದುರಿಗೆ, ನಮ್ಮ ಎಕ್ಸ್-ಮಿನಿಸ್ಟರು ಗೋಪಾಲರಾವ್ ವಕ್ಕರಿಸಿದ. ಅವನ ತಾಪತ್ರಯಗಳನ್ನೆಲ್ಲ ಕೇಳಿ, ಸಮಾಧಾನ ಹೇಳಿ. ತಪ್ಪಿಸಿಕೊಂಡು ಬರೋಣ ಅಂದರೆ, ರಾತ್ರಿ ಎಂಟುಗಂಟೆ ಆಗಲೇ ಹೊಡೀತಿತ್ತು, ಅಷ್ಟರಲ್ಲಿ ನನ್ನ ಅರ್ಧಪ್ರಾಣವೂ ಹೋಗಿತ್ತು ಅನ್ನಿ. ಇವತ್ತು ಏನಂತೀರಿ, ಕ್ಲಬ್ಬಿನ ಬಾಗಿಲಿಗೆ ಬರೋದರಲ್ಲಿ ಫೋನಿನಲ್ಲಿ ಕಾದಿದೆ ಕರೆ, ಚೀಫ್‌ಕಮಿಷನರ ಕಡೆಯಿಂದ. ಏನೂ ಇಲ್ಲ, "ನೋಡಿ ಬಹಳ ದಿನವಾಯ್ತು, ಯಾವಾಗ ಬರ್ತೀ"ಂತ ಕೇಳೋದಕ್ಕೆ !

ಒಬ್ಬ: ಚೀಫ್ ಕಮಿಶನರ್‌ಗೂ ನಿಮಗೂ ಹ್ಯಾಗೆ ಅಷ್ಟು ಅನ್ಯೋನ್ಯ ಸ್ನೇಹ?

ಸರ್ವ: ಅದೇ ? ನಿಮ್ಮ ನಿಮ್ಮಲ್ಲೇ ಇರ್ಲಿ ಗುಟ್ಟು, ಹೇಳ್ತೇನೆ. ಈ ಚೀಫ್ ಕಮಿಶನರು ನಮ್ಮೂರಿನ ಎಲೆಕ್ಟ್ರಿಕ್ ಆಫೀಸಿನಲ್ಲಿ ಗುಮಾಸ್ತೆಯಾಗಿದ್ದ

ಕೊಂಡು, ಕಾಲೇಜು ವಿದ್ಯಾಭ್ಯಾಸ ಮಾಡ್ತಿದ್ದಾಗ, ಪಾಠಹೇಳಿಸ್ಕೋಳ್ಳೋಕೆ ನಮ್ಮಪ್ಪನ ಹತ್ರ ಬರ್ತಿದ್ರು. ಆಗಿನ ಪರಿಚಯ ಅಷ್ಟೇ....... ಈವತ್ತು ಸುಪ್ರೀಮ್ ಕೋರ್ಟು ಜಡ್ಜಿಗಳಿಗೆ ಹೈಕೋರ್ಟಿನಲ್ಲಿ ರಿಸೆಪ್ಷನ್ ಇದೆಯಲ್ಲ........ನಿಮಗೆಲ್ಲರಿಗೂ ಆಹ್ವಾನ ಬಂದಿರಬೇಕಲ್ವೆ? ಅಲ್ಲಿ ಭೇಟಿಯಾಗೋಣ, ಸದ್ಯಕ್ಕೆ ನಾನು ಬಹಳ ಅವಸರದಲ್ಲಿದ್ದೇನೆ........ರೆವಿನ್ಯೂ ಮಿನಿಸ್ಟರ ಹತ್ರ ಸ್ವಲ್ಪ ಅರ್ಜೆಂಟು ಕೆಲಸ ಇತ್ತು.......

[ಕ್ರಮೇಣ ಕ್ಷಯಿಸುತ್ತದೆ.]

ಾಮಿಕ : ಇನ್ನೊಂದೆರಡು ಸ್ವಾರಸ್ಯವಾದ ಸಂಗತಿ ಹೇಳ್ತೇನೆ, ಕೇಳಿ... ಒಂದು ಸಲ, ನಮ್ಮೂರಿಗೇ ದೊಡ್ಡ ಕ್ರಿಕೆಟ ಆಟಗಾರ ಅಂತ ಹೆಸರು ಪಡೆದಿದ್ದೆ. ಆದರೆ ಆ ಒಳಊರಿನ ಖ್ಯಾತಿ ಎಷ್ಟಕ್ಕೂ ಸಾಲದು. ಎಷ್ಟೆಷ್ಟೋ ಪ್ರಯತ್ನಿಸಿದೆ, ಹೊರಊರಿಂದ ಬರ್ತಾ ಇದ್ದ ಇಂಗ್ಲೀಷ ಪೇಪರಿನಲ್ಲಿ ಒಂದು ಸಲವಾದರೂ ನನ್ನ ಹೆಸರು ಅಚ್ಚಾಗಲಿಲ್ಲ. ಹಾಗೇ ಯೋಚಿಸಿ ಒಂದು ಉಪಾಯ ಹುಡುಕಿದೆ– ಮೂರನೇ ದಿನ ಆ ಇಂಗ್ಲೀಶ್ ಪೇಪರಿನ ವಿಶೇಷ ವರದಿಗಾರ ನಮ್ಮೂರಿಗೇ ಬಂದು ನನ್ನ ಭೇಟಿ ಮಾಡಿದ....

[ಸಂಗೀತ ಸೇತು]

ರದಿಗಾರ : ಕಂಗ್ರಾಚ್ಯುಲೇಷನ್ಸ್, ಮಿಸ್ಟರ್ ಸಿಂಗ್, ನಿಮ್ಮ ಎಂಗೇಜ್‌ಮೆಂಟ್ ಆದದ್ದಕ್ಕೆ. ಅದರ ಬಗ್ಗೆ ವಾಚಕರಿಗೆ ತಿಳಿಸೋ ಮೊದಲ ಅವಕಾಶ ನನಗೆ ಕೊಟ್ಟದ್ದಕ್ಕಾಗಿ ವಂದನೆಗಳು. ಮಿಸ್ಟರ್ ಸಿಂಗ್, ನಿಮಗೆ ರಾಜಕುಮಾರಿಯವರ ಪರಿಚಯವಾದದ್ದು ಯಾವಾಗ?

ಂಗ್ : ಪರಿಚಯವಾದದ್ದು ಕಳೆದ ಭಾನುವಾರದ ಲೀಗ್ ಮ್ಯಾಚಿನಲ್ಲಿ, ನನ್ನ ಸಿಕ್ಸರ್ ನೋಡಿದ ಕೂಡಲೆ ಆಕೆಗೆ ಅಲ್ಲೇ ಇದ್ದು ನನ್ನನ್ನ ಕಾಣಬೇಕು ಅಂತ ಅಭಿಲಾಷೆ ಆಯ್ತಂತೆ.

ರದಿ : ನಿಮಗೆ ಆಕೆಯ ಹೆಸರು ಮುಂಚೆಯೇ ಪರಿಚಯವಾಗಿದ್ದಿರಬೇಕಲ್ಲವೆ?

ಸಿಂಗ್ : ರಾಜಕುಮಾರಿಯ ಹೆಸರು ನಮ್ಮ ಕಡೆ ಕೇಳದಿದ್ದವರು ಯಾರು
ಕಾಲೇಜಿನಲ್ಲಿ ಆಕೆ ಆಕಡೆಯಿಂದ ಈಕಡೆ ನಡೆದು ಹೋದರೆ ಸಾಕು..
ಕ್ಲಾಸುಗಳಲ್ಲಿ ಪಾಠನಿಂತು, ಹುಡುಗರು. ಮೇಷ್ಟ್ರುಗಳು, ಎಲ್ಲರು
ಕಿಡಕಿ ಬಾಗಿಲುಗಳ ಕಡೆ ಬಂದು ನಿಲ್ಲೋದು ಸಾಮಾನ್ಯವಾಗಿತ್ತು.

ವರದಿ : ಅವತ್ತಿನ ಮ್ಯಾಚಿನಲ್ಲಿ ನೀವು ಎಷ್ಟು ರನ್ ಮಾಡಿದಿರಿ! ಎಷ
ಸಿಕ್ಸರ್ ಹೊಡಿದಿರಿ ?

ಸಿಂಗ್ : ಹನ್ನೆರಡು. ಎರಡು ಸಿಕ್ಸರ್‌ಗಳು. ಸಾಧಾರಣವಾಗಿ ನನ್ನ ಹೊಡೆ
ಗಳು ಸಿಕ್ಸರಾಗೇ ಇರುತ್ತವೆ. ಇಲ್ಲದಿದ್ದರೆ ಚೆಂಡು ತಲೆಯ ನೇರಕ
ಮೇಲೆ ಹೋಗಿ ವಿಕೆಟ್‌ಕೀಪರನ ಕೈಗೆ ಬೀಳುತ್ತೆ....

(ಇಬ್ಬರೂ ನಗುವರು)

ಅನಾ ; ನಾನೂ, ಆ ಯಾವುದೋ ಕುಗ್ರಾಮದ ರಾಜಕುಮಾರಿಯೂ ಶಂ
ಬೇಸರ ಕಳೆಯುವ ಉದ್ದೇಶದಿಂದ ಸ್ವಲ್ಪ ದುಡ್ಡು ಸೇರಿಸಿ "ಎಂಗೇಜ
ಮೆಂಟ್" ಅಂತ ನಾಟಕ ಮಾಡಿದ್ದನ್ನು ವರದಿಗಾರ ಹೇಗೆ ತಿಳೀಬೇಕು
ಅಂತೂ ಅಂದಿನಿಂದ ತಪ್ಪದೆ ನನ್ನ ಹೆಸರು ಅವನ ಪೇಪರಿನಲ್ಲಿ ಬ
ಲಾರಂಭಿಸಿತು. ಕ್ರಮೇಣ ಇತರ ಪತ್ರಿಕೆಗಳೂ ಛಾಪಿಸತೊಡಗಿದರು
ಸೊನ್ನೆ ಸ್ಕೋರು ಮಾಡಿದಾಗ ಕೂಡ ನನ್ನ ಚಿತ್ರದ ಕೆಳಗೆ "ಛಾನ್ಸವಾರು
ಸೆಮಿಫೈನಲ್ಸ್‌ನಲ್ಲಿ ಸೊನ್ನೆ ಸಂಪಾದಿಸಿದ ಸಿಂಗ್" ಎಂದು ಬರೆಯ
ತ್ತಿದ್ದರು. ಎಲ್ಲವು ನನ್ನ ಸಿಕ್ಸರುಗಳ ಹಾಗೆ ಒಂದು "ಸ್ಟಂಟ್" ಅನ್ನಿ..
ಇನ್ನೊಂದುಸಲ, ಹಿಮಾಲಯಾರೋಹಣ ಮಾಡಿ ಹೆಸರು ಸಂಪಾದಿಸಲ
ಯತ್ನ ಮಾಡಿದೆ. ನನ್ನ ಗ್ರಹಚಾರಕ್ಕೆ, ನಾನು ೨೦,೦೦೦ ಅಡಿ
ಹತ್ತುವುದರೊಳಗೆ ನಾಲ್ಕು ದಿಕ್ಕಿನಿಂದಲೂ ತಂಡ ತಂಡವಾಗಿ ಪರ್ವತ
ರೋಹಿಗಳು ಮುತ್ತಿಗೆ ಹಾಕಿ ಸುತ್ತ ಮುತ್ತ ಇದ್ದ ಶಿಖರಗಳೆಲ್ಲವನೂ
ಹತ್ತಿ ಆಕ್ರಮಿಸಿಬಿಟ್ಟರು. ಇಳಿದು ಬಂದವನೇ, ಪತ್ರಿಕಾ ಪ್ರತಿನಿ
ಗಳನ್ನು ಗುಟ್ಟಾಗಿ ಕರೆಸಿಕೊಂಡು, "ಯೇತಿಯ ದರ್ಶನಮಾಡಿದೆ" ಅಂ
ಒಂದು ಹೇಳಿಕೆಕೊಟ್ಟೆ.... ಅಷ್ಟೆ, ಮೂರು ದಿನಗಳು ಎಲ್ಲಾ ಪೇಪ
ಗಳಲ್ಲೂ ನನ್ನ ಸುದ್ದಿಯೇ !

ನಿರೂ : ನಿನ್ನ ಈ ಚಿಕ್ಕ ಚಿಕ್ಕ ಸಾಹಸಗಳು ನನಗಾದರೆ ಏನೂ ತೃಪ್ತಿ ತರುತ್ತಿರ ಲಿಲ್ಲ.... ಅವುಗಳು ಮನುಷ್ಯನಿಗೆ ಹೇಗೆ ಮುಖ್ಯ ಅಂತ ತಿಳೀಲಿಲ್ಲ!

ಅನಾ : ನಿನ್ನ ಸಾಹಸಗಳು ನಿನಗೆ ಮುಖ್ಯವಾಗೇ ಇರುತ್ತವೆ. ನೋಡುವವ ರಿಗೆ ಸಾಮಾನ್ಯವಾಗಿ ಕಾಣಬಹುದು. ಇನ್ನೊಂದುಸಲ ಏನು ಮಾಡಿದೆ ಅಂತ ಹೇಳ್ತೆನೆ ಕೇಳು....

(ಸಂಗೀತ ಸೇತು)

ಹುಡುಗ : ಇದೇನಪ್ಪ! ಕಾರಿನ ಟೈರು ಕಿತ್ತು ಕಚ್ಚಿ ತಿಂತಾ ಇದ್ದೀ! ಅಮ್ಮಾ, ಅಮ್ಮಾ.... ಬೇಗ ಬಾ ಇಲ್ಲಿ!

ಸರ್ವಭಕ್ಷಕ : ಲೋ, ಸುಮ್ನಿರೋ ಆ ಆಸ್ಟ್ರೇಲಿಯನ್ ಮೋಟರುಗಾಡೀನ ನಲವತ್ತು ದಿನದಲ್ಲಿ ತಿಂದು ಮುಗಿಸಿದ ಅಂತ ನೀನೇ ಅವತ್ತು ಓದಿ ಹೇಳ್ಲಿಲ್ಲವೇನೋ? ಇಪ್ಪತ್ತೇ ದಿನಗಳಲ್ಲಿ ತಿಂದು ಮುಗಿಸದಿದ್ರೆ ನಾನು ವೇಲ್ಸ್‌ನಲ್ಲಿ ಹುಟ್ಟಿದ್ದು ಏನು ಸಾರ್ಥಕ! ಇವತ್ತು ಟೈರ್ ತಿಂದು ಅಭ್ಯಾಸಕ್ಕೆ ಹಚ್ಚಿದ್ದೀನಿ. ಇನ್ನೂ ಒಂದು ಎರಡು ತಿಂಗಳಲ್ಲಿ ಕಾರಿನ ಒಂದೊಂದು ಭಾಗವನ್ನು ತಿನ್ನುವ ಅಭ್ಯಾಸಮಾಡಿ.... ಆಮೇಲೆ, ನೋಡ್ತಿರು, ಒಂದು ಒಳ್ಳೇ ದಿನ ನೋಡಿ, ಪೇಪರಿನವರು, ರೇಡಿಯೋ, ಟಿ. ವಿ. ಸಿನಿಮಾದವರ, ಎಲ್ಲರನ್ನೂ ಕರೇಸಿ....

(ಕ್ರಮೇಣ ಧ್ವನಿ ಕ್ಷಯಿಸುವುದು)

ನಿರೂ : ಎಷ್ಟು ಅಲ್ಪ ತೃಪ್ತಿಗೋಸ್ಕರ ಎಂಥೆಂಥ ವಿಚಿತ್ರ ಕಾರ್ಯಗಳು!

ಅನಾ : ಆ ತೃಪ್ತಿ, ಆಯಾ ಮನುಷ್ಯನಿಗೆ ಅತಿಮುಖ್ಯ ಅನ್ನೋದನ್ನೇ ಇಷ್ಟು ಹೊತ್ತೂ ಒತ್ತಿ ಒತ್ತಿ ನಾನು ಹೇಳುತ್ತಿರೋದು. ನೋಡು, ಹೀಗಾದ ಮೇಲೆ ನಿನ್ನದು ಅಂತ ಪ್ರಪಂಚದಲ್ಲಿ ಉಳಿಯೋದು ನಿನ್ನ ಕೀರ್ತಿ ಮಾತ್ರ. ಆದರೆ ಎಲ್ಲರಿಗೂ ಶಾಶ್ವತ ಕೀರ್ತಿ ಬೇಕೆಂದರೆ ಹ್ಯಾಗೆ? ಆದರಿಂದ ನೀನು ಹಳಿಯುವ ಅಲ್ಪ ತೃಪ್ತಿ ಮನುಷ್ಯನಿಗೆ ಬಹಳ ಮುಖ್ಯ, ಅದು, ಸ್ವಲ್ಪಕಾಲಕ್ಕಾದರೂ ಪ್ರಸಿದ್ಧಿ ಹೊಂದಿದ್ದಕ್ಕಾಗಿ ತೃಪ್ತಿ. ಈ ಅಲ್ಪ

ತೃಪ್ತಿ ಪಡೆಯೋದಕ್ಕೆ ನೀನು ಅಂದರೆ ನಿನ್ನಂತಹ ಸಾಧಾರಣ ಮನುಷ್ಯರು ಎಷ್ಟೆಷ್ಟೋ ಚಿತ್ರ ವಿಚಿತ್ರವಾಗಿ ನಿಮ್ಮ ಬುದ್ಧಿ ಚಾತುರ್ಯಗಳನ್ನು ಬಳಸು ತ್ತೀರಿ! ಗಂಡು ಹೆಣ್ಣಾಗಿ, ಹೆಣ್ಣು ಗಂಡಾಗಿ ಮಾರ್ಪಟ್ಟು, ಜತೆಗೆ ಶಸ್ತ್ರ ಚಿಕಿತ್ಸೆ ಮಾಡಿದ ವೈದ್ಯರಿಗೂ ಜಾಹೀರಾತು ಮಾಡಿಸಿದ್ದೀರಿ! ಯಾವುದೋ ಅಮುಖ್ಯ ಕಾರಣಕ್ಕಾಗಿ, ಒಂದು ಸಲ, ಬಹಿರಂಗವಾಗಿ ಆತ್ಮಹತ್ಯಮಾಡಿಕೊಳ್ಳೋದಾಗಿ ಪ್ರಕಟಿಸಿ ಊರೆಲ್ಲ ಗೊಂದಲವಾಡಿ ದ್ದೀರಿ! ನೂರೈವತ್ತೈದು ವರ್ಷದವ, ನೂರಮೂವತ್ತು ವಯಸ್ಸಿನ ಮಗ, ನೂರಹತ್ತು ವಯಸ್ಸಿನ ಮೊಮ್ಮಗ, ಇನ್ನೂ ಐವರು ಹೆಂಡತಿಯ ರನ್ನು ಮೇಯಿಸುತ್ತಿದ್ದೇನೆ ಎಂದೆಲ್ಲಾ ಸುದ್ದಿ ಹರಡಿಸಿ ಸ್ವಪ್ರಚಾರ ಮಾಡಿ ಕೊಂಡಿದ್ದೀರಿ! "ಅಂತರಾಷ್ಟ್ರೀಯ ಸ್ಮಗ್ಲಿಂಗ್ ನಿಪುಣ" ಅನ್ನುವ ಹೆಸರು ಪಡೆದು ಪ್ರಪಂಚದ ವೃತ್ತ ಪತ್ರಿಕೆಗಳಲ್ಲೆಲ್ಲಾ ಚಿತ್ರ ಮೆರೆಸಿದ್ದೀರಿ! ಕೋರ್ಟುಗಳಲ್ಲಿ ಸಾಕ್ಷ್ಯಕೊಡುವಾಗ ಅತಿಬುದ್ಧಿ ಉಪಯೋಗಿಸಿ, ಲಾಯರುಗಳನ್ನು ರೇಗಿಸಿ, ಎಲ್ಲರನ್ನೂ ನಗಿಸಿ, ಪೇಪರುಗಳಲ್ಲಿ ದಪ್ಪಕ್ಷರ ಗಳಲ್ಲಿ ಹೆಸರು ಪ್ರಕಟವಾಗೋ ಹಾಗೆ ಮಾಡಿದ್ದೀರಿ! ಸಾಕೋ, ಉದಾ ಹರಣೆಗಳು ?.... ಇನ್ನು ಎಷ್ಟೋ ಹೀನತರದ ಅಡ್ಡ ಹೆಸರುಗಳು ತಗುಲಿ ಕೊಂಡಾಗಲೂ, ಅವುಗಳನ್ನ ಬಿಡದೆ ರಕ್ಷಿಸಿಕೊಂಡಿದ್ದೀರಿ.... ಹಾಗಾ ದರೂ ತನ್ನ ಕಡೆ ಜನರು ಕೈಬೊಟ್ಟುಮಾಡಿ ತೋರಿಸಲಿ ಅಂತ....

(ಸಂಗೀತ ಸೇತು)

ಸ್ತ್ರೀ : ಉಂಡಾಡಿಭಟ್ಟ!

ಪುರುಷ : ಧಾಂಡಿಗ!

ಸ್ತ್ರೀ : ಜಂಬದ ಕೋಳಿ!

ಪುರುಷ : ಲಂಬೂಜಡಿ!

ಸ್ತ್ರೀ : ಲೇಟ್ ಲತೀಫ್!

ಪುರುಷ : ಬೀದಿಬಸವ!

ಸ್ತ್ರೀ : ರೋಡ್‌ಸೈಡ್ ರೋಮಿಯೋ!

ಅನಾ : ಇತ್ಯಾದಿ, ಇತ್ಯಾದಿ, ಇತ್ಯಾದಿ.

ನಿರೂ : ಈ ಶಿರೋನಾಮೆಗಳನ್ನು ನಾನಂತೂ ಹೊತ್ತವನಲ್ಲ, ಹೊತ್ತಿದ್ದರೂ ನನಗದರಿಂದ ಯಾವ ಆನಂದಪ್ರಾಪ್ತಿಯೂ ಆಗುತ್ತಿರಲಿಲ್ಲ. ನನ್ನ ಹಾಗೇ ಇರೋ ಕೋಟಿಗಟ್ಟಲೆ ಸ್ಥಿಮಿತ ಪ್ರವೃತ್ತಿಯವರಿಗೂ ಹಾಗೇ ಅಂದುಕೊಂಡಿದ್ದೇನೆ. ಅಷ್ಟೇ ಯಾಕೆ? ನಿಜವಾದ ಅರ್ಹತೆ ಇರುವವರು ದೊಡ್ಡ ದೊಡ್ಡ ಪದವಿಗಳಿಗೂ ಆಸೆಪಡಬಾರದು ಅನ್ನೋದೂ ನನ್ನ ನಂಬಿಕೆ.

ಅನಾ : ಅಹಾಹಾ ! ಏನು ನಿಷ್ಕಾಮ ಪ್ರಕೃತಿ ! ನಾ ಹೇಳುವುದನ್ನ ಕೇಳು. ಅಂಥ ಮನುಷ್ಯನೇ ಇಲ್ಲ ಪ್ರಪಂಚದಲ್ಲಿ. ಇದ್ದರೂ ಅವನು ವಾನಪ್ರಸ್ಥಾಶ್ರಮಕ್ಕೆ ಮಾತ್ರ ಯೋಗ್ಯ.

ನಿರೂ : ನನಗಂತೂ ಅಂಥ ಕ್ಷುದ್ರಖ್ಯಾತಿ ಬೇಕಾಗಿಲ್ಲ.

ಅನಾ : ನಿನ್ನ ಹೇಳಿಕೆಯೆದುರಿಗೆ ಹಾಕಲು ಬಹಳ ದೊಡ್ಡ ಪ್ರಶ್ನೆ ಚಿಹ್ನೆ ಬೇಕಾಗಿದೆ, ಎಲ್ಲಾದರೂ ಹುಡುಕಿಸಬೇಕು ! ಅಲ್ಲ, ನೀನೇನು ಮಹಾಯೋಗಿ ಅಂದುಕೊಂಡಿದ್ದೀಯೋ ?

ನಿರೂ : ನನಗಂತೂ ಇಚ್ಛೆ ಇಲ್ಲ. ನನ್ನ ಹಾಗೇ ಬಹಳ ಜನ ಇದ್ದಾರೇಂತ ಮತ್ತೆ ಒತ್ತಿ ಹೇಳ್ತಿದೇನೆ.

ಅನಾ : ಇಷ್ಟು ಹೊತ್ತೂ ನಾನು ನಿನಗೆ ತೋರಿಸಿದ ಉದಾಹರಣೆಗಳ ಹಾಗೇ ನೀನು ಬೇರೆಯಲ್ಲ ಅಂತ ನಾನೂ ಒತ್ತಿ ಹೇಳ್ತೀನೆ. ಇದನ್ನ ಪ್ರಮಾಣ ಮಾಡಿ ಈಗಲೇ ಬೇಕಾದರೆ ತೋರಿಸಿಕೊಡ್ತೇನೆ. ಆಮೇಲೆ ನಿನ್ನಿಂದ ನನಗೊಂದು ಕೆಲಸವೂ ಆಗಬೇಕಾಗಿದೆ. ಅದನ್ನೂ....

ನಿರೂ : ನನ್ನಿಂದ? ನಿನಗೆ ಕೆಲಸವೇ? ನನ್ನಿಂದ? ಯಾವ ಖ್ಯಾತಿಯೂ ಬೇಡ ಅಂತ ಮನಸ್ಸು ಸ್ಥಿರ ಮಾಡಿಕೊಂಡಿರುವವನಿಂದ ?

ಅನಾ : ಅದನ್ನೆಲ್ಲ ಇನ್ನು ಉದ್ದಕ್ಕೆ ಚರ್ಚೆಮಾಡುವುದು ಬೇಡ. ನೀನೇನು ನಿರ್ವಿಕಾರನಲ್ಲ ಅಂತ ಒಂದೇ ನಿಮಿಷದಲ್ಲಿ ತೋರಿಸಿಕೊಡ್ತೇನೆ.... ಆಮೇಲೆ ನನ್ನ ಕೆಲಸಕ್ಕೆ ಒಪ್ಪಿಕೊಳ್ಳುತ್ತೀಯೋ ?

ನಿರೂ : ಧೈರ್ಯವಾಗಿ ಒಪ್ಪಿಕೋತೇನೆ....

ಅನಾ : ಹಾಗಾದರೆ, ಈಗ ನಾನು ಕೇಳೋದಕ್ಕೆಲ್ಲಾ, ಹೌದು, ಇಲ್ಲ ಅಂತ ನೇರವಾಗಿ ಉತ್ತರ ಕೊಡ್ತಾ ಬಾ. ನಿನಗೇ ತಿಳಿಯುತ್ತೆ, ಖ್ಯಾತಿಗಾಗಿ ನೀನು ಶ್ರಮಪಟ್ಟಿದ್ದಿಲ್ಲ !

ನಿರೂ : ಏನು ಕೇಳಬೇಕೋ ಕೇಳು, ಮತ್ತೆ.

ಅನಾ : ನಿನ್ನ ಮನೆಯಲ್ಲಿ ದಿವಾನಖಾನೆಯಲ್ಲಿ ತೂಗುತ್ತಿರೋ ಫೋಟೋಗಳ ನಡುವೆ, ಒಂದು ಮಿರುಗುವ ಚೌಕಟ್ಟು ಹಾಕಿದ ಮಾನಪತ್ರ ಇದೆ ಹೌದೋ ?

ನಿರೂ : ಹೌದು.

ಅನಾ : ಯಾವುದೊ ಸಭೆಯಲ್ಲಿ ನಿನ್ನ ಗುಣಗಾನಮಾಡಿ ನಿನಗರ್ಪಿಸಿದ ಮಾನ ಪತ್ರ ಅದು, ಹೌದೋ ?

ನಿರೂ : ಹೌದು.

ಅನಾ : ಆ ದಿವಾನಖಾನೆಯಲ್ಲಿರುವ ಗ್ರೂಪ್ ಫೋಟೋಗಳಲ್ಲಿ ನೀನು ಎಲ್ಲದರಲ್ಲೂ ಉತ್ಸಾಹನಾಗಿ ಕುತಿರುವುದುಂಟೋ. ಒಟ್ಟು ಹತ್ತು ಫೋಟೊಗಳಿವೆ ಹೌದೇ ?

ನಿರೂ : ಹೌದು.

ಅನಾ : ನಿನ್ನ ಸೊಟ್ಟಕಾಲಿನ ನಡಿಗೆಯಿಂದ, ನಾಟಕಗಳಲ್ಲಿ ವಿದೂಷಕನ ಪಾತ್ರ ವಹಿಸಿ, ಎಲ್ಲರ ಗಮನವನ್ನೂ ಸೆಳೆದದ್ದುಂಟೋ ?

ನಿರೂ : ಹೌದು, (ಸ್ವಲ್ಪ ಸ್ವರ ಕುಗ್ಗುತ್ತಾ ಬರುವುದು).

ಅನಾ : ಈಗ ಎರಡು ತಿಂಗಳ ಮುಂಚೆ ನೀನು ತಲೆಗೂದಲು ಕತ್ತರಿಸದೆ ಕುತ್ತಿಗೆಯವರೆಗೆ ಇಳಿಬಿಟ್ಟದ್ದುಂಟು ಹೌದೇ ?

ನಿರೂ : (ಸೋತು) ಹೌದು, ಹೌದು, ಹೌದು !

ಅನಾ : ಕಳೆದ ತಿಂಗಳು ನಿಮ್ಮ ಮನೆಯಲ್ಲಿ ಹತ್ತಿಪ್ಪತ್ತು ಸ್ನೇಹಿತರು ಸೇರಿದಾಗ ನೀನೊಂದು ಜೋಕ್ ಹೇಳಿ ಅದಕ್ಕೆ ಯಾರೂ ನಗದಿದ್ದ ಕಾರಣ ಮುನಿಸಿಕೊಂಡು ಮೂಲೆಯಲ್ಲಿ ಕೂತಿದ್ದುಂಟು ಹೌದೋ ?

ರೂ : ಹೌದು, ಹೌದು ! ಸಾಕಿನ್ನು ಏನಾಗಬೇಕಾಗಿದೆ. ನಿನಗೆ ?

ಅನಾ : ಮೊದಲು ಒಪ್ಪಿದೆಯಾ, ನಿನಗೂ ಒಂದಲ್ಲ ಒಂದು ರೀತಿ ಬೆಳಕಿಗೆ ಬರಬೇಕು ಅನ್ನುವ ಆಸೆ ಇದೆ ಅಂತ....

ರೂ : ಒಪ್ಪಿದೆ ! ಈಗ, ನಿನ್ನ ಕೆಲಸ ಏನು, ಹೇಳು,

ಅನಾ : ಈ ಒಂದು ಸಲ, ನಾನು ಪಾತ್ರವಹಿಸದೆ ನೇಪಥ್ಯದಲ್ಲಿ ನಿಂತು, ನಡೆಯುವ ವಿದ್ಯಮಾನವನ್ನ ನೋಡಬೇಕು ಅಂತ, ಇದ್ದೇನೆ. ನನ್ನ ಕೆಲಸ, ನೀನು ನೋಡಬೇಕು ಈ ಸಲ.... ನಿನಗೇ ಪ್ರಸಿದ್ಧಿ ಬರಲಿ ಅಂತಲೇ ಈ ಕೆಲಸ ನಾನು ಯೋಚಿಸಿದ್ದು.

ರೂ : ಏನದು, ಮಾಡಬೇಕಾದ್ದು ?

ಅನಾ : ಇದುವರೆಗೆ ನೀನು ಪ್ರಾಮುಖ್ಯತೆ ಪಡೆಯಲು ಮಾಡುತ್ತಿದ್ದ ಕೆಲಸದ ಹಾಗಲ್ಲ ಇದು. ಸ್ವಲ್ಪ ಬುದ್ಧಿ ಉಪಯೋಗಿಸಬೇಕು.

ರೂ : ಹೇಳು, ಮತ್ತೆ, ಮಾಡೋಣ. ಹಾಗಾದರೂ ಪ್ರಸಿದ್ಧಿ ಪಡೆಯೋಣ.

ಅನಾ : ಭೇಷ್ ! ಆ ಸ್ಫೂರ್ತಿ ಇದ್ದರೆ ಸಾಕು. ಗಮನವಿಟ್ಟು ಕೇಳು, ಇವತ್ತು ಸಾಯಂಕಾಲ ರೋಮಿಗೆ ಹೊರಡುವ ಅಲಿಟಾಲಿಯಾ ಪ್ಲೇನಿನಲ್ಲಿ ನಿನ್ನ ಹೆಸರಿಗೆ ಒಂದು ಸೀಟು ರಿಜರ್ವಾಗಿದೆ.... ನಿನ್ನ ಕೋಟು ಜೇಬಿನಲ್ಲಿ ಒಂದು ನಕಲೀ ಪಿಸ್ತೂಲಿದೆ, ನೋಡಿದರೆ ಭಯ ಹುಟ್ಟಿಸುವಂಥದ್ದು ಈಗ ಗಮನಿಸಿಕೇಳು, ಹೇಳುವುದನ್ನ........

(ಅವನ ಧ್ವನಿ ಕ್ಷಯಿಸುತ್ತ ಬರುತ್ತಲೇ, ಜೆಟ್ ವಿಮಾನ ಹೊರಟ, ಆಮೇಲೆ ಹಾರುವ ವಿಮಾನದೊಳಗಿನ ಶಬ್ದ ಏರಿಬಂದು ಎರಡುಕ್ಷಣವಿರುತ್ತದೆ. ಆಮೇಲೆ ಅದು ಹಿನ್ನೆಲೆಯಲ್ಲಿರುತ್ತದೆ.)

ನಿರೂ : (ಭಯಹುಟ್ಟಿಸುವ ಖಳನಾಯಕನ ಧೋರಣೆಯಲ್ಲಿ) ಕ್ಯಾಪ್ಟನ್, ಪ್ಲೇನನ್ನ ಸಿಂಗಪೂರಿನ ದಿಕ್ಕಿಗೆ ತಿರುಗಿಸಿ ಅಲ್ಲಿ ಇಳಿಸುವ ಏರ್ಪಾಡು ಮಾಡು. ಏ ನೀನು ರೇಡಿಯೋದಲ್ಲಿ ಸುದ್ದಿ ಕಳಿಸುವಾಗ, ಸಿಂಗಪೂರಿನ.

ಸ್ತ್ರೀ ಧ್ವನಿ : ಮೂರ್ಖ್ಯಾಳ! ಆಟದ ಪಿಸ್ತೂಲು, ಅದನ್ನು ತಲೆಕೆಳಗಾಗಿ ಹಿಡಿದಿದ್ದೀಯೆ! ಕೈಗಳನ್ನ ಮೇಲೆತ್ತಿ ಹಿಡಿ... ಅಲುಗಾಡಿದರೆ ನಿನ್ನ ಬೆನ್ನಿಗಂಟಿರೋ ಈ ರಿವಾಲ್ವರಿನ ಗುಂಡು ನಿನ್ನನ್ನ ಛಿದ್ರ ಛಿದ್ರ ಮಾಡಿಬಿಡುತ್ತೆ.... ಹಾಗೇ ತಿರುಗು....ಹಾಂ....ನಡಿ ಒಳಗೆ, ಪ್ಲೇನನ್ನ ಸೆರೆಹಿಡಿದ ಖ್ಯಾತಿ ನಿನಗೆ ಬರದೇ ಹೋದರೂ ನಿನ್ನನ್ನ ಹಿಡಿದುಕೊಟ್ಟ ಏರ್ ಹೋಸ್ಟೆಸ್ ಅಂತ ನನಗಾದರೂ ಪ್ರಸಿದ್ಧಿ ಬರುವುದು ಖಂಡಿತ! ಸ್ವಲ್ಪ ತಡಿಯಿರಿ ಫೋಟೋಗ್ರಾಫರೇ, ತಲೆಯ ಮೇಲಿನ ಟೋಪಿ ತೆಗೆದುಬಿಡ್ತೇನೆ....

(ಆಕೆಯ ಧ್ವನಿ, ಪ್ಲೇನಿನ ಸದ್ದಿನ ಜತೆ ಸೇರಿ ಕ್ರಮೇಣ ಕ್ಷಯಿಸಿಹೋಗುತ್ತದೆ)

ನಿರೂ : (ನಿಟ್ಟುಸಿರು ಬಿಟ್ಟು) ಇಟಲಿಯ ಜೈಲುಗಳು ನಾನು ತಿಳಿದಿದ್ದಷ್ಟು ಕೆಟ್ಟವಲ್ಲ. ಅಲ್ಲಿಯ ಪೋಲೀಸರೂ ನಾನೆಣಿಸಿದ್ದಕ್ಕೆ ಪ್ರತಿಯಾಗಿ ನನ್ನನ್ನ ಆದರದಿಂದಲೇ ಕಂಡರು; ನಾನು ಕೇಳಿಕೊಂಡಿದ್ದಕ್ಕೆ ಒಂದು ಪೆನ್ಸಿಲು, ನೋಟ್‌ಪುಸ್ತಕವನ್ನು ದಯಪಾಲಿಸಿದರು. ಆದರಿಂದಲೇ ಜೈಲಿನಲ್ಲಿ ಕೂತು ಇಷ್ಟನ್ನೆಲ್ಲ ಬರೆಯಲು ಸಾಧ್ಯವಾಯ್ತು. ಆಮೇಲೆ ಅನಾಮಿಕನ ದರ್ಶನ ನನಗಾಗಲಿಲ್ಲ. ಆದರವನ ಪ್ರಭಾವ ನನ್ನಮೇಲೆ ಶಾಶ್ವತವಾದ ಪರಿಣಾಮಂದ್ದಾಗಿತ್ತು....ಇಟಲಿಯ ಪತ್ರಿಕಾ ಪ್ರತಿನಿಧಿಗಳು, ಫೋಟೋಗ್ರಾಫರುಗಳು, ಎಲ್ಲಾದರೂ ಸುದ್ದಿ ಬೇಟೆ ಇದೆಯೆಂತ ತಿಳಿದರೆ ಸಾಕು, ತಂಡ ತಂಡವಾಗಿಯೇ ಬಂದು ಸೇರುತ್ತಾರೆ. ಅವರಿಗೆಲ್ಲ ಬೇಜಾರುಪಟ್ಟುಕೊಳ್ಳದೆ, ವರ್ಣವಿವರ್ಣವಾಗಿ ನನ್ನ ಕಥೆಯನ್ನ ಹೇಳಿದೆ. ನನ್ನ ವಿಮಾನಾಪಹಾರ ಪ್ರಯತ್ನದ ವಿವರಣೆಗಳು. ಹಿಂದೆಂದು ಇಲ್ಲದಷ್ಟು, ಪ್ರಪಂಚದಲ್ಲೆಲ್ಲಾ ಪ್ರಕಟವಾದವು. ನನ್ನಿಂದ ಆ ಇಟಾಲಿಯನ್ ಏರ್‌ಹೋಸ್ಟೆಸ್‌ಗೂ ಪ್ರಸಿದ್ಧಿ ಬಂದಿತಲ್ಲದೆ ಆಕೆಗೆ ಸರಕಾರದಿಂದ ಧನ

ಕನಕ ಸಹಿತ ಪ್ರಶಸ್ತಿಯೂ ಬಂತು. ಆಕೆಯ ಚಿತ್ರ, ನನ್ನ ಬೆನ್ನಹಿಂದೆ ರಿವಾಲ್ವರ್ ಹಿಡಿದು ಬೆದರಿಸುತ್ತಿರುವ ಚಿತ್ರ, ಎಲ್ಲೆಲ್ಲೂ ಬೆಳಗಿತು. ಮೊಟ್ಟಮೊದಲನೆಯ ಸಲ. ನಾನು, ಸ್ವಪ್ರಯತ್ನದಿಂದ ಜಗಪ್ರಸಿದ್ಧಿ ಹೊಂದಬಯಸಿದ್ದು.... ಸಫಲವಾಯ್ತು ಅಂತೀರಾ ? ಹೇಗೆ ?

ಸೋಮಶೇಖರ ಇಮ್ರಾಪೂರ

ದುಮ್ಮಜಲಿನ ಮನಿ

ಏನ್ಮಜಾ ಅಂತೀದಿ,
ದೆವ್ವನಂಥಾ ದುಮ್ಮಜಲಿನ ಮನಿ, ತೆಕ್ಕಿಗಮರದ ಕಂಬ
ಕಂಬ ಕಂಬದಾಗೂ ಥೂಳಿಟ್ಟು ಥೂಳಾ ಹೊಡಿಯೂ
ಹಲ್ಲ ಕಿಸ್ದ
ಹುಂಗಾಮುದ್ದುಡಿಗ್ಯಾರು ಕಾಲ್ತೋರ್ಸಿದ್ರೂನು ಚಿಂತಿಲ್ಲ
ಅದೆಲ್ಲಾ ಚಿತ್ತಾರದ ಗೊಂಬಿ.
ಚಂದ್ರಕಾಳೀ ಸೀರ್ಯಾಗ ಮಾರೀ ಇಟ್ಟ
ಚಂದುಪ್ನಂಥಾ ಚಂದಪ್ನಽ
ಮುಲಕು ಮುರಕೊಂಡಾ ಅನ್ನೂದು
ಹಳೇ ಮಾತು.

ಹದಿನಾರಂಕಣ ಪಡಸಾಲಿ, ಅದರ್ತುಂಬಾ ಕಣಗಲ ಹೂ
ಕಣ್ತುಂಬಾ ಜಾಡದ ಚಕ್ರ, ಕಂಡಲ್ಲೆ ಕುಡಗೋಲು
ಬಿಚ್ಚಿಟ್ಟ ತೊಟ್ಟಲದಾಗ ಗುಬ್ಬೀ ಬಚ್ಚು
ಗ್ವಾಡೀ ಹಾಯೂ ಕಣ್ಣಕಪ್ಪಡಿ,
ನಡುಮನಿ ಪಲ್ಲಂಗದಾಗ ಕಾಲ ಕಿಸಗೊಂಡು
ಬರೆಬತ್ತಲಾ ಬಿದ್ದ
ಸೆಗಣೀ ಗೊಂಬಿ ಬೋರ್ಯಾಡಿ
ಅತ್ತತ್ತು ಬ್ಯಾಸತ್ತು ಉಸ್ ಅಂದ್ಹಾಂಗ
ಮುಸದಾಡೂ ಬೆಳಕಿಂಡೀ ಗಾಳಿ,
ಕೆಂಜಗೀ ಸೀರ್ಯಾಗ ಸಂಜಿಗತ್ತಲ ಸೋಗು ಹಾಕಿ

ಣ್ಣ,
ಣ್ಣಾಗಿ ಹಣ್ಣಾಗಿ ಹುಣ್ಣಾಗಿ
ಸಿಗುಂಟಾ ಹರೆ ಕೀವು ಸೋರುವಾಗ
ರೀ ಮ್ಯಾಲ ಬಗರೀ ಗಿನ್ನಿ
ಳ.
ಹಲ್ಲಿ ಸೆಟದು ಬಕ್ಕಬರ್ಲೆ ಬಿದ್ದಾಗ
ಜಾ ಮಾಡೂ ನೊಣಾ.

ಕಸ್ತೂರಿ ಕೈ ನನ್ನೆದಿಮ್ಯಾಲ ಬಂದಾಗ
ಂಗಿದ್ದೀತು ಹಿತಾ
ಂತರ ನಿರಿಗ್ಯಾಗ ಹಸ್ತದಡಲಾ ಕರೇ ಜೋಳು
ಲ್ಲಕ ಮ್ಯಾಗೇರಿದ ನೆನಪು.
ಮಿಂಕೀ ಕಟದ ಕಿಡೀ ಬಿದ್ದ ದೂದಿ
ಎದಿ.
ವರುತ್ತಂಬಾ ಹಾದರಗಿತ್ತೀದ ಹಾವಳಿ.
ತೀ ಆಕಾಶನ ಹೂಸು ಬಿಟ್ರ
ಸಿಗಿ ಅನ್ನೂದೆಲ್ಲೈತಿ.
ಜೇನು ಹುಟ್ಟಿನ್ಯಾಗ ಕೈಯಿಟ್ಟು
ಟ್ಟಿಸಿಕೊಳ್ಳೂ ಹಾದರ.

ನೆನಪಿನ್ಯಾಗ ಅದೂ ಒಂಥರಾ
ನೆನಪಿನ್ಯಾಗ ಇದೂ ಒಂಥರಾ
ಟ್ಟಿನ್ಯಾಗ ಥರಗುಟ್ಟಿ ಚಟ್ಟಬೆಳಗಿ
ರಗೂಣ್ಯಾಗ ಇಟ್ಟಾಂಗಾಗಿ
ನ್ನದನ್ನೂದಂ ಯಾರ್ದೋ ಆಗಿ
ನ ಹೋದ ಕಾಲ ಮಂಡಿಗೆ
ಟೆ ನಿಂತ ಈ ಮನಿ ಧೂಳಾ ನೆಲಕ ಬಿತ್ತು.

ಹೆಣಾಸುಟ್ಟು ರಂಗೋಲಿ ಇಟಗೊಂಡು
ದುರ್ ದುರ್ ದುವ ಂಗುಡೂ
ಈ ಫಂನ್ಯಾಗ
ತಾಳಾ ಕುಟ್ಟೊ ಕಾಣದ ತಾಳಾ
ಕುಣಿತಿರೂ ಕಾಣದ ಕಾಲು
ಸುಳೂವಿಲ್ಲದ ಅಳೂ ದನಿ
ತಲಿ ಧಿಂ ಅಂತು,
ಈ ಮನಿ ಹೊಸ್ತಲದಾಗ ಪುಳಿ ಹೊಡೆದು
ಹೊರಗ ಇರೂದು ಚೋಲೋ
ಒಳಗ ಹೋದರ ಹೆಣಾ,
ಅಲ್ಲಿರೂವ ಹೆಣಾ.
ಹೆಣದಗೂಡ ಹೆಣಾ ಆಗಿ
ಕ್ವಾಣದ ಚಾಕರೀ ಮಾಡೂದು ಯಾವ ಹೇಳ್ಯಾನ.

ಈ ಮನಿ
ಮನಿಯಾನ್ಬೆಳಕು
ಮ್ಯಾಗಿನ್ಮುಗಿಲು
ಮುಗಿಲಾನ ಕರೇ ಮಾಡಾ
ಬ್ಯಾನ್ಯಾಗಿ ತಿರುಗಳಿ ಬೇಚರ್ಸಿ ಹವಾ
ಇವ್ಯಾವೂ ಇಲ್ಲದ
ಬೇಕಾಗೂ ಜಾಗಾದಾಗ ಹೋಗಿ
ಹೊಗಿ ಮಾಡಿ
ಕಳ್ಳತುಂಬಾ ತಿಂದು
ಹೊಕ್ಕಳದಾಗಿನ ಆನಂದಾ
ಬಾಯ್ತುಂಬಾ
ಕ್ಯಾಕರಿಸಿ ಉಗುಳ್ತೀನಿ.

ಂತ್ಯಾಕ ತೆಲಿಗೇರ್ತವೋ
ಂದೊಂದು
ಂಗುಟಾ ಹರಕೊಂಡು ಗೊಣ್ತಂಬಾ ಬಿದ್ದ
ಸ
ಳೇಕೆರುವು,
ತ್ !
ಈ ಎಮ್ಮೀ ವರ್ಷಾನೂ ಕಟ್ಟಿಸೂದಂದ್ರ
ವ್ವಣಗ ಹತ್ತೀಕೊಳ್ಳಬೇಕಲ್ಲ!

ವಿ. ಜಿ. ಭಟ್ಟ

ದಾಟಿ ಹೋದ ಕುತ್ತು

ಜಾರಿ ಬರುತ್ತಿದೆ ನನ್ನ ಮೈಮೇಲೆ ಹೆಬ್ಬಾವು
ಅದರ ಕೂದಲು ಸೊಲ್ಪ ಕೊಂಕಿದರೆ ಸಾಕು
ನನ್ನಂಥ ಲಕ್ಷ ಹುಳ ಹುಪ್ಪಡಿಗೆ ಸಾವು

ಸಾವು ಬಂದಿರೆ ಸತ್ತಹಾಗಿರುವದೇ ಗತಿಯು
ತೆಪ್ಪಗೇ ಬಿದ್ದುಕೊಂಡೆ
ನನಗೆ ಸೋಂಕದೆ ನನ್ನ ಮೇಲೆಯೇ ಸಾಗಿದ್ದ
ಸಾವ ಕಣ್ಣಾರೆ ಕಂಡೆ!

ನಾನು ಪಾರಾದೆನೇ ? ಇಲ್ಲ
ನನ್ನನೇ ದಾಟಿತ್ತು ಕುತ್ತು, ಏತ್ತು
ಆನೆ ಹೆಜ್ಜೆಯು ಕೆಳಗೆ
ಇರುವೆ ಬದುಕಿತ್ತು !

ಶಾಂತಿನಾಥ ದೇಸಾಯಿ

ಕಾರ್ನಾಡರ 'ಹಯವದನ'

ರೇಡಿಯೊ ಸಂದರ್ಶನ

ಾಂ. ದೇ : ಗಿರೀಶರೇ, ನಿಮ್ಮ ಹೊಸ ನಾಟಕವಾದ ಹಯವದನಕ್ಕೆ ಭಾರತೀಯ ನಾಟ್ಯಸಂಘದವರ ಕಮಲಾದೇವಿ ಪ್ರಶಸ್ತಿ-೫೦೦೦ ರೂ. ಗಳದ್ದು- ಸಿಕ್ಕಿದೆಯೆಂದು ಕೇಳಿ ನಮಗೆಲ್ಲ ತುಂಬ ಸಂತೋಷವಾಗಿದೆ. ಹೃತ್ಪೂರ್ವಕ ಅಭಿನಂದನೆಗಳು.

. ಕಾ. : ಥ್ಯಾಂಕ್ಸ್.

ಾಂ. ದೇ. : ಭಾರತದ ಸಾಂಸ್ಕೃತಿಕ ನಕಾಶೆಯಲ್ಲಿ ಕನ್ನಡಕ್ಕೆ ಸ್ಥಾನ ಗಳಿಸಿ ಕೊಟ್ಟ ಕೆಲವೇ ಲೇಖಕರಲ್ಲಿ, ಕಲಾವಿದರಲ್ಲಿ ನೀವು ಅಗ್ರಗಣ್ಯರಾಗಿದ್ದೀರಿ- ನಮಗಿದು ಅತ್ಯಂತ ಅಭಿಮಾನದ ವಿಷಯ.

ಕಾ : (ವಿನಯದ ನಗೆ).

ಾಂ. ದೇ. : ಗಿರೀಶ, ನಿಮಗೆ ಪ್ರಶಸ್ತಿಗಳು, ಗೌರವಗಳು ಹೊಸದೇನಲ್ಲ. ರ್ಹೋಡ್ಸ್ ಸ್ಕಾಲರ್‌ಶಿಪ್, ಆಕ್ಸಫರ್ಡ್ ಯುನಿಯನ್ನದ ಅಧ್ಯಕ್ಷತೆ, ಯಯಾತಿಗೆ ಮೈಸೂರು ರಾಜ್ಯದ ಪ್ರಶಸ್ತಿ, ತುಘಲಕಕ್ಕೆ ಸಂಗೀತ ನಾಟಕ ಅಕೆಡಮಿಯ ಪ್ರಶಸ್ತಿ, ನಂತರ ಹೋಮಿಭಾಭಾ ಫೆಲೊಶಿಪ್, ಈಗ ಹಯವದನಕ್ಕೆ ಭಾರತೀಯ ನಾಟ್ಯ ಸಂಘದ ಪ್ರಶಸ್ತಿ. ಇರಲಿ. ಈ ಪ್ರಶಸ್ತಿ ಸಂಪೂರ್ಣ ಅನಪೇಕ್ಷಿತವಾಗಿತ್ತೇ ಅಥವಾ ಒಂದು ರೀತಿಯಲ್ಲಿ- ಅಸ್ಪಷ್ಟವಾಗಿ- ಅಪೇಕ್ಷಿತವಾಗಿತ್ತೇ ?

. ಕಾ. : ಲೇಖಕ ಒಂದು ಕೃತಿಯನ್ನು ಒಂದು ಸ್ಪರ್ಧೆಗೆ ಕಳಿಸಿದಾಗ, ಅದಕ್ಕೆ ಬಹುಮಾನ ದೊರೆಯಬಹುದೆಂಬ ಅಪೇಕ್ಷೆ, ಒಂದಿಲ್ಲೊಂದು ರೀತಿಯಲ್ಲಿ, ಇದ್ದೇ ಇರುತ್ತದೆ. ಹೋದ ವರ್ಷ ಈ ಬಹುಮಾನ ವಿಜಯ ತೆಂಡೂಲಕರರ **ಶಾಂತತಾ ! ಕೋರ್ಟ ಚಾಲೂ ಆಹೆ** ನಾಟಕಕ್ಕೆ ಸಿಕ್ಕಿತ್ತು; ಈ ವರ್ಷ ಬಾದಲ ಸರಕಾರ ಅವರು, ಅದ್ಯರು ತಮ್ಮ ನಾಟಕಕ್ಕೆ

ಗಳನ್ನು ಈ ಸ್ಪರ್ಧೆಗೆ ಕಳಿಸಲಿದ್ದಾರೆಂದು ಕೇಳಿದೆ. ನನಗೂ ನನ್ನ ಹಯವದನ (Enact ದ ಸಲುವಾಗಿ ನಾನು ಮಾಡಿದ ಭಾಷಾಂತರ ಸಿದ್ಧವಿತ್ತು) ಕಳಿಸುವ ಆಸೆಯಾಯಿತು. ಕಳಿಸಿದೆ.

ಶಾಂ. ದೇ. : ಭಾರತೀಯ ಭಾಷೆಗಳಲ್ಲಿಯೇ ಈ ವರ್ಷದ ಶ್ರೇಷ್ಠ ನಾಟಕವೆಂದು ಹಯವದನ ಆಯ್ಕೆಯಾಗಿದೆ, ನಿಜ.... ನಿಮ್ಮ ನಾಟಕಗಳಲ್ಲಿಯೇ ಇದು ಶ್ರೇಷ್ಠವಾದದ್ದು ಎಂದು ನಿಮಗನಿಸುವದೇ ?

ಗಿ. ಕಾ : ಲೇಖಕನಿಗೆ ಬೆಳೆಯಬೇಕೆಂಬ ಆಸೆ ಯಾವಾಗಲೂ ಇದ್ದೇ ಇರುತ್ತದೆ ಹಿಂದಿನ ಕೃತಿಗಳಿಗಿಂತ ಹೊಸದಾಗಿ ಬರೆದ ಕೃತಿ ಹೆಚ್ಚು ಪ್ರಬುದ್ಧವಾಗಿದೆ, ಹೆಚ್ಚು ಪರಿಪೂರ್ಣವಾಗಿದೆ ಎಂಬ ಆಸೆ ಲೇಖಕನಿಗೆ ಇರುವದು ಸಹಜ

ಶಾಂ. ದೇ. : ಕಲಾತ್ಮಕತೆಯ ದೃಷ್ಟಿಯಿಂದ ಹಯವದನ ನಿಮ್ಮ ಶ್ರೇಷ್ಠ ಕೃತಿಯೆಂದು ನಿರಾತಂಕವಾಗಿ ಹೇಳಬಹುದೆಂದು ನನಗನಿಸುತ್ತದೆ. ರಂಗಭೂಮಿಯ ದೃಷ್ಟಿಯಿಂದಂತೂ ಈ ನಾಟಕದಲ್ಲಿ ಎಷ್ಟೋ ಉತ್ಕೃಷ್ಟವಾದ ಸಾಧ್ಯತೆಗಳಿವೆ. ಆ ದೃಷ್ಟಿಯಿಂದ ಇದನ್ನು ನಿರ್ದೇಶಕನ ನಾಟಕವೆಂದು ಕರೆಯಬಹುದೇನೋ....

ಗಿ. ಕಾ : ತುಘಲಕವನ್ನು ನಟನ ನಾಟಕವೆಂದು ಕರೆದಿದ್ದಾರೆ....

ಶಾಂ. ದೇ. : ಹಯವದನದಲ್ಲಿ ಯಯಾತಿ, ತುಘಲಕ, ಹಿಟ್ಟಿನ ಹುಂಜ ಈ ನಾಟಕಗಳ ದಿಶೆಯಲ್ಲಿಯೇ ನೀವು ಮುಂದೆ ಹೋಗಿದ್ದೀರಿ ಎಂದೆನಿಸುವದೋ ಅಥವಾ ಇಲ್ಲಿ ಏನಾದರೂ ಹೊಸ ಸಿದ್ಧಿಯನ್ನು ಸಾಧಿಸಿದ್ದೀರಿ ಎಂದೆನಿಸುವದೋ ?

ಗಿ. ಕಾ. : (ಉತ್ತೇಜಿತರಾಗಿ) ಹಯವದನದಲ್ಲಿಯ form ನನಗೆ ಅತ್ಯಂತ ಹೊಸದು. ಇಲ್ಲಿ ಒಂದು ಕೇಂದ್ರ climax ದತ್ತ ಹೋಗುವ ರಚನೆಯಿಲ್ಲ. ಈ ನಾಟಕದ ಓಘ (movement) ಮೇಲೆ ಕೆಳಗೆ, ಮೇಲೆ ಕೆಳಗೆ, ಒಂದು ವಿಶಿಷ್ಟ ಲಯಬದ್ಧವಾದ ರೀತಿಯಲ್ಲಿ ಮುಂದರಿಯುತ್ತದೆ.

೦. ದೇ. : ಇಲ್ಲಿಯ ತಂತ್ರ ಅತ್ಯಂತ ವೈಶಿಷ್ಟ್ಯಪೂರ್ಣವಾಗಿದೆ, ನಿಜ. ಇಲ್ಲಿ ಬರುವ ಯಕ್ಷಗಾನದ ತಂತ್ರವಾಗಲಿ, ಸಂಸ್ಕೃತ ನಾಟಕಗಳ ಸೂತ್ರಧಾರ ನಟರ ವಿಷಯವಾಗಲಿ ಕುತೂಹಲಕಾರಿಯಾದ ರೀತಿಯಲ್ಲಿ ಉಪಯೋಗಿಸಲ್ಪಟ್ಟಿದೆ. ಈ ಸಾಂಪ್ರದಾಯಿಕ ತಂತ್ರಗಳನ್ನು ಬೇಕಂತಲೇ, ಅಂದರೆ ಹಳೆಯದಕ್ಕೆ ಹೊಸ ರೂಪು ಕೊಡುವ ಉದ್ದೇಶದಿಂದ, ಉಪಯೋಗಿಸಿದ್ದೀರಾ ಅಥವಾ....?

ಕಾ. : ವೇತಾಳಪಂಚವಿಂಶತಿಯೊಳಗಿನ ಕತೆಯನ್ನೂ ಟಾಮಸ್ ಮಾನನು ಬರೆದ ಆ ಕತೆಯ ರೂಪಾಂತರವನ್ನೂ (Trasposed Heads) ನನ್ನ ಒಬ್ಬ ಮಿತ್ರರಿಗೆ ಹೇಳಿದೆ. ಅವರು ಆ ಕತೆಯ ಮೇಲೆ ನಾಟಕ ಬರೆಯಲು ನನ್ನನ್ನು ಪ್ರೋತ್ಸಾಹಿಸಿದರು. ಆ ಕತೆಗೆ ನಾಟ್ಯರೂಪ ಹೇಗೆ ಕೊಡಬೇಕೆಂದು ವಿಚಾರ ಮಾಡುತ್ತಿದ್ದಾಗ— ಮೊದಲಿಗೆ ಮುಖವಾಡಗಳ (masks) ಅವಶ್ಯಕತೆ ನನಗೆ ಮನದಟ್ಟಾಯಿತು (ಒಬ್ಬರ ತಲೆ ಮತ್ತೊಬ್ಬರ ದೇಹಕ್ಕೆ ಅಂಟಿಸುವ ಘಟನೆ ಕತೆಯ ಕೇಂದ್ರ ಘಟನೆ— ಅದನ್ನು ಮುಖವಾಡಗಳ ಮೂಲಕವೇ ನಾಟ್ಯೀಕರಿಸುವದು ಶಕ್ಯ); ಹೀಗೆ ಮೊಗವಾಡ ಉಪಯೋಗಿಸಿದ್ದರಿಂದ ಮುಖಾಭಿನಯ ಗೌಣವಾಯಿತು. ಆ ಕೊರತೆ ತುಂಬಿಕೊಳ್ಳಲು ಹಾಡುಗಳನ್ನು ಹಾಕೋಣ ಎನ್ನಿಸಿತು. ಒಂದು ಜಾನಪದ ತಂತ್ರ ಇನ್ನೊಂದನ್ನು ಸೂಚಿಸಿತು : ಭಾಗವತ ಬಂದ, ಗಣೇಶಪೂಜೆ ಬಂತು.... ಆನೆಮುಖದ ಗಣಪತಿಗೂ ಈ ಕತೆಗೂ ಒಂದು ಸಂಬಂಧ ಕಂಡು ಬಂತು— ಹೀಗೆ form ತನ್ನಿಂದ ತಾನೇ ಬೆಳೆಯಿತು ಎಂದು ಹೇಳಬಹುದು.

೦. ದೇ. : ಅಂದರೆ ಹಯವದನದ ರಚನೆ, ತಂತ್ರ, ಬುದ್ಧಿಪೂರ್ವಕವಾಗಿ ಉಪಯೋಗಿಸಲ್ಪಡದೆ, ಕತೆಗೆ ಹೊಂದಿ ಸೇಂದ್ರಿಯವಾಗಿಯೇ ರೂಪಿಸಲ್ಪಟ್ಟಿವೆ ಎಂದ ಹಾಗಾಯಿತು.... ಇನ್ನು ಈ ಕತೆ ನಿಮ್ಮ ಮನಸ್ಸಿಗೆ ಯಾಕೆ ಹಿಡಿಸಿತು ಎಂದು ಕೇಳಬಹುದೇ ? ಅದರಲ್ಲಿಯ ನಾಟಕೀಯ ಸಾಧ್ಯತೆಗಳು ನಿಮ್ಮನ್ನು ಆಕರ್ಷಿಸಿದವೋ ಅಥವಾ ನಿಮ್ಮ ಯಾವುದಾದರೂ ವಿಚಾರ ಪ್ರಣಾಲಿಯ ಅಭಿವ್ಯಕ್ತಿಗೆ ಈ ಕತೆ ಅನುಕೂಲ

ವಾಗಿದೆ ಎಂದೆನಿಸಿತೋ ಅಥವಾ ಈ ಕತೆಯ ಆಯ್ಕೆಯ ಹಿಂದೆ ಏನಾದರೂ ವೈಯಕ್ತಿಕವಾದ ಅಗತ್ಯವಿದೆಯೇ ?

ಗಿ. ಕಾ. : ನಾನು ಒಂದು ವಿಶಿಷ್ಟ ವಿಚಾರಪ್ರಣಾಲಿಯ ಅಭಿವ್ಯಕ್ತಿಗಾಗಿಯೇ ಬರೆದ ನಾಟಕ ಒಂದೇ ಒಂದು : 'ಹಿಟ್ಟಿನ ಹುಂಜ.' ಬಹುಶಃ ಅದಕ್ಕಾಗಿಯೇ ಅದು ಸಫಲವಾಗಲಿಲ್ಲ. ಉಳಿದ ನಾಟಕಗಳನ್ನೆಲ್ಲ ನಾನು ಕತೆಗೆ ಮನಸೋತೇ ಬರೆದದ್ದು. ಅಲ್ಲದೆ ಯಯಾತಿ, ತುಘಲಕ ಗಳ ಗಾಂಭೀರ್ಯ ಬದಿಗಿಟ್ಟು ಒಂದು ಹಗುರವಾದ ನಾಟಕ ಬರೆಯಬೇಕು ಎಂಬ ಆಸೆಯಿತ್ತು ಅದಕ್ಕಾಗಿಯೂ ಹಯವದನ ಬರೆದೆ ಎನ್ನಬಹುದು.

ಶಾಂ. ದೇ. : ಹಯವದನದಲ್ಲಿ ಎರಡು ಕತೆಗಳಿವೆಯಷ್ಟೆ— ಹಯವದನನ ಕತೆ ಹಾಗೂ ದೇವದತ್ತ-ಕಪಿಲರ ಕತೆ. ಇವುಗಳಲ್ಲಿ ಯಾವುದು ಮುಖ್ಯ, ಯಾವುದು ಅಮುಖ್ಯ ?

ಗಿ. ಕಾ. : ನಾಟಕ ಬರೆಯುವ ವಿಚಾರ ದೇವದತ್ತ ಕಪಿಲರ ಕತೆಯಿಂದ ಹುಟ್ಟಿತಾದರೂ, ಒಂದು ಇನ್ನೊಂದರಕ್ಕಿಂತ ಹೆಚ್ಚು ಮಹತ್ವವಾದದ್ದು ಎಂದು ಹೇಳಲಿಕ್ಕಾಗದು. ದೇವದತ್ತ-ಕಪಿಲರ ಕತೆ ಹೆಚ್ಚು ಉತ್ಕಟವಾಗಿದೆ, ಹೆಚ್ಚು ವೈಯಕ್ತಿಕವಾಗಿದೆ, ನಿಜ. ಆದರೆ ಹಯವದನನ ಕತೆಯೂ ಅಷ್ಟೇ ಮಹತ್ವದ್ದಾಗಿದೆ— ಅದಕ್ಕೆ ಸಮಾಂತರವಾಗಿದೆ.... ಎನಿಸುತ್ತದೆ.

ಶಾಂ. ದೇ. : ಹಯವದನನ ಕತೆ ಬರೇ ಚೌಕಟ್ಟೆಂದು ನಾನು ಭಾವಿಸಿದ್ದೆ. ಈಗ ಈ ಎರಡೂ ಕತೆಗಳ ಸಂಬಂಧದ ಬಗ್ಗೆ, ಅವುಗಳ ಜೋಡಣೆಯ ಬಗ್ಗೆ ಒಂದು ಮಾತು ಹೇಳ್ತೀರಾ ?

ಗಿ. ಕಾ. : ಕಪಿಲ-ದೇವದತ್ತರ ದುರಂತ ಸಂಪೂರ್ಣ ವೈಯಕ್ತಿಕವಾದದ್ದು. ಸುತ್ತಲಿನ ಸಮಾಜಕ್ಕೆ ಅದರ ಪತ್ತೆಯೇ ಹತ್ತುವದಿಲ್ಲ. ಅಲ್ಲಿ ನನಗೆ ಕಂಡ ವ್ಯಂಗ್ಯ ಇಷ್ಟೇ : 'ಅಪೂರ್ಣತೆ' 'ಅಪೂರ್ಣತೆ' ಎಂದು ಇವರಿಬ್ಬರು ತಲೆ ಜಜ್ಜಿ ಸತ್ತರೂ, ಕೊನೆಗೂ ಅಪೂರ್ಣಳಾಗಿರುವವರು ಅವರಲ್ಲ, ಪದ್ಮಿನಿ. ಪೂರ್ಣಾಂಗಳಾಗಿದ್ದೆ, ಅಪೂರ್ಣಳಾಗುತ್ತಾಳೆ.

ಈ ಮೂವರಿಗೂ ವಿರುದ್ಧವಾಗಿ ಹಯವದನನಿಗಿರುವದು ಸಾಮಾಜಿಕ ಸಮಸ್ಯೆ. ಅವನಿಗೆ ತನ್ನ ವೈಯುಕ್ತಿಕ ಕೊರತೆಗಿಂತ ತನ್ನದೇ ಆದ ಸಮಾಜದ ಅಭಾವ ಹೆಚ್ಚು ದುಃಖ ಕೊಡುತ್ತದೆ....ದೇಹ ಮನಸ್ಸುಗಳ ದ್ವಂದ್ವ ನಾಟಕಕ್ಕೆ ತೀರ ಅಮುಖ್ಯ.

ಂ. ದೇ. : ಈ ನಾಟಕದಲ್ಲಿ ಮನುಷ್ಯ-ಸಂಸ್ಕೃತಿಯ Identityಯ ಪ್ರಶ್ನೆಯೂ ಅಡಕವಾದಂತಿದೆ .... ನಾಟಕದ ಕೊನೆಯ ಭಾಗದಲ್ಲಿ 'ಪೂರ್ಣಾಂಗ'ದ ವಿಷಯ ಬರುತ್ತದಲ್ಲ — ಅದು ನಮ್ಮ ಭಾರತೀಯ ಸಂಸ್ಕೃತಿಯನ್ನು ಕುರಿತು ಬಂದಂಥ ಮಾತೇನು ?

. ಕಾ. : ನಾಟಕ ಬರೆಯುವಾಗ ಆ ಉದ್ದೇಶ ಇರಲಿಲ್ಲ. ಆದರೆ ಕೆಲವರು ನಾಟಕದಲ್ಲಿ ಅದನ್ನು ಕಂಡಿದ್ದಾರೆ. ನನಗೆ ಒಟ್ಟು ಪೂರ್ಣತ್ವದ Conceptನ್ನೇ ಪ್ರಶ್ನಿಸುವದಿತ್ತು. ಅಷ್ಟೇ.

ಂ. ದೇ. : ಗಿರೀಶ, ಹಯವದನದ ನಂತರ ಏನಾದರೂ ಹೊಸದನ್ನು ಬರೆಯುವ ಹೊಳಹು ಹಾಕಿದ್ದೀರಾ ?

. ಕಾ. : ನನ್ನ ತಲೆಯಲ್ಲಿ ಒಂದೆರಡು ನಾಟಕಗಳಿವೆ. ಆದರೆ ಸದ್ಯ....

ಂ. ದೇ. : ಗಿರೀಶ, ನಾಟ್ಯರಂಗದಲ್ಲಿಯ ನಿಮ್ಮ ಪ್ರಗತಿ ಅತ್ಯಂತ ವಿಸ್ಮಯ ಕಾರಕವಾದದ್ದು. ಅದರ ಕಾರಣವೇನು ಎಂದು ನೀವು ಹೇಳಬಹುದೇ ?

. ಕಾ. : (ನಗು).

ಂ. ದೇ. : ಹೋಗಲಿ. ನಿಮ್ಮ ಮೇಲೆ ನಿಮ್ಮ ಕತೆಯ ಮೇಲೆ ಆದಂಥ ಪ್ರಭಾವಗಳಾವುವು ಎಂದು ಹೇಳಬಹುದೇನು ?

. ಕಾ. : ಎಲ್ಲವನ್ನೂ ಹೇಳಲಿಕ್ಕಾಗುವದಿಲ್ಲ. ಕೆಲವನ್ನು ಮಾತ್ರ ಇಲ್ಲಿ ಹೇಳಬಹುದು. ನಮ್ಮ ಹಳೇ ಕಂಪನಿ ನಾಟಕಗಳು(ನಾನು ಚಿಕ್ಕವನಿದ್ದಾಗ ಸಿರ್ಸಿಯಲ್ಲಿ ನೋಡಿದ ಈ ನಾಟಕಗಳು ನನ್ನ ಮನಸ್ಸಿನ ಮೇಲೆ ಅತ್ಯಂತ ತೀಕ್ಷ್ಣವಾದ ಪರಿಣಾಮ ಮಾಡಿದ್ದವು— ಅದಕ್ಕೆಂದೇ ಬಹುಶಃ ನನಗೆ ರಾಜ-ರಾಣಿಯರ ಕತೆ ಬಹಳ ಇಷ್ಟವೇನೋ !); ಆ ನಂತರ ಶೇಕ್ಸಪಿಯರ, ಕಾಮೂ, ಸಾತ್ರ್, ಅನ್ವಿಲ್ ಇತ್ಯಾದಿ; ಭಾರತೀಯ ನಾಟಕಕಾರರಲ್ಲಿ ಬಾದಲ ಸರಕಾರ....

ಶಾಂ. ದೇ. : ಬಾದಲ ಸರಕಾರ ? ಅವರ concerns ಗಳಿಗೂ ನಿಮ್ಮ concerns ಗಳಿಗೂ ಯಾವ ಸಂಬಂಧವೂ ಕಾಣಿಸುವದಿಲ್ಲವಲ್ಲ....

ಗಿ. ಕಾ. : ನಾನು ಬಾದಲ ಸರಕಾರರ ಏವಂ ಇಂದ್ರಜಿತ್ ನಾಟಕವನ್ನು ನಿರ್ದೇಶಿಸುತ್ತಿದ್ದಾಗ ಅದರ ರಚನೆಯಲ್ಲಿ ಕಂಡು ಬರುವ fluidity ನನ್ನ ಮೇಲೆ ಪ್ರಭಾವ ಬೀರಿತು. ದೃಶ್ಯ ವಿಭಜನೆಯನ್ನು ಬಿಟ್ಟು ಒಟ್ಟೂ ರಂಗಭೂಮಿಯನ್ನು ಅಳವಡಿಸಿಕೊಳ್ಳುವ ಅವರ ರೀತಿ ಅಭ್ಯಸನೀಯ ಎನ್ನಿಸಿತು. ಅದೇ ರೀತಿ ನಾಟಕಕ್ಕೆ ಒಂದು ಕೇಂದ್ರೀಯ mood ಇಡದೆ ವೇಗದಿಂದ ಒಂದು ರಸದಿಂದ ಇನ್ನೊಂದಕ್ಕೆ ನುಗ್ಗುವ ರೀತಿ. Fluidity of mood ಅನ್ನಬಹುದೇನೋ—

ಶಾಂ. ದೇ. : ಸಾಧಾರಣವಾಗಿ ಪ್ರತಿಯೊಬ್ಬ ಒಳ್ಳೆಯ ಲೇಖಕ ಒಂದು ಪ್ರತ್ಯೇಕವಾದ ಜೀವನದೃಷ್ಟಿಯನ್ನು ಬೆಳೆಸಿಕೊಳ್ಳುತ್ತಾ ಹೋಗುತ್ತಾನೆ. ನಿಮ್ಮ ನಾಲ್ಕೈದು ನಾಟಕಗಳಲ್ಲಿ ಯಾವುದಾದರೂ ಒಂದು ವಿಶಿಷ್ಟವಾದ ಜೀವನ ದರ್ಶನವನ್ನು ರೂಪಿಸುವ ಹವ್ಯಾಸವಿದೆಯೇ, ಯಾವುದಾದರೂ ವಿಶಿಷ್ಟ ಮೌಲ್ಯಗಳ ಶೋಧನೆಯಿದೆಯೇ ಎಂದು ಕೇಳಬಹುದೇನು ?

ಗಿ. ಕಾ. : ನಾಟಕದಿಂದ ಪ್ರತ್ಯೇಕಿಸಬಹುದಾದ ತತ್ವಜ್ಞಾನ ನನಗೆ ಬೇಕಾಗಿಲ್ಲ. ಶೇಕ್ಸಪಿಯರನಿಗೆ ಅಂಥ ತತ್ವಜ್ಞಾನವೆಲ್ಲಿತ್ತು ?

ಶಾಂ. ದೇ. : ಅಂದರೆ ನಿಮಗೆ ಸದ್ಯ ನಾಟಕ ಮುಖ್ಯ– the play is the thing– ಎಂದ ಹಾಗಾಯಿತು, ಅಲ್ಲವೇ ?

ಗಿ. ಕಾ. : ಹೌದು. ಆದರೂ ನನ್ನ ನಾಟಕಗಳನ್ನು ಒಟ್ಟಾಗಿ ನೋಡಿದಾಗ ಕೆಲವು ವಿಷಯಗಳು ತಿರುತಿರುಗಿ ಬಂದಿವೆ ಅಂತ ಅನಿಸ್ತಾ ಇದೆ. ಉದಾಹರಣೆಗಾಗಿ, ಮನುಷ್ಯ ತನ್ನ identity ಬದಲಾಯಿಸುವ ವಿಷಯ ಯಯಾತಿಯಲ್ಲಿ ಬರುತ್ತದೆ, ನಂತರ ತುಘಲಕದಲ್ಲಿ, ಈಗ ಹಯವದನದಲ್ಲಿ ಬರುತ್ತದೆ. ಹೀಗೆ ಗೊತ್ತಾಗಿಯೂ ಗೊತ್ತಿಲ್ಲದೆಯೂ ಕೆಲವು ವಿಶಿಷ್ಟ ವಿಚಾರಗಳು, ಘಟನೆಗಳು, ಸಂಕೇತಗಳು ಲೇಖಕನನ್ನು

ಕಾಡಿಸಬಹುದು. ಅವುಗಳ ಹಿಂದೆ ಒಂದು ವಿಶಿಷ್ಟವಾದ ವಿಚಾರಸರಣಿ ರೂಪುಗೊಳ್ಳುತ್ತಾ ಇರಬಹುದು.

ಂ. ದೇ. : ನಿಮ್ಮ ಎಲ್ಲ ನಾಟಕಗಳನ್ನು ನೋಡಿದಾಗ ಒಂದು ಮಾತು ಎದ್ದು ಕಾಣಿಸುತ್ತದೆ– ಅದೆಂದರೆ ನಿಮಗೆ ಹಳೆಯ ಪೌರಾಣಿಕ, ಐತಿಹಾಸಿಕ, ಜಾನಪದ ಕತೆಗಳನ್ನು ತೆಗೆದುಕೊಂಡು ಹೊಸ ಪ್ರಜ್ಞೆಯ ನಾಟಕ ಬರೆಯುವದರಲ್ಲಿ ಹೆಚ್ಚಿನ ಆಸಕ್ತಿ.... ಆದರೆ ಆಧುನಿಕ ಭಾರತೀಯ ಜೀವನವನ್ನು, ಅದರಲ್ಲಿ ಅಡಕವಾದ ಸಮಸ್ಯೆಗಳನ್ನು ನೇರವಾಗಿ ನಾಟ್ಯೀಕರಿಸುವದರಲ್ಲಿ ನಿಮಗೆ (ಬಾದಲ ಸರಕಾರರಲ್ಲಿ ಇದ್ದಂಥ) ಆಸಕ್ತಿ ಇಲ್ಲ– ಯಾಕೆ ?

. ಕಾ. : ನಾಟಕಕಾರನೆಂದ ಮೇಲೆ ಜೀವನದ ಪ್ರತ್ಯಕ್ಷ ಅನುಭವದಲ್ಲಿ ಅವನಿಗೆ ಆಸಕ್ತಿ ಇದ್ದೇ ಇರುತ್ತದೆ. ಆದರೆ ಆಧುನಿಕ ಜೀವನ ಇಷ್ಟು ಸಂಕೀರ್ಣ, ಇಷ್ಟು ತೊಡಕಿನದಾಗಿದೆಯಲ್ಲ– ಅದನ್ನು ನಾಟಕರೂಪದಲ್ಲಿ ಹೇಗೆ ಹಿಡಿಯ-ಬೇಕು ಅನ್ನೋದೇ ಒಂದು ದೊಡ್ಡ ಸಮಸ್ಯೆ. ಹಾಗೆ, ನನಗೆ ಒಂದು ಸಮರ್ಪಕವಾದ form ಸಿಕ್ಕರೆ ನಾನೂ ನೇರವಾಗಿ ಆಧುನಿಕ ಜೀವನದ ಮೇಲೆ ನಾಟಕ ಬರೆದೇನು.... ಸದ್ಯ ನನಗೆ ಒಂದು ready-made ಕತೆಯಿದ್ದರೆ ಹೆಚ್ಚು ಖುಶಿ....

ಂ. ದೇ. : ಗಿರೀಶ, ನಮ್ಮ ದೇಶದಲ್ಲಿ ಭಾರತೀಯ ರಂಗಭೂಮಿ ಇದೆ ಯೆಂದು ನಿಮ್ಮ ಅಭಿಪ್ರಾಯವೇನು ? ಇದ್ದರೆ ಅದಕ್ಕೆ ಸಂಬಂಧಿಸಿದ ನಾಟಕಕಾರರಾರು ? ಇದ್ದರೆ, ನೀವಂತೂ ಅದರ ಒಬ್ಬ ಪ್ರಮುಖ ಘಟಕ ಅನ್ನೋದು ನನಗೆ ಗೊತ್ತು.

. ಕಾ. : ಭಾರತೀಯ ರಂಗಭೂಮಿ ಈಗ ಬಹು ರಭಸದಿಂದ ರೂಪುಗೊಳ್ಳುತ್ತಿದೆ ಅನ್ನುವ ಮಾತು ನಿಜ. ಒಂದು ಭಾಷೆಯ ಒಳ್ಳೆಯ ಕೃತಿ ಬೇರೆ ಬೇರೆ ಭಾಷೆಗಳಲ್ಲಿ ರೂಪಾಂತರವಾಗಿ ಪ್ರಯೋಗಿಸಲ್ಪಡುತ್ತಿರುವ ಎಷ್ಟೋ ಉದಾಹರಣೆ ನಮಗೆ ದೊರೆಯುತ್ತವೆ.... ಸತ್ಯದೇವ ದುಬೆ, ಬಿ. ವ್ಹಿ. ಕಾರಂತರಂಥ ನಿರ್ದೇಶಕರು ಈ ಕೆಲಸ ಅತ್ಯಂತ ಯಶಸ್ವಿಯಾಗಿ ಮಾಡುತ್ತಿದ್ದಾರೆ.... ಶ್ರೀರಂಗರ ಕೇಳು ಜನಮೇಜಯ,

ಬಾದಲ ಸರಕಾರರ ನಾಟಕಗಳು– ಏವಂ ಇಂದ್ರಜಿತ, ಬಾಕಿ ಇತಿಹಾಸ, ಪಗ್ಲಾ ಘೋಡಾ ಇತ್ಯಾದಿ— ವಿಜಯ ತೆಂಡೂಲಕರ, ಮೋಹನ ರಾಕೇಶ ಅವರ ನಾಟಕಗಳು ಭಾರತೀಯ ರಂಗಭೂಮಿಯ ಬೆಳವಣಿಗೆಗೆ ಕಾರಣವಾಗುತ್ತಿವೆ...

ಶಾಂ. ದೇ. : ನಿಮ್ಮ ನಾಟಕಗಳಲ್ಲಿ– ಯಯಾತಿ ಹಿಂದಿಯಲ್ಲಾಗಿದೆ, ಮರಾಠಿಯಲ್ಲಾಗಿದೆ, ತುಘಲಕ ಹಿಂದೀ, ಮರಾಠೀ, ಇಂಗ್ಲಿಷಗಳಲ್ಲಾಗಿದೆ. ಹಯವದನ ಹಿಂದಿಯಲ್ಲಾಗಲಿದೆ.

ಗಿ. ಕಾ. : ಈ ಅರ್ಥದಲ್ಲಿ 'ಭಾರತೀಯ ನಾಟಕಸೃಷ್ಟಿ' ಎಂದರೆ ಒಂದು ಭಾಷೆಯಿಂದ ಇನ್ನೊಂದಕ್ಕೆ ಭಾಷಾಂತರ ಹೊಂದಿ, ಸ್ವಾಗತ ಪಡೆದ ನಾಟಕಗಳು ಎಂದಿಷ್ಟೇ ಹೇಳಬಹುದು. ಇದಕ್ಕಿಂತ ಹೆಚ್ಚು ಅರ್ಥಪೂರ್ಣ ವ್ಯಾಖ್ಯೆ ಸಾಧ್ಯವಿಲ್ಲ— ಈಗಿನ ಮಟ್ಟಿಗಂತೂ.

ಶಾಂ. ದೇ. : ಆದರೆ ಹೀಗೆ ಭಾಷಾಂತರಗೊಳ್ಳಲು ಒಂದು ಕೃತಿ ಕೆಲವು ವಿಶಿಷ್ಟ ಗುಣಗಳನ್ನು ಪಡೆದಿರಬೇಕಾಗುತ್ತದೆ, ಅಲ್ಲವೇ ? ಕೆಲವು ಉತ್ಕೃಷ್ಟ ಕೃತಿಗಳು ಭಾಷೆ, ವಸ್ತು, ಪಾತ್ರಗಳಲ್ಲಿ ಅತ್ಯಂತ 'ಪ್ರಾದೇಶಿಕ' ವಾಗಿದ್ದಾಗ ಅವುಗಳ ಭಾಷಾಂತರವಾಗಲಿ, ಹಾಗೂ ಬೇರೆ ಪ್ರಾಂತಗಳಲ್ಲಿ ಅವುಗಳ ಪ್ರಯೋಗವಾಗಲಿ ಅಷ್ಟೊಂದು ಯಶಸ್ವಿಯಾಗಲಿಕ್ಕಿಲ್ಲ.... ನಿಮ್ಮ ಕೃತಿಗಳು ಮಾತ್ರ ಭಾರತೀಯ ರಂಗಭೂಮಿಯ ದೃಷ್ಟಿಯಿಂದ ಹೇಳಿಮಾಡಿಸಿದಂತಿವೆ....

ಗಿ. ಕಾ. : (ನಗು).

(ಧಾರವಾಡ ಆಕಾಶವಾಣಿಯಿಂದ ಪ್ರಸಾರಿತವಾದ ಇಂಗ್ಲಿಷ್ ಕಾರ್ಯಕ್ರಮದ ಮೇಲೆ ಆಧಾರಿತ. ಆಕಾಶವಾಣಿಯ ಅಧಿಕಾರಿಗಳಿಗೆ ಋಣಿ. —ಸಂ.)

ವೆಂಕಟಗಿರಿ ಕಡೇಕಾರ್

ಕಟ್ಟಿದ್ದನ್ನು ಉರುಳಿಸಬೇಡ

ನಾನು ಕಟ್ಟಿದ್ದನ್ನು ನೀನು ಉರುಳಿಸಬೇಡ.
ಈಗ್ಗೆ ಹನ್ನೆರಡು ವರ್ಷದಿಂದಲೂ ಕಟ್ಟುತ್ತಿದ್ದೇನೆ.
ಕಟ್ಟಿದ್ದನ್ನು ನೀನು ಉರುಳಿಸುತ್ತಲೇ ಇದ್ದಿಯಾ—
ನಿನಗೇಕೆ ಹಟ? ಹೇಳಿ ಬಿಡು ಒಂದು ಸಲವಾದರೂ.

ಸಮುದ್ರತೀರದ ಮಕ್ಕಳಾಟದ ಮರಳುಗೂಡು—
ಇದಲ್ಲ,
ಅಥವಾ
ಹಾಲು ಮಾರುವಾಕೆಯ ಗಾಳಿಗೋಪುರವೂ ಅಲ್ಲ.
ಇದು ನನ್ನ ಆತ್ಮವಿಶ್ವಾಸದ ಹೊಳಪಿನಲ್ಲಿ
ರೂಪುಗೊಂಡಿದೆ, ಭದ್ರ ಬುನಾದಿಯಿಂದೆ,
ಅದರ ಮೇಲೆ ಕಟ್ಟಿದುದರಲ್ಲಿ ಲೋಪವಿಲ್ಲ—
ಬುನಾದಿಯ ಕಿತ್ತು ಕಟ್ಟಿದುದನ್ನು ಉರುಳಿಸಬೇಡ.

ಹೋಗು, ನಿನ್ನ ಎದೆಮೆಟ್ಟಿ ನಿಂತವರ ಇದಿರಿಗೆ—
ನಿನ್ನ ವಿಶ್ವಾಸಘಾತಕರ ಮುಂದೆ
ನಿಂತುಬಿಡು—
ನಿನ್ನದಿರಿಗೆ ಹಮ್ಮು ತೋರಿಸಿದವರನ್ನು ನಿಲ್ಲಿಸು—
ನಿನಗೇನು, ನೀನು ಮಾಡುವುದನ್ನೆಲ್ಲಾ ಮಾಡಿಬಿಡು—
ಅವರಿಗೆ. ಆದರೆ—
ನಾನು ಕಟ್ಟಿದ್ದನ್ನು ಮಾತ್ರ ಉರುಳಿಸಬೇಡ.

ನಾನು ಕೂಗಿದ್ದೇನೆ, ಬೊಬ್ಬೆ ಹಾಕಿದ್ದೇನೆ,
ಬಾಯಿ ಬಡಿದುಕೊಂಡು ಅ....ಅ....ಅ....ಅಂದಿದ್ದೇನೆ,
ನೀನು ಉರುಳಿಸುವುದನ್ನು ಬಿಟ್ಟಿದ್ದಿಯಾ ? ಹೇಳು,
ಇದು ಬಿನ್ನಹ ವಿನಂತಿ ಬೇಡಿಕೆ ಪ್ರಾರ್ಥನೆ
ಏನಾದರಿರಲಿ.
ಈಗ ನಾನು ಕಟ್ಟಿದ್ದೇನೆ, ಶ್ರಮಬಿಟ್ಟು ನೊಂದಿದ್ದೇನೆ,
ಇಷ್ಟೆಲ್ಲಾ ಮಾಡಿದ್ದು ಕೊನೆಗೆ ಹೇಳಿದ್ದು, ಎಲ್ಲವನ್ನೂ
ಬರೇ ಗಾಳಿಯಲ್ಲಿ ತೂರಿಬಿಟ್ಟು—
ಕಟ್ಟಿದ್ದನ್ನು ನೀನು ಉರುಳಿಸಬೇಡ.

ಡಿ. ಲಿಂಗಯ್ಯ

ಬ್ರಹ್ಮಚಾರಿ

ಬ್ರಹ್ಮಚಾರಿ ನಾನು ಅಪ್ಪಟ ಬ್ರಹ್ಮಚಾರಿ.
ತೆವಲು ಬಂದಾಗ ಗಲ್ಲಿ ಬಾಗಿಲು ತೆಗೆದು ಸ್ವಾಗತಿಸುವ ಕಂತಗಳು ನೂರಾರು
ನನಗೆ
ಯಾವ ಬೇಲಿ ಹಾರಲೂ ಹಕ್ಕುಂಟು
ಕಟ್ಟಿಲ್ಲ ಹಗ್ಗ ಮೂಗುದಾರ
ಸಿಗ್ಗಿಲ್ಲ
ಎಷ್ಟೆಂದರೂ ನಾನು ಬ್ರಹ್ಮಚಾರಿ.

ಕುಟುಂಬ ಯೋಜನೆಗೆ ನನ್ನ ಸೇವೆ ಅಪಾರ
ಬಿರುದು ಬಾವಲಿಗೆ ನಾನು ವಾರಸುದಾರ
ಬೇಕಾದರೆ ಪರೀಕ್ಷಿಸಲಿ
ನನಗಿಲ್ಲ ಸಂಸಾರ ಮಕ್ಕಳು ಮರಿ
ಐವತ್ತಾದರೂ
ಚಿಂತೆಯಿಲ್ಲ
ಹೇಗಿದ್ದರೂ ನಾನು ಬ್ರಹ್ಮಚಾರಿ.

ಕಾಲೇಜು ಹುಡುಗಿಯರ ಸೊಂಟ ಸುತ್ತಿಲ್ಲ
ಎಂದಲ್ಲ, ಕಣ್ಣಿನಲಿ
ಯಾರು ಮಾಡಿಲ್ಲ ಹೇಳಿ ?
ಖಯಾಲಿಗೆ ಕತ್ತಲಲಿ ಕಂಡವರ ಕೆನ್ನೆ ಕಚ್ಚಿದರೆ
ದೊಡ್ಡ ಅಪರಾಧವೆ ?
ಕ್ಯಾಬರೆ ನೃತ್ಯ ಕಂಡು
ತೊಡೆ ಉಜ್ಜಿಕೊಂಡರೆ
ಪಕ್ಕದವರಿಗೇಕೆ ಕಣ್ಣು ಮೂಗು ಕೆರೆತ ?

ಹದಿನಾರು ಸಾವಿರ ವಿಸ್ಕಿಬಾಟಲುಗಳೊಡನಾಡಿದವನಲ್ಲ
ಮುಂದಿಯಪ್ಪನ ತೀಟೆಗೆ ಪ್ರತಿಜ್ಞೆ ಮಾಡಿದವನಲ್ಲ
ಪ್ರಸ್ತಕ್ಕೆ ಹೆದರಿ ಬೇವಿನಮರವೇರಿದವನಲ್ಲ
ಮೂತಿ ಸೊಟ್ಟಾದ್ದಕ್ಕೆ ಕಾಚಕಟ್ಟಿದವನಲ್ಲ
'ಉಂಡುಂಪವಾಸಿ ಬಳಸಿ ಬ್ರಹ್ಮಚಾರಿ'ಯಲ್ಲ
ನಾ ಬೇರೆ
ಕಟ್ಟರೆ ಬ್ರಹ್ಮಚಾರಿ.

ಸಂಸಾರಿಗಳು ಹೆದರುವ ಕಾರಣವಿಲ್ಲ.

ಮಹಿಳಾಸಮಾಜದಲ್ಲಿ ಭಾಷಣಮಾಡಿದ್ದೇನೆ
ವಿದ್ಯಾರ್ಥಿನಿ ನಿಲಯಕ್ಕೆ ವಾರ್ಡನ್ ಆಗಿದ್ದೇನೆ
ಹೆರಿಗೆ ಆಸ್ಪತ್ರೆಗೆ ಹಣಗಾಡಿದ್ದೇನೆ
ಕಾರ್ಪೊರೇಷನ್ ಡಬ್ಬಿಯಲ್ಲಿ ಬಿದ್ದಿದ್ದ ಮಗುವ ತುಂಬಿ
ಮಂತ್ರಿಗಳಿಗೆ ಕೋರಿದ್ದೇನೆ
ಅಪ್ಪವ್ವ ಗೊತ್ತಿಲ್ಲದಬ್ಬೆಪಾರಿಗಳನು
ಓಟಿನ ಲೆಕ್ಕಕ್ಕೆ ಸೇರಿಸಿದ್ದೇನೆ
ಜನಸೇವೆಯ ಹೆಸರಿನಲಿ ತಲೆಕೆಡಿಸಿಕೊಂಡಿದ್ದೇನೆ.

ಊರೊಟ್ಟಿನ ಬಾವಿಯಲಿ ನೀರು ಸೇದುವವರು
ಕೆಕ್ಕರಿಸಿ ನೋಡುವುದು ಧರ್ಮವಲ್ಲ.

ಬ್ರಹ್ಮಚಾರಿ ನಾನು ಅಪ್ಪಟ ಬ್ರಹ್ಮಚಾರಿ.

ಶಂಕರ ಮೊಕಾಶಿ ಪುಣೇಕರ

ಕನ್ನಡ ಕಾದಂಬರಿ: ೧೯೬೭-೭೦

ಅವಲೋಕನ

ಕಳೆದ ಮೂರು ವರ್ಷಗಳಲ್ಲಿ ಸುಮಾರು ಎಂಬತ್ತರಷ್ಟು ಕಾದಂಬರಿಗಳು ಕನ್ನಡದಲ್ಲಿ ಪ್ರಕಟವಾಗಿರಬಹುದು. ಅವೆಲ್ಲವುಗಳ ಖಾನೇಸುಮಾರಿಯನ್ನು ಇಡಲು ಒಂದು ಆಫೀಸೇ ಬೇಕಾದೀತು. ವೈಶಿಷ್ಟ್ಯಪೂರ್ಣವೂ ಸಾಹಿತ್ಯಿಕ ಗುಣಗಳುಳ್ಳವೂ ಆದ ಕಾದಂಬರಿಗಳು ಸುಮಾರು ೨೫ರಷ್ಟಾಗಬಹುದು. ಪ್ರಾಯೋಗಿಕ ಬೆಲೆಯುಳ್ಳ ಕಾದಂಬರಿಗಳು ಸುಮಾರು ಎಂಟು ಆಗಬಹುದು. ಕಾದಂಬರೀ ಮಾರುಕಟ್ಟೆಯ ಬಗ್ಗೆ ಒಂದು ಮಾತು ಹೇಳಿ ನಂತರ ಪ್ರಾಯೋಗಿಕ ಕಾದಂಬರಿಗಳ ಬಗ್ಗೆ ಕೆಲವು ವಿಷಯಗಳನ್ನು ಸೂಚಿಸಿ ನಂತರ ಸಿಂಹಾವಲೋಕನದ ಕೆಲಸ ಕೈಕೊಳ್ಳುತ್ತೇನೆ.

ಕಳೆದ ಐದಾರು ವರ್ಷಗಳಲ್ಲಿ ಕಾದಂಬರಿಯ ಮಾರುಕಟ್ಟೆ ಮೂರು ರೀತಿಯಿಂದ ಮುಪ್ಪುರಿಗೊಂಡಿದೆ. ದಿನಪತ್ರಿಕೆ-ವಾರಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಒಮ್ಮೆ; ಇದರಿಂದ ಉಂಟಾದ ಪರಿಚಯದ ಹಿನ್ನೆಲೆಯಲ್ಲಿ ಬಲು ಬೇಗನೆ ಪುಸ್ತಕವಾಗಿ ಅಚ್ಚಾಗುವಾಗ ಒಮ್ಮೆ; ನಂತರ ಪುಸ್ತಕವಾಗುತ್ತಿರುವಾಗಲೆ ಇದು ಸಿನೇಮಾಯೋಗ್ಯ ಹೌದೋ ಅಲ್ಲವೊ ಎಂಬ ವಿಷಯಕ್ಕೆ ಚರ್ಚೆ ಸುರುವಾಗಿ, ಸಿನೇಮಾ ಆಗಿ ಅಥವಾ ಆಗದಿದ್ದರೂ ಆಗಲಿದೆಯೆಂಬ ಕೀರ್ತಿಯನ್ನು ಪಡೆದು ಪುನರ್ಮುದ್ರಣಾದಿ ಸಂಸ್ಕಾರಗಳಿಗೆ ಒಳಗಾಗುವ ಇನ್ನೊಂದು ಮಾರುಕಟ್ಟೆ. ಕಳೆದ ಮೂರು ವರ್ಷಗಳಲ್ಲಿ "ಕನ್ನಡ ಪುಸ್ತಕಗಳನ್ನು ಕೊಂಡು ಓದಿರಿ" ಎಂಬ ಚಳುವಳಿ ಬೆಂಗಳೂರಿನಲ್ಲಿ ಪ್ರಾರಂಭವಾಗಿ, ಮನೆಮನೆಯ ವರೆಗೆ ಪುಸ್ತಕಗಳನ್ನೊಯ್ದು, ಭಿಡೆ-ಒತ್ತಾಯ-ಮುರುವತ್ತುಗಳ ಜೊತೆಗೆ ಮಾಡಿದ ಪ್ರಚಾರದ ಲಾಭವಾದರೂ ಮುಖ್ಯತಃ ಕಾದಂಬರಿಗಳಿಗೇ ಮುಟ್ಟಿದಂತಿದೆ. ಸದ್ಯಕ್ಕೆ ಈ ಕೊನೆಯ ಮನೆ-ಮನೆ ಮಾರುಕಟ್ಟೆಯನ್ನು ಮರೆತರೂ ಕೂಡ, ಮೊದಲಿನ ಮೂರು ಮಾರುಕಟ್ಟೆಗಳ ಪ್ರಭಾವ ಕಾದಂಬರೀ

ಪ್ರಪಂಚದ ಮೇಲೆ ಹೆಚ್ಚಾಗಿ ತೋರುತ್ತಿದ್ದದ್ದನ್ನು ನಾವು ನೋಡಬಹುದು. ಮಾರುಕಟ್ಟೆಯ ಪ್ರಭಾವವು Feed-back ರೀತಿಯಿಂದ ಕಾದಂಬರೀ ರಚನೆಯ ಮೇಲೆಯೂ ಪ್ರಭಾವ ಬೀರುತ್ತಿದ್ದುದನ್ನು ನಾವು ನೋಡಬೇಕಾಗಿದೆ. ಉದಾಹರಣೆಗಾಗಿ.

ಧಾರಾವಾಹಿತ್ವದ ಪ್ರಭಾವ: ಕಾದಂಬರಿಗಳು ಶೈಲಿಯಲ್ಲಿ ಸರಳವಾಗಬೇಕಾಗಿದೆ. ಪ್ಯಾರಾಗಳು ಸಣ್ಣವಾಗಬೇಕಾಗಿವೆ, ಸಂಭಾಷಣೆ ಹೆಚ್ಚಾಗುತ್ತಿದೆ. ಆದರೆ ಕೆಲವರನ್ನು ಬಿಟ್ಟರೆ(ಉದಾ: ನಿರುಪಮಾ,ಭೈರಪ್ಪ) ಉಳಿದವರಲ್ಲಿ ಪ್ರಸಂಗರಚನೆಯ ಕಲೆ (episodic) ಇನ್ನೂ ಬಂದಿಲ್ಲ. ಇನ್ನೂ ಚರ್ಚೆಯ ಜಾಬಾಳವೇ ಹೆಚ್ಚಾಗಿದೆ. ದಿನಪತ್ರಿಕೆಗಳಿಂದ ಹೇರಳವಾಗಿ ಹಣಪಡೆಯುತ್ತಿದ್ದ ಧಾರಾವಾಹಿಕಾರರು ಅದಕ್ಕೆ ಪ್ರತಿಯಾಗಿ ತಮ್ಮ ಪ್ರಸಂಗರಚನೆಯ ಕಲೆಯನ್ನು ಬೆಳೆಸಿಕೊಳ್ಳಬೇಡವೆ ? ಇದರಂತೆ, ಧಾರಾವಾಹಿಗಾಗಿ ಕಾದಂಬರಿಯನ್ನು ಆರಿಸುವಾಗ, ತಮ್ಮ ಓದುಗರ ಕುತೂಹಲವನ್ನು ಕೆರಳಿಸಬಲ್ಲ ಪ್ರಸಂಗರಚನೆ ತಾವು ಆರಿಸಿದ ಕಾದಂಬರಿಗಳಲ್ಲಿ ಉಂಟೊ–ಇಲ್ಲವೊ ಎಂಬುದನ್ನು ಸಂಪಾದಕರು ವಿಚಾರ ಮಾಡಬೇಡವೆ ? ಈ ವಿಷಯದಲ್ಲಿ ಸಂಪಾದಕರು ಭಿಡೆ–ಮುರುವತ್ತಿಗೆ ಬೀಳದೆ, ಓದುಗರ ಬಗ್ಗೆ ತಮಗಿದ್ದ ಹೊಣೆಯನ್ನು ಚೆನ್ನಾಗಿ ನಿರ್ವಹಿಸಿದರೆ ಕನ್ನಡ ಕಾದಂಬರಿಗಳ ಒಪ್ಪಂದದ ಮಟ್ಟ ಚೆನ್ನಾಗಿ ಏರಬಲ್ಲದು. ಈ ಸುಸಂಧಿಯನ್ನು ಕಳೆಕೊಳ್ಳಬಾರದು. ಇಷ್ಟೇ ಅಲ್ಲ, ಇದರಲ್ಲಿ ದುರ್ಲಕ್ಷವಾದರೆ ಕಾದಂಬರಿ ಬರೆಯುವವರ ಹಾಗು ಓದುವವರ ಮಟ್ಟವೂ ದೊಡ್ಡಪ್ರಮಾಣದಲ್ಲಿ ಹೆಚ್ಚು ಕಡಿಮೆಯಾಗುವ ಸಂಭವವುಂಟು. "ಇದು ನಮಗೂ ಗೊತ್ತುಂಟು; ಆದರೆ ಒಳ್ಳೆ ಹಸ್ತಪ್ರತಿಗಳೇ ಬರುತ್ತಿಲ್ಲ." ಎಂದು ಸಂಪಾದಕರು ಗೊಣಗುತ್ತಿರಬಹುದು. ಆದರೆ ಕನಿಷ್ಟ ಪಕ್ಷಕ್ಕೆ, ಕಾದಂಬರಿಕಾರರ ಜೊತೆಗೆ ಮಾಡುವ ಪತ್ರವ್ಯವಹಾರದಲ್ಲಿಯಾದರೂ ಸಂಪಾದಕರು 'ನಮ್ಮ ಓದುಗರು ಪ್ರಸಂಗಗಳನ್ನು ಬೇಡುತ್ತಾರೆ. ನವ್ಯತೆ, ಚರ್ಚೆ, ಸೈಕಾಲಜಿ, ಎಕ್ಸಿಸ್ಟೆಂಶಿಯಲಿಸಂ, ಅಬಸರ್ಡಿಟಿ, ಇವುಗಳಿಗೆ ಬೇಸರಪಡುತ್ತಾರೆ. ನೀವು ನಿಮ್ಮ ನಿಮ್ಮ ಈ ಗುಣಗಳನ್ನು ಬೇಕಾದರೆ ತನ್ನಿರಿ. ಆದರೆ ಅವುಗಳು ಪ್ರಸಂಗರೂಪವಾಗಿ ಬರುವಂತೆಯಾದರೂ ಮಾಡಿ ನಮ್ಮನ್ನು ಬದುಕಿಸಿರಿ'; ಅಂತ ಉದ್ದಾಮ ಲೇಖಕರಿಗೆ ಬರೆದು ಧನ್ಯರಾಗಿ ಕನ್ನಡದ ಉದ್ಧಾರವನ್ನು ಮಾಡಬೇಕಾಗಿ ಸೂಚಿಸದಿರಲಾರೆ.

ಪುಸ್ತಕರೂಪದ ಪ್ರಕಟಣೆಯ ಪ್ರಭಾವ : ಧಾರಾವಾಹಿತ್ವಕ್ಕಾಗಿ ಚಂದ ಎಣಿಸಲೆಂದು ಒಂದು ವಾಕ್ಯಕ್ಕೆ ಒಂದು ಪ್ಯಾರಾ; ಕೇವಲ ಟಿಮ್ರಗಳ ಒಂದು ಪ್ಯಾರಾ : ಹೀಗೆ ಮುದ್ರಣ ಚಾಕಚಕ್ಯತೆ ಪುಸ್ತಕರೂಪದಲ್ಲಿ ಬೇಜಾರು ತರಿಸುವದು, ಇಷ್ಟೇ ಅಲ್ಲ ಓದುಗರಿಗೆ ಮೋಸವಾಗುವದು. ಧಾರಾವಾಹಿಯಲ್ಲಿ ಪೂರ್ಣವಿರಾಮಗಳೇ ಇಲ್ಲದ, ಕ್ರಿಯಾಪದಗಳೇ ಇಲ್ಲದ, ಶೈಲಿ ತೋರಿಕೆಗೆ ನವ್ಯವಾಗಬಹುದು. ಪೂರ್ಣಗ್ರಂಥದಲ್ಲಿ ಇವೆಲ್ಲ ಉಪಾಯಗಳು ಓದುಗನ ಕೆಲಸವನ್ನು ವಿನಾಕಾರಣ ಕಠಿಣಗೊಳ್ಳಿಸುವವು.

ಸಿನೇಮಾದ ಆಸೆಯ ಪ್ರಭಾವ : ಆಂತರಿಕ ತಾಕಲಾಟದ ಸ್ವಗತಸಂಭಾಷಣೆ ಇತ್ತಿತ್ತ ಕಾದಂಬರಿಗಳಲ್ಲಿ ಹೆಚ್ಚಾಗುತ್ತಿದ್ದದ್ದು ಸಿನೇಮಾನಿರ್ಮಾತೃವಿನತ್ತ ಒಕ್ಕಣ್ಣು ತಿರುವಿದ ಮೂಲಕವೆಂದು ಹೇಳಬಹುದು. ಇದರಂತೆ ಕನಸುಗಳ ವರ್ಣನೆ, ತಳಮಾಸದಿಂದ ಕೇಳಬರುವ ಚೀತ್ಕಾರ, ಇತ್ಯಾದಿಗಳೂ ಇದರದೇ ಪರಿಣಾಮ. ಇವು ಕಾದಂಬರಿಗಳ ಏಕಸೂತ್ರತೆಗೆ ಅಡ್ಡ ಬಾರದಂತೆ ನೋಡಿಕೊಳ್ಳುವದು ಲೇಖಕನಿಗೇ ಸೇರಿದ ಮಾತು.

ಈ ಮೂರು ಮಾರುಕಟ್ಟೆಗಳನ್ನು ಲೆಕ್ಕಿಸದೆ ಕೇವಲ ಕಾದಂಬರಿಯ ಕಲೆಯ ಆವಿಷ್ಕಾರಕ್ಕಾಗಿಯೇ ಬರೆಯಲ್ಪಟ್ಟ ಕಾದಂಬರಿಗಳೂ ಸಾಕಷ್ಟು ಬಂದಿವೆ. ಆದರೆ ಈ ಕಲಾನಿಷ್ಠೆಯೊಂದೇ ಕಲೆಯ ಬೆನ್ನೆಲುಬಾಗಲಾರದೆಂಬುದನ್ನೂ ನಾವು ತಿಳಿದಿರಬೇಕು.

ಕಳೆದ ಮೂರು ವರ್ಷಗಳಲ್ಲಿ ಬಂದ ಪ್ರಾಯೋಗಿಕ ಕಾದಂಬರಿಗಳ ಬಗ್ಗೆ ಒಂದು ಸಾಮಾನ್ಯ ಮಾತು. ಈ ಸಮಯದಲ್ಲಿ ಹೊಸ ಹೊಸ ಪ್ರಯೋಗಗಳು ಕನ್ನಡದಲ್ಲಿ ಬಂದಿವೆ, ಇಷ್ಟೇ ಅಲ್ಲ, ಈ ಪ್ರಯೋಗಗಳು ನವ್ಯತೆಯ ಮುದ್ರೆಯನ್ನು ಒತ್ತಿಕೊಳ್ಳದೆ, ಸೈಕಾಲಾಜಿ–ಎಕ್ಸಿಸ್ಟೆಂಶಿಯಲಿಝಂಗಳಿಲ್ಲದೆ, ಮುನ್ನುಡಿಗಳ ಪೌರೋಹಿತ್ಯವಿಲ್ಲದೆ, ಪ್ರಾಯೋಗಿಕವಾಗಿವೆಯೆಂಬುದು ಸಮಾಧಾನಕಾರಕ ವಿಷಯವಾಗಿದೆ. ಒಂದು ಕಾಲಕ್ಕೆ ಪೂಚಂತೇಯವರ 'ಸ್ವರೂಪ', ಶೌರಿಯವರ 'ಹಳದಿ ಮೀನು', ಲಂಕೇಶರ 'ಬಿರುಕು' ಇಂಥ ಕಾದಂಬರಿಗಳು ಹುಟ್ಟಿಸಿದ ಅತಿ ವ್ಯಕ್ತಿನಿಷ್ಠ ಪ್ರೈವೇಟ ಪ್ರಪಂಚದ ಕನಸುಗಾರಿಕೆಯ ರೋಮ್ಯಾಂಟಿಸಿಝಂದಲ್ಲಿ ಕನ್ನಡ ಪ್ರಯೋಗಶೀಲತೆ ಎಲ್ಲಿ ಸಿಕ್ಕಿ ಬೀಳುವದೋ

ಎಂಬ ಭೀತಿ, ಉಂಟಾಗಿತ್ತು. ಆದರೆ ಕಳೆದ ೩ ವರ್ಷಗಳಲ್ಲಿ ಕನ್ನಡ ಕಾದಂಬರಿಯು ನೈಜ ಜೀವನನಿಷ್ಠ ಪ್ರಯೋಗಶೀಲತೆ ಚೇತರಿಸಿಕೊಂಡಿದ್ದು ಸ್ಪಷ್ಟವಾಗಿ ಕಂಡುಬರುತ್ತದೆ. ಕಳೆದ ಮೂರುವರ್ಷಗಳ ಶ್ರೇಷ್ಠ ಪ್ರಯೋಗ ಶೀಲತೆಯ ಉದಾಹರಣೆಗಳಾವವು? ಕೆ. ವಿ ಪುಟ್ಟಪ್ಪನವರ 'ಮಲೆಗಳಲ್ಲಿ ಮದುಮಗಳು'; ಶೇಷನಾರಾಯಣರ 'ಎರಡು ಉಂಗುರ'; ಎಸ್. ಎಲ್. ಭೈರಪ್ಪನವರ 'ನಾಯಿನೆರಳು'; ಒಂದು ರೀತಿಯಿಂದ ಕಾರಂತರ 'ಮೂಕಜ್ಜಿಯ ಕನಸುಗಳು', ಶ್ರೀರಂಗರ 'ವಿಷಚಕ್ರವ್ಯೂಹ' ಈ ಕಾದಂಬರಿಗಳಲ್ಲಿರುವ ನೈಜ ಜೀವನನಿಷ್ಠ ಪ್ರಯೋಗಶೀಲತೆಗೂ, 'ಸ್ವರೂಪ', 'ಹಳದಿ ಮೀನು', 'ಬಿರುಕು' ಕಾದಂಬರಿಗಳ ವ್ಯಕ್ತಿನಿಷ್ಠ ಸ್ವಪ್ನಶೀಲ ಪ್ರೈವೇಟ್ ರೋಮ್ಯಾಂಟಿಕ್ ಪ್ರಯೋಗಶೀಲತೆಗೂ ಬಹಳ ಅಂತರವಿದೆ. ಇಷ್ಟೇ ಏಕೆ, ಇವು ಎರಡು ವಿರುದ್ಧ ದಿಕ್ಕಿನಲ್ಲಿ ಸಂಚರಿಸುವ ಬಾಣಗಳೆಂದು ಹೇಳಬೇಕು ಒಂದು ಬಾಣ ಪರಿಮಿತ ವ್ಯಕ್ತಿನಿಷ್ಠೆಯತ್ತ ಸೆಳೆದೊಯ್ಯುವದಾದರೆ ಇನ್ನೊಂದು ಬಾಣ ಅಪರಿಮಿತ ಜೀವನನಿಷ್ಠೆ, ಆರೋಗ್ಯ, ಬೆಳಕು, ಸತ್ಯಗಳತ್ತ ನಮ್ಮನ್ನು ಸೆಳೆದೊಯ್ಯುತ್ತದೆ.

ಕನ್ನಡದಲ್ಲಿ ನವೋದಯದ ಪ್ರಥಮ ದಿವಸದಿಂದಲೂ ಎರಡನೆಯ ರೀತಿಯ ಪ್ರಯೋಗಪರತೆ ಕಂಡುಬರುತ್ತದೆ. ಈ ೩ ವರ್ಷಗಳ ಅವಧಿಯಲ್ಲಿ ಕನ್ನಡ ಸೃಜನಶೀಲತೆ ತನ್ನ ಮೂಲ ಸ್ರೋತಸ್ಸಿನತ್ತ ಕೈಚಾಚಿ ಪರಿಶುದ್ಧ ಜೀವನದ ಸೆಲೆಯಿಂದ ತನ್ನ ನೈಜತೆಯನ್ನು ಸಾಧಿಸಿದುದು ನನ್ನಂಥ ಸಂಪ್ರದಾಯವಾದಿಗೆ ವಿಶೇಷ ಸಂತೋಷವನ್ನುಂಟುಮಾಡುವದು ಸಹಜ. ಪುಟ್ಟಪ್ಪನವರ ಮೂಲಸ್ಫೂರ್ತಿ ಮಲೆನಾಡಿನ ಜೀವನ. 'ಮಲೆನಾಡಿನ ಚಿತ್ರಗಳು' 'ಕಾನೂರು ಸುಬ್ಬಮ್ಮ ಹೆಗ್ಗಡತಿ'ಗಳ ಮೂಲ ಸೆಲೆಯಿಂದಲೇ ನೈಜಶಕ್ತಿಪಡೆದು ಹೊಸ ದರ್ಶನವೊಂದರ ಸಾಧನೆಗಾಗಿ ಹೊಸತಂತ್ರವನ್ನೂ ಮೈಗೊಂಡೇ ಪ್ರಯೋಗಪರವಾದ ಕಾದಂಬರಿ 'ಮಲೆಗಳಲ್ಲಿ ಮದುಮಗಳು'. ವಿಶೇಷ ಉಲ್ಲೇಖಕ್ಕೆ ಪಾತ್ರವಾಗುವ ಪ್ರಯೋಗವೆಂದರೆ ಶೇಷನಾರಾಯಣರ 'ಎರಡು ಉಂಗುರ.' ಈ ಕಾದಂಬರಿ 'ಲಕ್ಷ್ಮಣರಾಯನ ಭಾಗ್ಯ'ದಲ್ಲಿ ಸಣ್ಣ ಬುಗ್ಗೆಯಾಗಿ ಪ್ರಕಟಗೊಂಡು, ಇಂದಿರಾತನಯರ (ದುರ್ದೈವದಿಂದ ದುರ್ಲಕ್ಷಕ್ಕೀ

ಡಾದ) ಕಾದಂಬರಿಗಳಲ್ಲಿ ಮುಂಪ್ಪುರಿಗೊಂಡು ಹರಿದು ಅಲ್ಲಿಯೇ ಬತ್ತಿ ಹೋಯಿತೇನೋ ಎನ್ನಿಸುವ ಒಂದು ರೀತಿಯ ಪ್ರಯೋಗಶೀಲತೆಯ ಸಾಂಪ್ರದಾಯವನ್ನು ಒಮ್ಮೆಲೆ ಮತ್ತೆ ಜಾಗ್ರತಗೊಳಿಸಿದೆ: ಜನತೆಯ (ಅಂಧ) ಶ್ರದ್ಧೆಗಳೂ ಒಂದು ಬಗೆಯ ಆಂತರಿಕತೆಯ ಪ್ರಮಾಣಗಳು. ಈ ಪ್ರಮಾಣಗಳನ್ನು ಉಪಯೋಗಿಸುವ ಕೆಲಸ ಸುಲಭವಲ್ಲ. ಏಕೆಂದರೆ ಒಮ್ಮೊಮ್ಮೆ ಇವೇ ಲೇಖಕನ ತಲೆಯನ್ನು ವ್ಯಾಪಿಸಿಕೊಂಡು ಆವನ ಕಲಾವಿವೇಕವನ್ನೇ ಅಳಿಸಿಬಿಡುವವು. ಕಾದಂಬರಿ ಇಂಥ ಪ್ರಮಾಣಗಳನ್ನು ಉಪಯೋಗಿಸಿಕೊಂಡಮಾತ್ರಕ್ಕೆ ಒಂದು ದೊಡ್ಡ ಪ್ರಯೋಗವೆಂದು ಹೇಳಲಾಗದು. ಇಂದಿರಾತನಯರ ಕಾದಂಬರಿಗಳು ಸಾಕಷ್ಟು ಮಟ್ಟಿಗೆ ಸಫಲವೂ ಆಗಿದ್ದವಾದರೂ ಕೂಡ, ಅವುಗಳಲ್ಲಿ ಬರುವ ಶ್ರದ್ಧೆ–ಮಾಟ–ಮಾಯಗಾರಿಕೆಗಳು ಯಾವ ಮಾನಸಿಕ ಸತ್ಯದ ಪ್ರಮಾಣವೆಂದೂ ಬಾರಲಿಲ್ಲವಾದ್ದರಿಂದ ಅವುಗಳ ಸಾಂಕೇತಿಕ ಬೆಲೆ ತುಸು ಕಡಿಮೆಯಾಯಿತು. ಶೇಷನಾರಾಯಣರೇ ಬರೆದ 'ಪದ್ಮರಂಗು' ಕಾದಂಬರಿ ಅತಿ ಭಾವನಾಶೀಲತೆಯ ಮೂಲಕ, ಹಾವು–ಮನುಷ್ಯರ ವಿರೋಧವನ್ನು ತೋರಿಸಿತೇ ಹೊರತು ಅವರ ಸ್ನೇಹಕ್ಕೆ ವಿರೋಧ ಬಗೆಯಿತು. ಹೀಗಾಗಿ ತನ್ನ ಅರ್ಥಪೂರ್ಣತೆಯನ್ನು ಕಳಕೊಂಡಿತು. ಆದರೆ 'ಎರಡು ಉಂಗುರ'ದಲ್ಲಿ ಬರುವ 'ರಸಸಿದ್ಧಿ' (Alchemy) ಯ ವಿಷಯವನ್ನು ಮಾತ್ರ ಶೇಷನಾರಾಯಣರು ಮಾನವೀಯ ಆಸೆಯ ಸಾಂಕೇತಿಕ ಚಿತ್ರಣವನ್ನಾಗಿ ಮಾಡಿ, ಒಂದೆಡೆಗೆ ವಿವರಗಳ ನೈಜತೆಯಿಂದ ಜೀವನಕ್ಕೂ ಪ್ರಾಮಾಣಿಕರಾಗಿದ್ದಾರೆ; ಇನ್ನೊಂದೆಡೆಗೆ ಅದಕ್ಕಾಗಿ ಹಾತೊರೆಯುವ ವ್ಯಕ್ತಿಯೋರ್ವನ ಚೆಂದವಾದ ಬಾಳು ಆಸೆಗಳ ನೂರೆಂಟು ಪೆಟ್ಟುಗಳಿಂದ ವ್ಯಥೆಗೊಂಡು ಅಧೋಗತಿಗಿಳಿದ ಮಾನಸಿಕ ಅವನತಿಯ ಆಂತರಿಕ ಚಿತ್ರಣವನ್ನೂ ಮಾಡಿದ್ದಾರೆ. ಇಂಥ ಒಂದು ಸಾಂಪ್ರದಾಯಿಕ ಪ್ರಯೋಗವು ಈ ಸಂದರ್ಭದಲ್ಲಿ ವ್ಯಕ್ತಿನಿಷ್ಠತೆಯತ್ತ ಸಾಗಿದ ಕನ್ನಡ ಕಾದಂಬರಿಯ ಪ್ರವಾಹವನ್ನು ಮತ್ತೆ ತನ್ನ ವ್ಯಕ್ತ್ಯಾತೀತ ನೈಜತೆಯತ್ತ ಎಳೆಯಬಲ್ಲುದೆಂದು ನನಗೆ ವಿಶ್ವಾಸವೆನಿಸುತ್ತದೆ.

ಭೈರಪ್ಪನವರ 'ನಾಯಿ ನೆರಳು' ಕಾದಂಬರಿಯ ಪ್ರಾಯೋಗಿಕ ಮಹತ್ತ್ವ ಅದರ ಯಶಸ್ಸಿನ ಮೇಲೊಂದೇ ಅವಲಂಬಿಸಿಲ್ಲ. ಅದರ ಹಂದರವೇ

ಪ್ರಾಯೋಗಿಕವಾಗಿದೆ. ಮೂರು ಜನ್ಮಗಳ ಸುಪ್ತವಾಸನೆಗಳು ಜೀವನದಲ್ಲಿ ಜಾಗ್ರತವಾಗಿದ್ದುಕೊಂಡು ಜೀವನವನ್ನು ರೂಪಿಸಿದ ಸೂಕ್ಷ್ಮ ಚಿತ್ರಣವಿದು.

ಇನ್ನೊಂದು ಅರ್ಥದಲ್ಲಿ (ಓದುಗರ ಸಂಸ್ಕಾರಗಳನ್ನು ಲಕ್ಷದಲ್ಲಿ ತಂದು ಕೊಂಡರೆ) ಭೈರಪ್ಪನವರ ಕಾದಂಬರಿಗೆ ಈಗಾಗಲೆ ದೇವುಡುರ ಆಧಿದೈವಿಕ ಕಾದಂಬರಿಗಳ ಬೆಂಬಲವಿದೆ ದೇವುಡು ಮನುಷ್ಯಜೀವನದ ಮಾನಸಿಕ ವಾಸನೆ ಗಳ ಆಟವನ್ನು ಋಷಿಲೋಕ, ಪಿತೃಲೋಕ, ದೇವಲೋಕಗಳ ವರೆಗೆ ಒಯ್ದು, ಭಾರತೀಯ ಜೀವನದ ಇನ್ನೊಂದು ಮೂಲ ನೆಲೆಗೆ ಕನೆಕ್ಶನ್ ಕೊಟ್ಟರು. ಭೈರಪ್ಪನವರ ಪ್ರಯೋಗಕ್ಕೆ ಓದುಗರ ಮನಸ್ಸಿನಲ್ಲಿ ನೆಲೆಯೇನಾದರೂ ಉಂಟೆ, ಎಂದು ಕೇಳಿದರೆ, ನಾವು ಮಾಸ್ತಿಯವರ 'ಇಂದಿರೆಯೋ ಅಲ್ಲವೊ ?' ಎಂಬ ಕತೆಯನ್ನೂ, ದೇವುಡುರ ಕಾದಂಬರಿಗಳನ್ನೂ ಉದಾಹರಿಸಬಹುದು.

ಇನ್ನುಳಿದ ಎರಡು ಪ್ರಾಯೋಗಿಕ ಕಾದಂಬರಿಗಳಾದ ಕಾರಂತರ 'ಮೂಕಜ್ಜಿಯ ಕನಸುಗಳು' ಹಾಗು ಶ್ರೀರಂಗರ 'ವಿಷಚಕ್ರವ್ಯೂಹ'ದ ಬಗ್ಗೆ ಹೆಚ್ಚಿಗೆ ಹೇಳುವ ಕಾರಣವಿಲ್ಲ. ಇವರೀರ್ವರೂ ಜಾತ್ಯಾ ಪ್ರಯೋಗಶೀಲರು. ಈ ಕಾದಂಬರಿಗಳಲ್ಲಿ ಅವರು ಮಾಡಿದ ಪ್ರಯೋಗಗಳಿಗೆ ಅವರೇ ಹಬ್ಬಿಸಿಕೊಂಡ 'ನರಸಮ್ಮನ ಸಮಾಧಿ', 'ಅನಾದಿ' ಮುಂತಾದ ಕಾದಂಬರಿಗಳ ಬೆನ್ನೆಲವು ಇದೆ.

ಈ ಚರ್ಚೆಯ ಮೇಲಿಂದ ಹೇಳುವದಾದರೆ, ಕಳೆದ ಮೂರು ವರ್ಷಗಳಲ್ಲಿ ಕನ್ನಡ ಕಾದಂಬರಿಗಳ ಪ್ರಯೋಗಶೀಲತೆ ನೈಜತೆಯತ್ತ ಹೊರಳಿದೆ. ಅದು ಭಾರತೀಯ ಜೀವನದ ಸಾಮುಗ್ರಿಗಳನ್ನೆ ತನ್ನ ಪ್ರಯೋಗಕ್ಕೆ ಬಳಸಿಕೊಂಡಿದೆ. ಬಿರುಕುಬಿಟ್ಟ ಮನಸ್ಸು ಎಕ್ಸಿಸ್ಟೆಂಶಿಯಲಿಸ್ಟ ಪರಕೀಯತನ, ಜೀವನದತ್ತ ಬೆನ್ನು ತಿರುವಿದ ವ್ಯಕ್ತಿನಿಷ್ಠತೆ, ಕಂಪಲ್ಸಿವ್ ಒಬ್‌ಸೆಸಶನ್, ಮುಂತಾದ ಎರವಲು ತಂದ ವ್ಯಕ್ತಿನಿಷ್ಠ ಏಕಾಕಿ ವಸ್ತುವನ್ನು ಹಳತು ಮಾಡಿದೆ. ನಮ್ಮ ಜೀವನ ಸಾಮುಗ್ರಿಗಳನ್ನೇ ತಕ್ಕೊಂಡು ಬೇಕಾದಷ್ಟು ಸೂಕ್ಷ್ಮ ಸಂವೇದನಗಳನ್ನು ಹುಟ್ಟಿಸಿ ತೋರಿಸಿದೆ. ಇಷ್ಟೇ ಅಲ್ಲ, ಮೂಲ ಭಾರತೀಯ ಜೀವನ ಪ್ರಾಮಾಣಿಕವಾಗಿದೆ. ಅಲ್ಲದೆ ಕನ್ನಡದಲ್ಲಿ ಈಗಾಗಲೆ ಆದ ಪ್ರಯೋಗಗಳು ಹುಟ್ಟಿಸಿದ ಸೂಕ್ಷ್ಮ ಸಂವೇದಗಳ ಸ್ರೋತಸ್ಸಿಗೆ ತನ್ನನ್ನು ಜೋಡಿಸಿಕೊಂಡು ಸಮೃದ್ಧವಾಗಿದೆ. ಇಂತು

ಹೊಸತನ, ಕನ್ನಡದಲ್ಲಿಯೇ ಇದ್ದ ಹೊಸತನದ ಜೊತೆಗೆ ಕಸಿ, ಹಾಗು ಜೀವನ ನಿಷ್ಠತೆ, ಈ ಲಕ್ಷಣಗಳನ್ನೊಳಗೊಂಡಿವೆ. ಇಂತು ಕನ್ನಡದ ಪ್ರಾಯೋಗಿಕತೆ Self-sepleashing ಆಗುವ ಸಂಭವ ಹೆಚ್ಚಾಗಿದೆ. ಈ ಮೊದಲಿನ ನಮ್ರತೆಯು ಹರುಕು-ಮುರುಕು-ಕೊರಕುಗಳು ಕಡಿಮೆಯಾಗಿವೆ. ಏಕಾಕಿ, ಆತ್ಮಸಂತೋಷಿ, ಸ್ವಸಂವೇದಿ (Self-conscious) ಕಲೆ ಹಿಮ್ಮೆಟ್ಟಿದ್ದು ಆರೋಗ್ಯದ ಲಕ್ಷಣ. ಆದರೆ ಇಷ್ಟರಿಂದ ಸಮಾಧಾನಪಟ್ಟು ಉಪಯೋಗವಿಲ್ಲ ಮೋಟು ಮರಕ್ಕೆ ಎರವಲು ಎಲೆ, ಹೂ, ಕಾಯಿಗಳನ್ನು ಕಟ್ಟುವದು ಅನಾವಶ್ಯಕ ಎಂಬುದನ್ನು ನಮ್ಮರಿಗೆ ಮನಗಾಣಿಸಬೇಕಾದರೆ ಇಂಥ ಬೇರುಳ್ಳ ಲೇಖಕರು ಇನ್ನೂ ಹೆಚ್ಚು ಪ್ರಮಾಣದಿಂದ ಪ್ರಯೋಗಶೀಲ ಕೃತಿಗಳನ್ನು ರಚಿಸಿ ಕನ್ನಡದ್ದೆ ಆದ ವೈಶಿಷ್ಟ್ಯಪೂರ್ಣ ಪ್ರಯೋಗಶೀಲತೆಯಿದೆಯೆಂಬುದನ್ನು ಪ್ರಮಾಣಿಸಿ ತೋರಿಸಬೇಕು. ಇದರಿಂದ ಸಾಹಿತ್ಯಕ್ಕೂ ಜೀವನಕ್ಕೂ ಕೂಡಿಯೇ ಆರೋಗ್ಯ.

ಪ್ರಯೋಗಗಳೆಂದು ಹೇಳಲಾಗದಿದ್ದರೂ ಉತ್ತಮವಾದ ಅನೇಕ ಕೃತಿಗಳು ಈ ಸಮಯದಲ್ಲಿ ಪ್ರಕಟವಾದವು. ಬಸವರಾಜ ಕಟ್ಟೀಮನಿಯವರ 'ಐದನೆಯ ದೇಸಾಯಿಣಿ' ಹಳ್ಳಿಯ ಜೀವನದ ಸ್ವೋಪಜ್ಞ ಪರಿಚಯದಿಂದ ಹೊಮ್ಮಿದೆ. ಮನೆತನದ ಒಡಕು, ಚಿಕ್ಕ ವಿಷಯಗಳಲ್ಲಿ ಅಧಿಕಾರದಾಹ, ಸ್ಪರ್ಧೆ-ಮೂದಲಿಕೆ-ವೈಮನಸ್ಯಗಳ ಭೀಕರ ದೃಶ್ಯ ಈ ಕಾದಂಬರಿಯಲ್ಲಿ ಸಫಲವಾಗಿ ಚಿತ್ರಿತವಾಗಿದೆ. ಇದಲ್ಲದೆ ಕಟ್ಟೀಮನಿ ಧಾರಾವಾಹಿಯಾಗಿ ಪ್ರಕಟಿಸಿದ ಹಲವಾರು ಕಾದಂಬರಿಗಳು ಗ್ರಂಥರೂಪವಾಗಿ ಇದೇ ಸಮಯದಲ್ಲಿ ಪ್ರಕಟಗೊಂಡಿವೆ. ಉದಾ: ಗ್ರಾಮ ಸೇವಿಕಾ, ಪ್ರಪಾತ, ಸಂಗೊಳ್ಳಿ ರಾಯನಾಯಕ, ಇತ್ಯಾದಿ ಇವೆಲ್ಲ ಕಟ್ಟೀಮನಿಯವರ ನೈಜ ಜೀವನಸ್ಪರ್ಶವನ್ನು ಪಡೆದಿವೆ. ಇನ್ನೊಬ್ಬ ಹಿರಿಯ ಕಾದಂಬರಿಕಾರ ಕೃಷ್ಣಮೂರ್ತಿ ಪುರಾಣಿಕರು 'ಸನಾದಿಯ ಅಪ್ಪಣ್ಣ' ಹಾಗು 'ತಂಪು ನೆಳಲು' ಕಾದಂಬರಿಗಳನ್ನು ಪ್ರಕಟಿಸಿದರು. ಒಂದು ಕಲಾವಿದನ ಜೀವನವಾದರೆ ಇನ್ನೊಂದು ಶಾಲಾ ಶಿಕ್ಷಕನ ಜೀವನ. ಕೃಷ್ಣಮೂರ್ತಿಯವರ ಕನಸುಗಾರಿಕೆ, ಸಹಾನುಭೂತಿ, ಈ ಕಾದಂಬರಿಗಳಲ್ಲಿ ಚಂದವಾಗಿ ಮೂಡಿವೆ. ಸಾಧು ಜೀವನವನ್ನು ಚಿತ್ರಿಸುವಲ್ಲಿ ಕೃಷ್ಣಮೂರ್ತಿಯವರ ಕೈ ಪಳಗಿದೆ. ದುಷ್ಟ ಜೀವನದ ಹಿಡಿತ ಇನ್ನೂ ಬಂದಂತಿಲ್ಲ. ಇದೂ ಕಾದಂಬರಿಯ ಸಾಮಗ್ರಿ

ಗಳೊಂದು, ಇಷ್ಟೇ ಸೂಚಿಸಬಯಸುತ್ತೇನೆ. ಇದಲ್ಲದೆ ಹಿರಿಯ ಕಾದಂಬರಿಕಾರರಾದ ನಾಡಿಗೇರ ಕೃಷ್ಣರಾಯರ 'ಸವಿತಾ', ದಾಶರಥಿ ದೀಕ್ಷಿತರ 'ಪಕೋಡಪ್ರಿಯ' ಹಾಸ್ಯದಿಂದ ಮಿನುಗುತ್ತವೆ. ಬೀಚಿಯವರ 'ಸುಬ್ಬಿ' ಬೀಚಿಯವರ ಇತರ ಗ್ರಂಥಗಳಲ್ಲಿಲ್ಲದ ಸೃಜತೆಯನ್ನು ಪಡೆದಿದೆ. ಇದು ಕನ್ನಡದ ಪಿಕ್ಯಾರೆಸ್ಕ ಕಾದಂಬರಿಗಳಲ್ಲಿ ಒಂದು. ದಯಾನಂದ ತೋರ್ಕೆಯವರ 'ಸೆಳೆತ', 'ಗೆಜ್ಜೆನಾದ'ಗಳು ಪ್ರೇಮ ಬಂಧನದಲ್ಲಿ ಚತುಷ್ಕೋಣ ನಿರ್ಮಿಸಿವೆ. ಶ್ರೀನಿವಾಸ ಉಡುಪರ 'ಒಲಿದು ಬಂದವಳು', ಭೈರಪ್ಪನವರ 'ಜಲಪಾತ' ಗಳಲ್ಲಿ ಪ್ರಣಯ ತ್ರಿಕೋನದ ಜೊತೆಗೆ ಯಾಂತ್ರಿಕ ಜೀವನದ ಹೊಸ ಹೊಸ ಸಾಮಾಜಿಕ ಸಮಸ್ಯೆಗಳು ಸಾಂಕೇತಿಕವಾಗಿ ಚಿತ್ರಿಸಲ್ಪಟ್ಟಿವೆ. ಜಯತೀರ್ಥ ರಾಜಪುರೋಹಿತರ 'ಹಾಲು ಜೇನು' ಗುಲಬುರ್ಗಾದ ಹಿನ್ನೆಲೆಯಲ್ಲಿ ಬರೆಯಲ್ಪಟ್ಟಿದೆ. ವ್ಯಾಸರಾಯ ನಿಂಜೂರರ 'ಉಸಿರು' ವೈದ್ಯವೃತ್ತಿಯ ಜೀವನದ ಪಡಿನೆಳಲು. ಇನ್ನೊಬ್ಬ ಹಿರಿಯ ವ್ಯಾಸರಾಯ ಬಲ್ಲಾಳರ 'ಉತ್ತರಾಯಣ'ದಂಥ ಪ್ರದೀರ್ಘ ಕಾದಂಬರಿ ಸೂಕ್ಷ್ಮ ಮಾನಸಿಕ ಯಾತನೆಗಳ ಸುಂದರ ಮೆರವಣಿಗೆಯಾಗಿ, ಈ ಸಮಯದ ಶ್ರೇಷ್ಠ ಕಾದಂಬರಿಗಳಲ್ಲಿ ಒಂದಾಗಿದೆ. ನಾ. ಡಿಸೋಜರ 'ಈ ನೆಲ, ಈ ಜಲ', ಹಾಗು ವಿ. ಎಂ. ಇನಾಂದಾರರ 'ಊರ್ವಶಿ' ಎಂ. ಕೆ. ಇಂದಿರಾರ 'ಕಲಾದರ್ಶಿ', ಮಿರ್ಜಿ ಅಣ್ಣಾರಾಯರ 'ಹದಗೆಟ್ಟ ಹಕ್ಕಿ' ಮಧ್ಯಮ ವರ್ಗದ ಚಿತ್ರಣಗಳು, ಕಲಾಜೀವನದ ವಸ್ತು ಆರಿಸಿಕೊಂಡಿವೆ. ನಾ. ಡಿಸೋಜರ 'ಕೆಂಪು ತ್ರಿಕೋಣ' ದ ವಸ್ತು ಸ್ವಯಂಸಿದ್ಧ.

ಪ್ರಾದೇಶಿಕ ಕಾದಂಬರಿಗಳಲ್ಲಿ ಎರಡು ದೊಡ್ಡ ಪ್ರಯೋಗಗಳನ್ನು ಈಗಾಗಲೆ ಹೆಸರಿಸಿಯಾಗಿದೆ. ಒಂದು ಪುಟ್ಟಪ್ಪನವರ 'ಮದುಮಗಳು', ಇನ್ನೊಂದು ಶೇಷನಾರಾಯಣರ 'ಎರಡು ಉಂಗುರ'. ಇದಲ್ಲದೆ ಭೈರಪ್ಪನವರ 'ಗೃಹಭಂಗ' ತಿಪಟೂರ ಚೆನ್ನರಾಯಪಟ್ಟಣಗಳಿಗೆ ಹೊಸ ಜೀವ ತುಂಬಿ ಕನ್ನಡ ಓದುಗರಿಗೆ ಈ ಊರುಗಳನ್ನು ಸಂಕೇತಗಳನ್ನಾಗಿ ಮಾಡಿದೆ. ಶೇಷನಾರಾಯಣರು ಕೊಡಗು–ಕೇರಳಗಳ ಗಡಿಯ ಮೇಲೆ ಬದುಕುವ ಸೋಲಿಗರನ್ನು ಜೀವಂತಗೊಳಿಸಿದ್ದಾರೆ. ಈ ವಿಷಯದಲ್ಲಿ ಈ ಮೊದಲೆ ಕೆಲಸ ಮಾಡಿದ ಭಾರತೀಸುತರು ಈ ಸಮಯದಲ್ಲಿ ಎರಡು ಕಾದಂಬರಿ ಪ್ರಕಟಿಸಿರುವರು. ಅವು

'ಸಂತಾನಭಿಕ್ಷೆ' ಹಾಗು 'ಮಂಸದನ್ನೆ ಮಾಲತಿ'. ಮಧ್ಯಮ ವರ್ಗದ ಚಿತ್ರಗಳು. ಈ ಸಂದರ್ಭದಲ್ಲಿ ಇನ್ನೊಂದು ಕಾದಂಬರಿ ನೆನೆಸಬಹುದು. ಕೊಟ್ಟೂಲಗಿ ರಾಮಚಂದ್ರರ 'ದೀಪ ಹತ್ತಿತು' ಭಾಗ ೨. ಬಲ್ಲಾಳರ 'ಉತ್ತರಾಯಣ' ಸಂಸ್ಕೃತಿಯು ಪೂರ್ವವಾದರೆ 'ದೀಪ ಹತ್ತಿತು' ಪಶ್ಚಿಮವೆಂದು ಹೇಳಬೇಕು. ಭಾಷೆ, ವಿನಿಮಯ (Communication), ಅನುಭವ, ಪಕ್ವತೆ, ಇವುಗಳ ಸೂರ್ಯ ಮುಳುಗಿ ದೀಪ ಹಚ್ಚಿದ ಮೇಲೆಯೇ ಈ ಕಾದಂಬರಿ ಓದ ಬೇಕು. ನಗಬೇಕೆನ್ನುವವರಿಗೆ ಇಲ್ಲಿ ಹಾಸ್ಯದ ಮಾದರಿ: "ದಾದರ್‍ಯಾ ಅವಿಶ್ವಾಸೀ ಇದ್ದಾನ, ಅರಗಚ್ಚಿ ಸತ್ಯಕಥನ ಮಾಡತಾನ. ಪೂಜಿ-ಪ್ರನಸ್ಕಾರದ ನೆವದಿಂದ, ಪಾಂಡವದ್ಯುಮಣಿ ಪಾರ್ಥ ಆಗಿ, ಸುಭದ್ರಾನ್ನ ಹರಣಮಾಡತಾನ, ವ್ಯರ್ಥ ಆಕಿನ್ನ ಉತ್ಕಂಠಿತಾ ಅಭಿಸಾರಿಕಾನ್ನ ಮಾಡತಾನ. ವಿರಹಜ್ವರಪೀಡಿತಾನ್ನ ಮಾಡತಾನ.... ಈಗಾಗಲೆ ನಾವು ಗಲಿತಾವಸಾನರಾಗಿದ್ದೆವು" ಇತ್ಯಾದಿ ಒಳಕೆಯ ಮಾತು ಗಳು ಸತ್ವಪೂರ್ಣವಾಗಿರುತ್ತವೆಯೆಂಬ ನವ್ಯರ ಸೂತ್ರವನ್ನು ಸತ್ಯವೆಂದೇ ನಂಬಿ ಒಬ್ಬ ಒಳ್ಳೆಯ ಕಾದಂಬರಿಕಾರ ಹಾದಿ ತಪ್ಪಿಸಿಕೊಂಡ ಉದಾಹರಣೆ ಇದು. ಕನ್ನಡದ ಒಳ್ಳೆಯ ಶೈಲಿಯನ್ನು ನಾವು ವಿಶುಕುಮಾರ, ಸ. ನಾರಾಯಣ (ನೆನಪು ನೆರಳು), ಭಾರತೀಸುತ (ಹುಲಿಯ ಹಾವಿನ ಮೋವು), ಶೇಷನಾರಾಯಣ (ಬೆಳಗಾಯಿತು), ಮಲ್ಲರಾಜ ಅರಸು (ನುಡಿಯೇ ದೇವರ ಪೂಜೆ), ಕುಮಾರ-ತನಯ (ವಿಷಕನ್ಯೆ), ಎಂ. ಕೆ. ಸೀತಾರಾಮಯ್ಯ (ಸನ್ಯಾಸಿ), ಇಂಥವರಲ್ಲಿ ನೋಡಬಹುದು.

ಕನ್ನಡದ ನಿಸರ್ಗಳ ನಿರೂಪಣೆ ಶೈಲಿಯಲ್ಲಿ ಮಹಿಳೆಯರು ಎತ್ತಿದ ಕೈ. ಕನ್ನಡ ಮಹಿಳೆಯರ ಬಗ್ಗೆ ಯಾರಾದರೂ ಅಭಿಮಾನ ಪಡಬಹುದು. ಎಂ. ಕೆ. ಇಂದಿರಾ ಒಬ್ಬರೆ ಈ ೩ ವರ್ಷಗಳಲ್ಲಿ ಒಂಬತ್ತು ಕಾದಂಬರಿ ಪ್ರಕಟಿಸಿದ್ದಾರೆ. ಅವೆಲ್ಲ ತಮ್ಮ ರೀತಿಯಲ್ಲಿ ಯಶಸ್ವಿಯಾಗಿ ಓದಲರ್ಹವಾಗಿವೆ (ಅಂಬರದ ಅಪ್ಸರೆ; ಗಿರಿಬಾಲೆ: ಗೆಜ್ಜೆ ಪೂಜೆ; ಟುಲೆಟ್: ಡಾಕ್ಟರ್; ಶಾಪದಿಂದ ತಂಪಿಗೆ; ನಾಗಪೀಶಾ; ಮನತುಂಬಿದ ಮಡದಿ: ಕಲಾದರ್ಶಿ; ಇತ್ಯಾದಿ). ಶೈಲಿಯ ಸೂಕ್ಷ್ಮತೆ ಯನ್ನು ಇನ್ನೂ ಮುಂದೆ ಒಯ್ದು ಕನ್ನಡ ವೈದರ್ಭಿಯರಾದವರು ಅನುಪಮಾ ನಿರಂಜನ, ಇವರು ಬರೆಯುವ ಕನ್ನಡ ಕಿವಿಯಲ್ಲಿ ಜೇನು. ಇವರಾದರೂ

ವೈದಿಕೀಯ ಜೀವನಕ್ಕೆ ಸಂಬಂಧಪಟ್ಟ ನಾಲ್ಕು ಕಾದಂಬರಿಗಳನ್ನು ಕೊಟ್ಟಿದ್ದಾರೆ. ಇದಲ್ಲದೆ ಆರ್ಯಾಂಬ ಪಟ್ಟಾಭಿ, ಸಾವಿತ್ರಿದೇವಿ ನಾಯ್ಡು (ವಿರಾಗಿಣಿ), ನೀಳಾದೇವಿ (ದುಂಬಿ ತೊರೆಯಾಸೆ), ಸರೋಜರಾವ (ಕುಂಕುಮ ಬಲ), ಎನ್. ಶಾಂತಾ (ವಸಂತ ಗೀತ), ವಾಣಿ, ಜಯಲಕ್ಷ್ಮಿ, ಪಂಕಜಾ (ಕಾವೇರಿಯ ಆರ್ತರವ), ಮಲ್ಲಿಕಾ (ಡಾಕ್ಟರ್ ಅಘೋರ) ಮುಂತಾದವರು ಯಶಸ್ವಿ ಕಾದಂಬರಿ ರಚಿಸುವದಲ್ಲದೆ, ಇವರಲ್ಲಿ ಹಲವರ ಕೃತಿಗಳು ಸಿನೇಮ ಕೂಡ ಆಗಿರುವವು.

ಒಂದೆರಡೇ ಸಾಮಾನ್ಯ ಮಾತುಗಳನ್ನು ಹೇಳಿ ಈ ಲೇಖ ಮುಗಿಸಬೇಕು. ನವ್ಯರೇಕೆ ಕಾದಂಬರಿ ರಚಿಸುತ್ತಿಲ್ಲ? ಎಲ್ಲ ನವ್ಯ ಕವಿಗಳೂ ಒಂದೊಂದು ಕಾದಂಬರಿ ರಚಿಸಿದರೆ, ಅವರ ಕಾವ್ಯಕ್ಕೆ ಬೇಕಾಗುವ ಔಷಧಿ ಅಲ್ಲಿಯೇ ದೊರಕುವದು. ಹಿರಿಯ ಲೇಖಕರೇಕೆ ಮೌನ ತಾಳಿದ್ದಾರೆ? ಅ. ನ. ಕೃ. ಒಂದೇ ಬರೆದದ್ದು (ಅದೃಷ್ಟ ನಕ್ಷತ್ರ); ಅವರ ಪ್ರಗತಿಶೀಲ ಸಂಗಡಿಗರೆಲ್ಲ ಮೌನ ತಾಳಿದ್ದೇಕೆ? ಮಾಸ್ತಿ ಏಕೆ ಬರೆಯುತ್ತಿಲ್ಲ? ರಾವ ಬಹದ್ದೂರ ಬರೆದ ಪ್ರೈಜ ಕಾದಂಬರಿ ಪುಸ್ತಕ ರೂಪವಾಗಿ ಏಕೆ ಪ್ರಕಟಗೊಂಡಿಲ್ಲ? ಕುಸುಮಾಕರರು ಏನು ಮಾಡುತ್ತಿದ್ದಾರೆ? ಮುಗಳಿಯವರ 'ಕಾರಣಪುರುಷ' ಪುನರ್ಮುದ್ರಿತವಾಯಿತು. ಹ. ಪಿ. ಜೋಶಿವರ 'ಮಾವಿನ ತೋಪು', ದೇವುಡುರ 'ಅಂತರಂಗ', ವರಗಿರಿಯವರ 'ಗಂಗಾಸಾನಿ', ಅಡಿಗರ 'ಅನಾಥೆ' ಪುನರ್ಮುದ್ರಣ ಯಾವಾಗ? ಪುನರ್ಮುದ್ರಣವಾದರೆ ಖರ್ಚಾಗದೇ ಇರುವ ಕಾದಂಬರಿಗಳಲ್ಲ ಇವು. ಕನ್ನಡ ಕಾದಂಬರಿಯ ಒಂದು ಸುಗ್ಗಿ ಮುಗಿದು ಇನ್ನೊಂದು ಸುಗ್ಗಿ ಒದಗಿದೆ. ಈ ಹೊಸ ಹುಲುಸಿನಲ್ಲಿ ಹಳೆಯದರಲ್ಲಿ ಉಳಿಯಬೇಕಾದುದನ್ನು ಉಳಿಸಿಕೊಳ್ಳುವ ಕೆಲಸವು ಆಗುವದೂ ಅವಶ್ಯ. ಅಂದರೇನೇ ನಮ್ಮ ಹೊಸ ಪ್ರಯೋಗಗಳಿಗೆ ಪರಂಪರೆಯ ಸಾಮರ್ಥ್ಯ ಒದಗುವದು.

ಸಿದ್ಧಲಿಂಗ ಪಟ್ಟಣಶೆಟ್ಟಿ

ಎರಡು ಕವನಗಳು

೧

ದಿನಾ ಬೆಳಿಗ್ಗೆ ಬೇಗನೆ ಎದ್ದು
ಕಣ್ಣಸಂಗಡಿ ಬಾಗಿಲು ತೆರೆಯುತ್ತೇನೆ.
ಕಸಗುಡಿಸಿ, ನೀರು ಸಿಂಪಡಿಸಿ
ಇದ್ದುಬಿದ್ದ ಮುರುಕು ಡಬ್ಬಿಗಳನ್ನೇ ಹೊಂದಿಸಿಟ್ಟು
ಗಿರಾಕಿಗಳಿಗೆ ಕಾಯುತ್ತೇನೆ.
ತರತರದ ಮಂದಿ ಬರುತ್ತಾರೆ ಹೋಗುತ್ತಾರೆ
ಬೇಕಾದ್ದು ನನ್ನ ಅಂಗಡಿಯಲ್ಲಿ ಇದ್ದದ್ದು ಒಯ್ಯುತ್ತಾರೆ.

ಮಧ್ಯಾಹ್ನ ಮೃತ್ಯುವನ್ನುಣ್ಣುತ್ತೇನೆ
ಸಂಜೆ ಮುಪ್ಪಿನ ತೂಕ ಮಾಡುತ್ತೇನೆ
ರಾತ್ರಿ
ಅಂಗಡಿ ಮುಚ್ಚುವಾಗ
ನೀರು ಕುಡಿದು ಲಾಭ ಎಣಿಸುತ್ತೇನೆ.
ಇಷ್ಟು ದಿನಗಳ ಲೆಕ್ಕ ಕಿರ್ದಿಯಲಿ ಬರೆದಿರುವೆ
ದೀಪಾವಳಿಯು ತನಕ ಈ ಲೆಕ್ಕ ಹನುಮನ ಬಾಲ.
ಕಡೆಗೆ ಬೇರೀಜು ವಜಾಬಾಕಿ ಮಾಡಿದರೆ
ನನಗೆ ಸಿಕ್ಕುವ—
ದಕ್ಕುವ ಲಾಭ :

ಅಲ್ಲೊಂದು ಇಲ್ಲೊಂದು ರದ್ದಿಯಲಿ ಬಂದಿದ್ದ
ಚೆಂದ ಪತ್ರ, ಹೆಂಡತಿ ನಕ್ಕು
ಸುಖದಿಂದ ನನ್ನನ್ನು ಮಲಗಬಿಟ್ಟದ್ದು,
ಸಂಜೆ ಸಿತಾರದ ದನಿ ಕೇಳಬೇಕೆಂದು ಹಂಬಲಿಸಿದ್ದು,
ವಿದ್ಯಾರ್ಥಿಗಳ ಕಣ್ಣು ಮಿಂಚಿದ್ದು, ಮಗಳು
ತನ್ನಷ್ಟಕ್ಕೆ ನನ್ನೆದುರು ಆಡಿದ್ದು ಆ
ಹುಡುಗಿ ನನಗಾಗಿ ಕಾದಿದ್ದು
ನೆನಪಾಗಿ ಮೈತುಂಬ ಕಣ್ಣು
ರೆಪ್ಪೆ ಬಾಗಿಲ ಘಡಕು ಮುಚ್ಚಿ ಮಲಗುತ್ತೇನೆ.

೨

ಈ ನೋಟ್‌ಬುಕ್ಕಿನಷ್ಟೇ ಖಾಲಿಯಾಗಿದೆ ತಲೆ. ಇದು ಶಾಪವೋ ಯಾವುದೋ ಬರುವುದರ ನಿಃಶಬ್ದ ನಿರ್ಜನ ನಿರ್ವಾತ ಆವರಣ ಸಿದ್ಧವಾಗುತ್ತಿದೆಯೋ. ಕವಿತೆ.... ಕೈಯಲ್ಲಿ ಪೆನ್ ಬರುವಷ್ಟರಲ್ಲಿ ಕವನ ಪವನ. ನಾಟಕ ?— ಇಷ್ಟು ದಿನ ನಿತ್ಯ ನಾಟಕ ಮಾಡಿ ಸೋತಿದ್ದೇನೆ. ಕತೆ ? ನನ್ನ ನಿಟ್ಟುಸಿರ ಮರ್ಮ ತಿಳಿದವರು ನಾನು ಕತೆಯೆಂದು ಉಸುರಿದ್ದಾರೆ....

ಈ ಹಾಳು ಹುಡುಗರಿಗೆ ಕಲಿಸಿ ತಿಳಿಸಿ ತಿಳಿತಿಳಿಯಾಗಿದ್ದೇನೆ. ಅವರಿವರ ಮಾತುಗಳಿಗರ್ಥ ಹಚ್ಚಿ ಅವರಿವರ ಸಿಂಗಾರ ಮಾಡುವ ನಾನೇ ಸತ್ತಾಗ ನಾನು ಉಳಿದವರನ್ನು ಹೊತ್ತಂತೇ ನನ್ನ ಹೆಣ ಒಯ್ಯಬಹುದೇ ಯಾರಾದರೂ ?

ನಾ ಬರಬರುತ್ತ ಈ ಪುಸ್ತಕದ ತುಂಬ ಕ್ಲಾಸಿನಲಿ ಮನೆಯ ಮೂಲೆ ಮೂಲೆಯಲಿ ಉಸುರ ದಾರಿಯುಗುಂಟ ಹೆಡೆಮುಚ್ಚಿ ಬಿದ್ದಿರುವ ಉತ್ತರಾಭಿಮುಖ ಪ್ರಶ್ನೆ....

SANKRAMANA
CREATIVE AND
CRITICAL WRITINGS
IN KANNADA



ಸಂಕ್ರಮಣ
ರಚನಾತ್ಮಕ ಹಾಗೂ
ವಿಮರ್ಶಾ ಲೇಖನಗಳು